
# ಅಪರಂಜಿ

ತಿಳಿನಗೆಯ ಕಾರಂಜಿ

ಜೂನ್ 2017




''ಈ ಮೋಂಬತ್ತಿ ಯಾವಾಗ ಆರುತ್ತೆ ಅಂತ ಹೇಳಬಹುದು. ಆದರೆ ಕರೆಂಟ್ ಯಾವಾಗ ಬರುತ್ತೆ ಅಂತ ಹೇಳಲು ಸಾಧ್ಯವಿಲ್ಲ''

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್



**ಚಂದಾ ವಿವರ:**
**ಬಿಡಿಪ್ರತಿ: ರೂ.10/-**
**ವಾರ್ಷಿಕ ಚಂದಾ: ರೂ.100/-**
**ಹತ್ತು ವರ್ಷದ ಚಂದಾ: ರೂ.750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ




# ಅಪರಂಜಿ

ತಿಳಿನಗೆಯ ಕಾರಂಜಿ


ಸಂಪುಟ 34
ಸಂಚಿಕೆ - 8
ಜೂನ್ - 2017


## ಈ ಸಂಚಿಕೆಯಲ್ಲಿ .....


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಭಾಸನ ಕಿಸೆಗೆ ಪಂಪ... | **ಎಸ್.ಆರ್. ವಿಜಯಶಂಕರ್** | 6 |
| ಸೆವೆನ್ ಸ್ಟಾರ್ ಆಸ್ಪತ್ರೆ | **ಸಿ.ಆರ್. ಸತ್ಯ** | 10 |
| ಮುದಿಗಳ ಕಾಟ.... | **ಎಚ್. ಗೋಪಾಲಕೃಷ್ಣ** | 13 |
| ದಿಗ್ಗಜರ ಜೀವನದ..... | **ಸುಕೇಶವ** | 16 |
| ಪಂಚ್ ಪದ್ಯಗಳು | **ಎಚ್. ಡುಂಡಿರಾಜ್** | 18 |
| ಸಂಜೆಹೊತ್ತ್ಗೆ ಸೀರೆ... | **ಎಚ್.ಆರ್. ಹನುಮಂತ ರಾವ್** | 19 |
| ಕುದುರೆಯ ಕಳಕಳಿ | **ನಂನಾಗ್ರಾಜ್** | 23 |
| ಅನುಭವ ನೋಡಿದ..... | **ರೇಖಾ ಹೆಗಡೆ ಬಾಳೆಸರ** | 26 |
| ತುಂತುರು | **ದಂನಾಆ** | 30 |
| ಸೀತಾಪತಿಯ ಕೀಳರಿಮೆ | **ಪಾಲಹಳ್ಳಿ ವಿಶ್ವನಾಥ್** | 31 |
| ವ್ಯಂಗ್ಯ ಮೆಲುಕು | **ಪ್ರಕಾಶ್ ಶೆಟ್ಟಿ** | 37 |
| ಹುಡುಕಾಟದ ಸೊಬಗು | **ಬೇಲೂರು ರಾಮಮೂರ್ತಿ** | 38 |


**ಮುಖಪುಟ ವ್ಯಂಗ್ಯಚಿತ್ರ - ಜಿ.ಎಸ್. ನಾಗನಾಥ್**


ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003. email: koravanji42@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

## ಅಪರಂಜಿ ಕಿಡಿ

● ಪ್ರಕಾಶ್



ರಾಯಲ್ ಛಾಲೆಂಜರ್ಸ್ ಸತತ ಸೋಲಿನಿಂದಲೇ ಮಲ್ಯ ಅವರು ದೇಶಕ್ಕೆ ವಾಪಸ್ ಬರುವುದಿಲ್ಲವಂತೆ!!

★★★

ಕಾನೂನು ಪಾಲನೆಗೆ ಪಟ್ಟು : ಅಧಿಕಾರಿ ಅಮಾನತು! – ಸುದ್ದಿ

*● ಅಕ್ರಮ-ಸಕ್ರಮ ಎಂದರೆ ಇದೇ ಇರಬಹುದು !!*

★★★

''ಡಬ್ಬಿಂಗ್'' ನಿಂದ ಅನುಕೂಲ – ಹೇಳಿಕೆ

*● ಅರಣ್ಯರೋದನ ಎಂದರೆ ಇದೇ !!*

★★★

ಎಚ್ಚರಿಕೆಗೆ ಮೆತ್ತಗಾದ ಈಶ್ವರಪ್ಪ – ಪತ್ರಿಕೆ

*● ಕೇಂದ್ರದ ಹಣೆಗಣ್ಣು ತೆರೆದಂತಿದೆ !!*

★★★

ವಾಸ್ತುಶಿಲ್ಪ ಕಲಿಕೆಗೆ ವಿಶ್ವವಿದ್ಯಾಲಯ ಕಲ್ಪಿಸಿ – ಹೇಳಿಕೆ

*● ವಾಸ್ತು ನೋಡಿ ಮಾಡಿದರೆ ಒಳ್ಳೆಯದು !!*

★★★

ಕಾಶಿಯಲ್ಲೂ ಜಾತಿ ಹೆಸರಿನಲ್ಲಿ ಮತ ಯಾಚನೆ – ಪತ್ರಿಕೆ

*● ವಿಶ್ವೇಶ್ವರಾ !!*

★★★

ಅತಿರೇಕ ನಮ್ಮ ಯುಗ ಧರ್ಮವೇ? – ಪತ್ರಿಕೆ

*● ಹಾ! ಯಾರು ಹೀಗೆ ಕೇಳೋದು ??*

★★★

ಬ್ಯಾಂಕ್ ನಗದು ವಹಿವಾಟಿಗೆ ಶುಲ್ಕ ಅಪಕ್ವ ನಿರ್ಧಾರ
– ಸಂಪಾದಕೀಯ

*● ನಮಗೂ ಹಾಗೇ ಅನ್ನಿಸುತ್ತೆ !!*

★★★

## "ನಮ್ಮ ನಿಮ್ಮಲ್ಲಿ"

**ಮೊ**ನ್ನೆ ನನ್ನ ಪುಸ್ತಕದ ಕಪಾಟಿನಲ್ಲಿ ಕೈಯ್ಯಾಡಿಸುತ್ತಿದ್ದಾಗ, ರಾಬರ್ಟ್ ಆರ್ಡ್ರೇ ಬರೆದ ''ಆಫ್ರಿಕನ್ ಜೆನೆಸಿಸ್'' ಎಂಬ ಪುಸ್ತಕ ಕಣ್ಣಿಗೆ ಬಿತ್ತು. ಅರವತ್ತರ ದಶಕದ ಆದಿ ಭಾಗದಲ್ಲಿ ಪ್ರಕಟವಾದ ಪುಸ್ತಕ ಇದು. ಆಗತಾನೆ ನಾನು ನನ್ನ ವೃತ್ತಿಜೀವನವನ್ನು ಪ್ರಾರಂಭಿಸಿದ್ದ ದಿನಗಳವು. ನಮ್ಮ ತಂದೆ ಈ ಪುಸ್ತಕವನ್ನು ಬಹುವಾಗಿ ಮೆಚ್ಚಿಕೊಂಡು ನನಗೆ ಓದಲು ತಾಕೀತು ಮಾಡಿದ್ದರು. ಪುಸ್ತಕವನ್ನು ನೋಡಿದ ತಕ್ಷಣ ಅದನ್ನು ಮೊದಲು ಓದಿದಾಗ ಅನುಭವಿಸಿದ ಕೌತುಕ, ಆಶ್ಚರ್ಯ ಸಂಭ್ರಮಗಳು ನೆನಪಿಗೆ ಬಂದವು.

ರಾಬರ್ಟ್ ಆರ್ಡ್ರೇ ದಕ್ಷಿಣ ಆಫ್ರಿಕ ಮೂಲದವನು. ವೃತ್ತಿಯಲ್ಲಿ ನಾಟಕಕಾರನಾದರೂ ಬರುಬರುತ್ತಾ ಈತನ ಆಸಕ್ತಿ ಮಾನವನ ವಿಕಾಸದ ಹಾದಿಯನ್ನು ಅಧ್ಯಯನ ಮಾಡುವ ದಿಕ್ಕಿನಲ್ಲಿ ಬೆಳೆಯಿತು. ಅನೇಕ ವರ್ಷಗಳು ಖ್ಯಾತ ವಿಕಾಸವಾದ ತಜ್ಞರೊಂದಿಗಿನ ಒಡನಾಟದ ನಂತರ ಇವನು ಮಂಗಗಳ ಹಂತದಿಂದ ಮಾನವನ ಉಗಮದ ಬಗ್ಗೆ ತನ್ನದೇ ಆದ ದೃಷ್ಟಿಕೋನವನ್ನು ದಾಖಲಿಸಿ ಬರೆದ ಪುಸ್ತಕ ಆಫ್ರಿಕನ್ ಜೆನೆಸಿಸ್. ನಾಟಕಕಾರ ಬರೆದ ಪುಸ್ತಕವೆಂದಮೇಲೆ ಕೇಳಬೇಕೆ? ಪುಸ್ತಕದಲ್ಲಿನ ಅಧ್ಯಾಯಗಳು, ವೇದಿಕೆಯ ಮೇಲೆ ನಾಟಕದ ದೃಶ್ಯಗಳು ತೆರೆದುಕೊಳ್ಳುವಂತೆ ಬಹು ಸ್ವಾರಸ್ಯವಾಗಿ ಮೂಡಿಬರುತ್ತವೆ. ಕೇವಲ ಎಲೆ, ಹಣ್ಣುಗಳು, ಕೀಟಗಳನ್ನು ತಿಂದು ಬದುಕುತ್ತಿದ್ದ ಚಿಂಪಾಂಜಿಯ ತೆರನಾದ ಮಂಗಗಳಿಂದ ಮಾನವನಂತಹ ಪ್ರಾಣಿಗಳ ಉಗಮ ಅಸಾಧ್ಯ. ಇಂತಹ ಸಸ್ಯಾಹಾರಿ ಮಂಗಗಳಿಂದ ಒಂದು ಶಾಖೆ ಕವಲೊಡೆದು ಕಲ್ಲಿನ ಆಯುಧಗಳನ್ನು ಕಂಡುಹಿಡಿದು, ಅವುಗಳನ್ನು ಬಳಸಿ ಪ್ರಾಣಿಗಳನ್ನು ಬೇಟೆಯಾಡಿ ಜೀವನ ಸಂಗ್ರಾಮದಲ್ಲಿ ಯಶಸ್ಸನ್ನು ಕಂಡ ಮಾಂಸಾಹಾರಿ ಮಂಗಗಳ ಶಾಖೆ ನಮ್ಮ ಪೂರ್ವಜರು ಎಂದು ಆರ್ಡ್ರೇ ಈ ಪುಸ್ತಕದಲ್ಲಿ ವಾದಿಸುತ್ತಾನೆ. ಪ್ರಾರಂಭದ ಅಧ್ಯಾಯವೊಂದರಲ್ಲಿ ಕೀಟಗಳ ವಿಕಾಸದ ಪ್ರಸ್ತಾಪ ಬರುತ್ತದೆ. ಇದರ ಬಗ್ಗೆ ಅವನ ಮಾತಿನಲ್ಲೇ ಕೇಳಿ.

''ಕೀನ್ಯಾ ಪ್ರದೇಶದಲ್ಲಿ, ನೊಣವನ್ನು ಹೋಲುವ ಕೀಟವೊಂದು ಕಂಡುಬರುತ್ತದೆ. ಸ್ಥಳೀಕರು ಇದನ್ನು ಫ್ಲಾಟಿಡ್ ಬಗ್ ಎಂದು ಕರೆಯುತ್ತಾರೆ. ನಾನು ನೈರೋಬಿಯಲ್ಲಿದ್ದಾಗ ಖ್ಯಾತನಾಮರಾದ ಡಾಕ್ಟರ್ ಲೀಕಿ ಇದನ್ನು ನನಗೆ ಪರಿಚಯಿಸಿದ್ದರು. ನಿಖರವಾಗಿ ಹೇಳಬೇಕೆಂದರೆ ಅವರು ನನಗೆ ಹವಳದ ಬಣ್ಣದ ಹೂವುಗಳ ಗೊಂಚಲೊಂದನ್ನು ಪರಿಚಯಿಸಿದರು. ಈ ಗೊಂಚಲಿನ ಪ್ರತಿಯೊಂದು ಮೊಗ್ಗುಗಳೂ ಒಂದು ಸೆಂಟಿಮೀಟರಿನಷ್ಟು ನೀಳವಾಗಿದ್ದವು. ಹತ್ತಿರದಿಂದ ನೋಡಿದಾಗ ಈ ಹವಳದ ಬಣ್ಣದ ತೆಳು ಹಾಳೆಗಳು ಒಂದು ಫ್ಲಾಟಿಡ್ ನೊಣದ ರೆಕ್ಕೆಗಳಾಗಿದ್ದವು. ಒಂದು ಒಣಗಿದ ಮರದ ಟೊಂಗೆಗೆ ಅಂಟಿದಂತಿದ್ದ ಈ ನೊಣಗಳ ಗುಂಪು ಒಂದು ಸುಂದರ ಹೂ ಗೊಂಚಲ ರೂಪದಲ್ಲಿ ಕುಳಿತಿದ್ದವು. ಇಂತಹ ಕೀಟಗಳ ಹೂವನ್ನು ಹಿಂದೆ ನಾನೆಂದೂ ನೋಡಿರಲಿಲ್ಲ.

ಸುತ್ತಲಿನ ಪರಿಸರಕ್ಕೆ ಹೊಂದಿಕೊಳ್ಳುವ ಅನೇಕ ಕೀಟಗಳು ಪ್ರಕೃತಿಯಲ್ಲಿ ಕಾಣಸಿಗುತ್ತವೆ. ಒಣಗಿದ ಕಡ್ಡಿಯಂತೆ ಕಾಣುವ ಕಡ್ಡಿಕೀಟ ತನ್ನ ಕಡ್ಡಿಯಂತಹ ದೇಹದ ಮೇಲೆ ಮುಳ್ಳುಗಳನ್ನೂ ರೂಢಿಸಿಕೊಂಡಿರುತ್ತದೆ. ಒಂದು ಜಾತಿಯ ಮಾತ್‌ಗಳು ಹಕ್ಕಿಗಳಿಗೆ ಇಷ್ಟವಾಗದ, ಕಹಿಯಾಗಿರುವ ಎಲೆಗಳ ವಿನ್ಯಾಸವನ್ನು ತಮ್ಮ ರೆಕ್ಕೆಗಳ ಮೇಲೆ ರೂಪಿಸಿಕೊಂಡು ಪ್ರಾಣರಕ್ಷಣೆ ಮಾಡಿಕೊಳ್ಳುತ್ತವೆ. ಇದನ್ನೆಲ್ಲಾ ನಾನು ಲೀಕಿಯವರಿಗೆ ಹೇಳಿದೆ.

ಅವರು ಮುಗುಳ್ನಗೆ ನಕ್ಕು, ಈ ಫ್ಲಾಟಿಡ್ ನೊಣಗಳು ಸೃಷ್ಟಿಸಿದ ಹವಳದ ಹೂವು ಪ್ರಕೃತಿಯಲ್ಲಿ ಕಾಣಸಿಗುವುದಿಲ್ಲ. ಈ ಹೂವಿನ ರೂಪ ಮತ್ತು ಆಕಾರ ಈ ನೊಣಗಳ ಸ್ವಂತ ಸೃಷ್ಟಿ ಅಂತ ಹೇಳಿದರು. ಆಶ್ಚರ್ಯದಿಂದ ನನಗೆ ಮಾತೇ ಹೊರಡದಾಯಿತು.

ನಾನು ಈ ಹೂವನ್ನು ದೃಷ್ಟಿಸಿ ನೋಡಿದೆ. ಹೂವಿನ ಮಧ್ಯೆ ಕೇಂದ್ರಭಾಗದಲ್ಲಿ ಒಂದು ಹಸಿರು ರೆಕ್ಕೆಗಳ ನೊಣ ಕುಳಿತಿತ್ತು. ಅದರ ಸುತ್ತ ಮೂರು ನಾಲ್ಕು ಸುತ್ತುಗಳಲ್ಲಿ ತೆಳು ಹಸಿರಿನ ಪಾರದರ್ಶಕ ರೆಕ್ಕೆಗಳ ನೊಣಗಳಿದ್ದವು. ಮಿಕ್ಕ ಸುತ್ತಲಿನ ನೊಣಗಳ ರೆಕ್ಕೆಗಳು ಹವಳದ ಬಣ್ಣವನ್ನು ಹೊಂದಿದ್ದು ಹೂವಿಗೆ ವೃತ್ತಾಕಾರವನ್ನು ಒದಗಿಸಿದ್ದವು.

ಕೀಟಗಳ ವಿಕಾಸದ ವೈಚಿತ್ರ್ಯ ನಮಗೆ ಇದಿರಾದಾಗ ಮೈಯೆಲ್ಲಾ ಜುಂ ಎನ್ನುವಂತಾಗುತ್ತದೆ. ನನ್ನ ಆಶ್ಚರ್ಯ ಇನ್ನೂ ತನ್ನ ಪರಮಾವಧಿಯನ್ನು ಮುಟ್ಟಿರಲಿಲ್ಲ. ಲೀಕಿ ಒಂದು ಕಡ್ಡಿಯನ್ನು ತೆಗೆದುಕೊಂಡು ಆ ಹೂವಿನಂತೆ ಕುಳಿತಿದ್ದ ನೊಣಗಳನ್ನು ಚದುರಿಸಿದರು. ಎಲ್ಲ ನೊಣಗಳೂ ಗಾಳಿಯಲ್ಲಿ ಹಾರಾಡಲು ಪ್ರಾರಂಭಿಸಿದವು. ಒಣಗಿದ ಮರದ ಟೊಂಗೆ ನೆಲದ ಮೇಲೆ ಬಿದ್ದಿತ್ತು.

ನಾವಿಬ್ಬರೂ ನೋಡುತ್ತಿದ್ದಂತೆ ನಿಧಾನವಾಗಿ ಈ ಫ್ಲಾಟಿಡ್ ನೊಣಗಳು ಆ ಬೋಳು ಕಡ್ಡಿಯ ಮೇಲೆ ಕುಳಿತುಕೊಳ್ಳಲು ಪ್ರಾರಂಭಿಸಿದವು. ಮೊದಮೊದಲಿಗೆ ಅದೊಂದು ನೊಣಗಳ ದೊಂಬಿಯಂತೆ ಕಾಣುತ್ತಿತ್ತು. ಅವು ಕುಳಿತುಕೊಳ್ಳುವಾಗ ಯಾವ ಕ್ರಮವನ್ನು ಅನುಸರಿಸುತ್ತಿರಲಿಲ್ಲ. ಎಲ್ಲ ಕುಳಿತ ನಂತರ ಒಂದರ ಮೇಲೆ ಇನ್ನೊಂದು ಹತ್ತಿ, ಇಳಿದು ಚಲಿಸಲು ಪ್ರಾರಂಭಿಸಿದವು. ಕೊನೆಗೊಮ್ಮೆ ಈ ಚಲನೆ ನಿಂತಿತು. ಹಸಿರು ರೆಕ್ಕೆಗಳ ನೊಣ ಕೇಂದ್ರದಲ್ಲಿ ಕುಳಿತಿತ್ತು. ಅದರ ಸುತ್ತಲಿನ ತೆಳು ಹಸಿರು ವೃತ್ತಗಳ ಮತ್ತು ಅವುಗಳನ್ನು ಸುತ್ತುವರಿದ ಹವಳದ ಬಣ್ಣದ, ಪ್ರಕೃತಿಯಲ್ಲಿ ಕಾಣಸಿಗದ ಸುಂದರ ಹೂವೊಂದು ನಮ್ಮ ಕಣ್ಣಮುಂದೆಯೇ ಸೃಷ್ಟಿಯಾಯಿತು.

ಮುಂದೊಮ್ಮೆ ಹಲವು ವಿಜ್ಞಾನಿಗಳೊಂದಿಗೆ ನಾನು ಆಫ್ರಿಕನ್ ಕಾಡೊಂದರಲ್ಲಿ ಕ್ಯಾಂಪ್ ಫೈರ್ ಸುತ್ತ ಕುಳಿತಿದ್ದೆ. ಅಲ್ಲಿ ಖ್ಯಾತ ಪ್ರಾಣಿಶಾಸ್ತ್ರಜ್ಞ ಬ್ರಯಾನ್ ಕೂಡ ಇದ್ದ. ಮಧ್ಯರಾತ್ರಿ ಆಗುತ್ತಾ ಬಂದಿತ್ತು. ಸುತ್ತ ಕುಳಿತಿದ್ದವರಿಗೆ ನಾನು ಈ ಫ್ಲಾಟಿಡ್ ನೊಣದ ಬಗ್ಗೆ ವಿವರಿಸಿದೆ. ಎಲ್ಲವನ್ನು ಕೇಳಿಸಿಕೊಂಡ ಬ್ರಯಾನ್, ''ನಾವು ಎದುರಿಸಬೇಕಾದ ಸಂಗತಿಯೆಂದರೆ, ಕೀಟಗಳು ನಮಗಿಂತ ಮುನ್ನೂರು ಮಿಲಿಯನ್ ವರ್ಷಗಳಷ್ಟು ಹೆಚ್ಚು ಕಾಲ ವಿಕಾಸವಾಗುವ ಅವಕಾಶವನ್ನು ಪಡೆದಿವೆ'' ಎಂದ.

ಸಸ್ತನಿಗಳ ವಿಕಾಸದ ಅವಧಿ ನೂರು ಮಿಲಿಯನ್ ವರ್ಷಗಳೆಂದು ವಿಜ್ಞಾನಿಗಳ ಅಭಿಮತ. ಕೀಟಗಳು ನಾನ್ನೂರು ಮಿಲಿಯನ್ ವರ್ಷಗಳಷ್ಟು ದೀರ್ಘಕಾಲ ವಿಕಾಸದ ಹಾದಿಯಲ್ಲಿ ನಡೆದಿವೆ. ಒಂದು ಫ್ಲಾಟಿಡ್ ನೊಣದ, ಒಂದು ಜೇನು ಗುಂಪಿನ ಸಮಾಜವನ್ನು ಅಧ್ಯಯನ ಮಾಡುವಾಗ ಕಿರಿದಾದ ಕಾಲಾವಧಿಯಲ್ಲಿ ಹೆಚ್ಚು ಪ್ರಗತಿ ಸಾಧಿಸಿದ ಮಾನವ ಪ್ರಾಣಿ, ಕೀಟಗಳ ಸಮಾಜದ ಕೌತುಕಗಳನ್ನು ನೋಡುವ ದೃಷ್ಟಿ ಹೆಚ್ಚುಗಾರಿಕೆಯಿಂದ ಕೂಡಿರದೆ, ನಮಗಿಂತ ಬಹುವಾಗಿ ಹಿರಿಯದಾದ ಸಮಾಜವೊಂದನ್ನು ಅಧ್ಯಯನ ಮಾಡುವ ನಮ್ರತೆಯನ್ನು ಹೊಂದಿರುವುದು ಅಗತ್ಯ ಎನಿಸುತ್ತದೆ.’’

ಇದನ್ನು ಓದಿದ ಮೇಲೆ ಈ ಆರ್ಡ್ರೇ ಪುಸ್ತಕವನ್ನು ಓದಬೇಕೆಂದು ನಿಮಗೆ ಅನ್ನಿಸಿದರೆ ಇದು ಗೂಗಲ್‌ನಲ್ಲಿ ಬುಕ್ ರೂಪದಲ್ಲಿ ಫ್ರೀ ಡೌನ್‌ಲೋಡ್‌ಗೆ ಲಭ್ಯ ಎಂದು ತಿಳಿಸಬಯಸುವೆ.

**ಶಿವಕುಮಾರ್**

---

## ಕಾರ್ಟೂನ್ ವಾಚ್ ಹಾಗೂ ಸಿಎಸ್‌ಆರ್ ಸಂಸ್ಥೆ ಸಿಎಸ್‌ಆರ್ ಬಗೆಗೆ ನಡೆದ ರಾಷ್ಟ್ರಮಟ್ಟದ ವ್ಯಂಗ್ಯಚಿತ್ರ ಸ್ಪರ್ಧೆಯಲ್ಲಿ ಎರಡನೇ ಬಹುಮಾನ ಪಡೆದ ವ್ಯಂಗ್ಯ ಚಿತ್ರ ~ ಬಹುಮಾನಿತರು ಅಪರಂಜಿ ಬಳಗದ ವ್ಯಂಗ್ಯ ಚಿತ್ರಕಾರ ಶೃಂಗೇರಿ ರಘುಪತಿ. ಇವರಿಗೆ ನಮ್ಮ ಅಭಿನಂದನೆಗಳು



# ಭಾಸನ ಕಿಸೆಗೆ ಪಂಪ ಕೈ ಹಾಕಿದ್ದಾ?

**- ಎಸ್.ಆರ್. ವಿಜಯಶಂಕರ್**

**ಚ**ರ್ಚೆ ಹೀಗೆ ತಿರುಗೀತು ಅಂತ ನನಗೆ ತಿಳಿದಿರಲಿಲ್ಲ. ಸಂಜೆ ಆಫೀಸು ಮುಗಿಯುವ ಹೊತ್ತಿಗೆ ಪೊಮ್ಮೊಚ್ಚ ಫೋನು ಮಾಡಿ, ''ಅಯೋಧ್ಯೆಗೆ ಬರ್ತೀಯಾ?'' ಅಂತ ಕೇಳಿದ. ನಾನು, ''ಇಲ್ಲಪ್ಪ, ಈಗ ರಜಾ ಸಿಗುವುದಿಲ್ಲ. ಶಾಲೆಗೆ ರಜೆ ಸಿಕ್ಕಿದೆ, ಮಕ್ಕಳು ಯಾರೂ ಮನೆಯಲ್ಲಿ ಇಲ್ಲ ಅಂತ ಬಾಸ್‌ಗೆ ಗೊತ್ತು. ರಜಾ ಯಾಕೆ ಕೊಡ್ತಾನೆ?'' ಅಂದೆ.

ಅಯ್ಯೋ ಮಾರಾಯ. ಶ್ರೀರಾಮಜನ್ಮಭೂಮಿಯಾದ ಅಯೋಧ್ಯೆಗೆ ಪ್ರವಾಸ ಬರುತ್ತೀಯಾ ಎಂದು ನಾನು ಕೇಳಿದ್ದು ಅಲ್ಲಪ್ಪಾ ಎಂದು ಪೊಮ್ಮೊಚ್ಚ ರಾಗ ಎಳೆದ. ಮತ್ತೆ? ಎಂದೆ. ಶೇಷಾದ್ರಿಪುರಂಗೆ ಹತ್ತಿರದಲ್ಲಿ ಹೊಸ ಹೋಟೆಲ್ ಅಯೋಧ್ಯೆ ಪ್ರಾರಂಭವಾಗಿದೆ ಎಂದು ನಮ್ಮ ಸಕಲ ಹೋಟೆಲೊಂದರ ಸಂಚಾರಿ ಸಿಂಹ ಅಲಿಯಾಸ್ ನರಸಿಂಹಶಾಸ್ತ್ರಿ ಹೇಳಿದ ಕಣೋ. ಸುಪರ್ಬ್ ಓಪನ್ ದೋಸಾ ಇದೆಯಂತೆ. ನಿಮ್ಮ ಮಲ್ಲೇಶ್ವರಂ ಟಿಫಿನ್ ರೂಂ ದೋಸೆಗಳು ಅದರ ಎದುರು ಲೆಕ್ಕಕ್ಕೆ ಇಲ್ಲ ಎಂದು ಹೇಳಿದನಪ್ಪ ಶಾಸ್ತ್ರಿ. ಅದ್ರಾಮನೂ ಬರುತ್ತೇನೆ ಎಂದಿದ್ದಾನೆ. ಒಂದು ದೋಸೆ ಹೊಡೆದು ಹಾಗೆಯೇ ಕಾಮಧೇನು ಪುಸ್ತಕ ಅಂಗಡೀಗೂ ಒಂದು ಭೇಟಿಕೊಟ್ಟು ಮನೆಗೆ ಹೋಗಬಹುದು ಎಂದ ಪೊಮ್ಮೊಚ್ಚ.

ದ ಓನ್ಲಿ ವೇ ಟು ಗೆಟ್ ರಿಡ್ ಆಫ್ ಟೆಮ್ಟ್ಟೇಷನ್ ಈಸ್ ಟು ಈಲ್ಡ್ ಟು ಇಟ್ ಎಂಬ ಆಸ್ಕರ್ ವೈಲ್ಡ್‌ನ ಮಾತನ್ನು ವೇದವಾಕ್ಯದಂತೆ ಒಪ್ಪಿಕೊಂಡಿರುವ ನಾನು ತಕ್ಷಣ ಒ.ಕೆ. ಅಂದುಬಿಟ್ಟೆ. ಓಪನ್ ದೋಸೆಯು ಆ ಹೋಟೆಲ್ ತೀರಕೆ ನನ್ನನ್ನು ಕರೆದಿತ್ತು.

ಅದ್ರಾಮ ಬರುವವರೆಗೆ ಒಂದು ಬೈಟೂ ಕಾಫಿ ಹೇಳಿ ಅದು ಇದು ಮಾತನಾಡುತ್ತಾ ಕುಳಿತಿದ್ದೆವು. ಅದೇನು ಗ್ರಹಚಾರಕ್ಕೋ ನಾನು ಪೊಮ್ಮೊಚ್ಚನಲ್ಲಿ ''ಬಾಹುಬಲಿ'' ನೋಡಲಿಕ್ಕಿದೆಯಾ ಎಂದು ಕೇಳುವ ಸಮಯಕ್ಕೆ ಸರಿಯಾಗಿ ಅದ್ರಾಮನ ಪ್ರವೇಶವಾಯಿತು. ಮಾತು ನಿಲ್ಲಿಸದೆ ಹಸ್ತಲಾಘವಕ್ಕಾಗಿ ಕೈ ಮುಂದೆ ಮಾಡುತ್ತಾ ಪೊಮ್ಮೊಚ್ಚ ''ಬಾಹುಬಲಿ ಎಂತಹ ಸಿನಿಮಾ ಮಾರಾಯ! ಸಂಪಿಗೆ ಥಿಯೇಟರಿನ ಕ್ಯೂ ನೋಡಿಯೇ ನಾನು ಸುಸ್ತು. ಇನ್ನೊಂದು ತಿಂಗಳು ಕಾದರೆ ಕ್ಯೂ ಇಲ್ಲದ ಟಿಕೆಟ್ ಸಿಕ್ಕರೂ ಸಿಗಬಹುದು'' ಎಂದ.

ಆನ್‌ಲೈನ್ ಬುಕ್ಕಿಂಗ್‌ನಲ್ಲಿ ಶಾಲಾ ಮಕ್ಕಳೂ ಕೂಡಾ ಟಿಕೆಟ್ ತೆಗೆದುಕೊಳ್ಳುವ ಈ ಕಾಲದಲ್ಲಿ ನಮ್ಮ ಪೊಮ್ಮೊಚ್ಚ ಕ್ಯೂ ಬಗ್ಗೆ ಹೇಳುತ್ತಿದ್ದಾನಲ್ಲ ಎಂದು ನಾನು ಯೋಚಿಸುತ್ತಿದ್ದರೆ, ಅದ್ರಾಮ, ''ನಮಗೆ ನಮ್ಮ ರಾಜ್ಯದಲ್ಲಿ ಕತ್ತಿ ಬಿಸಾಕಿದ ಬಾಹುಬಲಿ ಇರುವಾಗ ಕತ್ತಿ ಬೀಸುವ ಖಡ್ಗ ಝಳಪಿಸುವ ಈ ಸಿನಿಮಾದ ಬಾಹುಬಲಿ ಯಾವ ಲೆಕ್ಕ? ಖಡ್ಗ ತ್ಯಾಗವೇ ಕತ್ತಿವರಸೆಗಿಂತ ಮೇಲು'' ಎಂದು ಜಗಳದ ಬಾಂಬ್ ಸಿಡಿಸಿಬಿಟ್ಟ. ಪಂಚೇಂದ್ರಿಯಗಳಿಂದಲೂ ಓಪನ್ ದೋಸೆ ಸವಿಯುವ ಆಸೆಯಿಂದ ಬಂದ ನನಗೆ ಕರ್ಣೇಂದ್ರಿಯಕ್ಕಿನ್ನು ಸಾಹಿತ್ಯವೇ ಗತಿ ಎಂಬುದು ಖಾತ್ರಿಯಾಯಿತು.

ನೀನು ಹೇಳುವುದೇನು? ನಮ್ಮ ಗೊಮಟೇಶ್ವರಮೂರ್ತಿಗಳ ಬಗೆಗೋ? ಎಂದು ಪೊಮ್ಮೊಚ್ಚ ಕಿರುನಗೆ ಸೂಸಿದ. ಅದು ಅದ್ರಾಮನ ವಾದವನ್ನು ಯಃಕಶ್ಚಿತ್‌ಗೊಳಿಸುವ ಬಾಹ್ಯತಂತ್ರ.

''ಎಂತದು ಹೇಳುದ್ಯ ಮಾರಾಯ. ನಮ್ಮ ಪಂಪನ ಬಾಹುಬಲಿ ಆದಿಪುರಾಣದಲ್ಲಿ ಇಲ್ಲವೋ?'' ಎಂದ ಅದ್ರಾಮ.

''ಓ ಅದುವೋ. ಪಂಪ ಮಹಾಕವಿಯ ಆದಿಪುರಾಣದ ಕೊನೆಯ ಭಾಗ. ಅದುವೇ ಬಾಹುಬಲಿಗೆ ಅಣ್ಣ ಭರತನೊಡನೆ ಮುಷ್ಠಿಯುದ್ಧ ಮಾಡಿ ಇನ್ನೇನು ಅಣ್ಣನನ್ನು ಕೆಳಕ್ಕೆ ಕುಕ್ಕಿ ಸೋಲಿಸಬೇಕು ಎಂಬ ಸಂದರ್ಭದಲ್ಲಿ ಬಾಹುಬಲಿಗೆ ಉಕ್ಕುವ ವೈರಾಗ್ಯ ಭಾವ. ಅದೆ ನಮ್ಮ ಕನ್ನಡ ಪಂಡಿತರು ಹೇಳುತ್ತಿದ್ದರಲ್ಲ, ನೆಲಸುಗೆ ನಿನ್ನ ವಕ್ಷದೊಳೆ ನಿಚ್ಚಳಮೀಭಟ ಖಡ್ಗ ಮಂಡಲೋತ್ಪಲವನ ವಿಭ್ರಮ ಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಎಂದೆಲ್ಲಾ ಹೇಳಿ ಬಾಹುಬಲಿ ತನ್ನ ತಂದೆ ಇತ್ತ ರಾಜ್ಯವನ್ನು ಅಣ್ಣ ನಿನಗೆ ಸಮರ್ಪಿಸುವೆನು. ನಿನಗೆ ಒಲಿದಿರುವ ಹೆಣ್ಣನಾಗಲೀ ಭೂಮಿಯನಾಗಲೀ ತಾನು ಬಯಸಿದರೆ ಕೀರ್ತಿ ಮಾಸದೆ?'' ಎಂದು ಬಾಹುಬಲಿ ಅಣ್ಣನನ್ನು ಕೇಳುವ ಸಂದರ್ಭ ಅಲ್ಲವಾ ನೀನು ಹೇಳುವುದು? ಎಂದು ಪೊಮ್ಮೊಚ್ಚ ಕೇಳಿದ.

ನಿನ್ನದು ಪಠ್ಯಪುಸ್ತಕಗಳಲ್ಲಿ ಓದಿದ್ದಕ್ಕಿಂತ ಆಚೆಗಿನ ಕತೆ ಇಲ್ಲ. ಮುಳಿಯ ತಿಮ್ಮಪ್ಪಯ್ಯನವರು ಅಲೌಕಿಕ ರಸಾವೇಶ ಉಂಟಾಗುವ ಉದಾಹರಣೆಯಾಗಿ ''ನಾಡೋಜ ಪಂಪ''ದಲ್ಲಿ ಹೇಳುವುದು ನೆನಪಿಲ್ಲವೇನೋ ಪೊಮ್ಮ? ಎಂದು ರಸಾವೇಶದಿಂದಲೇ ಅದ್ರಾಮ ಕೇಳಿದ. ಅಲೌಕಿಕ ರಸವೇ ನಿರ್ವಾಣ ಎಂದು ಮುಳಿಯರು ಹೇಳಿದ್ದು ಯಾವುದನು? ಅದಕ್ಕೇ ನಾನು ಖಡ್ಗತ್ಯಾಗವೇ ದೊಡ್ಡದೆಂದು ಹೇಳಿದ್ದು ನಿಜ ಪಾದಾಂಬುರುಹಕ್ಕೆ ಎಂದು ತಡವರಿಸುತ್ತಾ, ಅದ್ರಾಮ ಆಶ್ಚರ್ಯವಾಗುವಂತೆ ಆದಿಪುರಾಣದಿಂದ ಕೋಟ್ ಮಾಡಿದ.

ನಿಜ ಪಾದಾಂಬುರುಹಕ್ಕೆ ಪಾದ್ಯವಿಧಿಯಂ ನೇತ್ರಾಂಬುವಿಂ ಮಡುವ
ಗ್ರಜನತ್ಯುನತಮಪ್ಪ ಮಸ್ತಕದ ಮೇಗೋರಂತೆ ಪಾಯ್ವಾತ್ವ ಬಾ
ಪ್ಪ ಜಳೌಘಂಗಳಿನಂದು ಬಾಹುಬಲಿ ತನ್ನಿಂದಂ ನಿಧೀಶಂಗೆ ವಂ
ಶಜ ರಾಜ್ಯಾಭಿಷವೋತ್ಸವಂ ನೆಗಳ್ದುದೆಂಬಾ ಶಂಕೆಯಂ ಮಡಿದಂ.

ನೀನು ಕನ್ನಡ ಜಾಣ ಪರೀಕ್ಷೆ ಕ್ಲಾಸುಗಳಿಗೆ ಹೋದ್ದು ಸಾರ್ಥಕವಾಯಿತು ಎಂದ ಪೊಮ್ಮೊಚ್ಚ. ಬಿಡಪ್ಪ ನಾನೂ ಕೆ.ಎಲ್. ನರಸಿಂಹಶಾಸ್ತ್ರಿಗಳ ಗದ್ಯಾನುವಾದ ನೋಡಿದ್ದೇನೆ. ಮೇಲಕ್ಕೆ ಎತ್ತಿದ ಭರತನನ್ನು ಕೆಳಕ್ಕೆ ಕುಕ್ಕಿ ಸೋಲಿಸದೆ, ಅಣ್ಣನನ್ನು ಗೌರವದಿಂದ ಕೆಳಗಿಳಿಸುವಾಗ ಅಣ್ಣತಮ್ಮಂದಿರು ಪರಸ್ಪರ ತಬ್ಬಿಕೊಂಡಿದ್ದಾರೆ. ಆಗಲೇ ಮುಳಿಯರು ಹೇಳಿದ ಅಲೌಕಿಕ ರಸಾವೇಶ ಅಲ್ಲವೇ ಎಂದ ಪೊಮ್ಮೊಚ್ಚ.

ಅಲ್ಲಿಯೇ ಇರುವುದು ಸೂಕ್ಷ್ಮ ಎಂದ ಅದ್ರಾಮ. ಆಗ ಬಾಹುಬಲಿಯ ಪಾದಕಮಲಗಳಿಗೆ ಪಾದ್ಯವಿಧಿಯನು ಭರತನು ತನ ಕಣ್ಣೀರಿನಿಂದ ಸಲ್ಲಿಸಿದನು. ಆ

ಸಂದರ್ಭದಲ್ಲಿ ಉನ್ನತನಾದ (ಶರೀರದಲ್ಲೂ ಅಣ್ಣನಿಂದ ಎತ್ತರದವನಾದ) ಬಾಹುಬಲಿಯು ತನ್ನ ಅಣ್ಣನಾದ ಭರತನ ತಲೆಯ ಮೇಲೆ ಅವಿಶ್ರಾಂತವಾಗಿ ಸುರಿಯುತ್ತಿರುವ ತನ್ನ ಕಣ್ಣೀರಿನಿಂದ ರಾಜ್ಯಾಭಿಷೇಕವನ್ನು ಮಾಡಿಸುತ್ತಿರುವನೇನೋ ಎಂಬ ಶಂಕೆಯನ್ನು ಉಂಟು ಮಾಡಿದನು ಎಂಬುದರ ಹಿಂದಿನ ಭಾವ ಮುಖ್ಯ. ಹಿರಿಯನಾದ ಅಣ್ಣ ಕಿರಿಯನ ಪಾದಕ್ಕೆ ಪಾದ್ಯವಿಧಿ ಅಂದರೆ ಅವನ ಮುಂದಿನ ಸಂನ್ಯಾಸತ್ವದ ಹಿರಿತನಕ್ಕೆ ಈಗಲೇ ಕಣ್ಣೀರಿನ ಪಾದಪೂಜೆ. ಅಣ್ಣನ ತಲೆಗೆ ತಮ್ಮನ ಕಣ್ಣೀರಿನ ಮೂಲಕ ರಾಜ್ಯಾಭಿಷೇಕದ ಪುಣ್ಯಜಲ. ನೋಡಯ್ಯಾ ಪಂಪನ ಸೂಕ್ಷ್ಮ ಎಂದ ಅದ್ರಾಮ.

ಇಷ್ಟು ಮಾತು ಬಂದದ್ದೇ ಪೊಮ್ಮ ಸ್ವಲ್ಪ ಗರಂ ಆದ. ಎಷ್ಟಾದರೂ ಅವರ ಹೈಸ್ಕೂಲಿನಲ್ಲಿ ಬಳ್ಳ ಮಾಸ್ತ್ರ ಸಂಸ್ಕೃತ ಕ್ಲಾಸುಗಳಲ್ಲಿ ಕೂತವನಲ್ಲವೇ. ಪಂಪನನ್ನು ಅಷ್ಟು ಹೊಗಳಬೇಡ. ಅವ ಭಾಸನಿಂದ ಕದ್ದದ್ದು ಎಂದು ಬಿಟ್ಟ. ಮಾತ್ರವಲ್ಲದೇ ಭಾಸನ ಪ್ರತಿಮಾ ನಾಟಕದ ಮೊದಲ ಅಂಕದ ವಿವರ ಹೇಳಿದ.

ಸಮಂ ಭಾಷ್ಪೇಣ ಪತತಾ ತಸ್ಯೋಪರಿ ಮಮಾಪ್ಯಧಃ ।
ಪಿತುರ್ಮೇ ಕ್ಲೇದಿತ್ ಪಾದೌ ಮಮಾಪಿ ಕ್ಲೇದಿತಂ ಶಿರಃ ॥

ಶ್ರೀರಾಮನ ಪಟ್ಟಾಭಿಷೇಕ ಆಗುವ ಮೊದಲು ರಾಮನನ್ನು ದಶರಥ ಅಪ್ಪಿಕೊಂಡ. ದಶರಥನ ಕಣ್ಣೀರು ರಾಮನ ತಲೆಗೆ ಪಟ್ಟಾಭಿಷೇಕದ ಪವಿತ್ರ ಪಾದ್ಯದಂತೆ ಬೀಳುತ್ತದೆ. ರಾಮನ ಕಣ್ಣೀರಿನ ಭಾಷ್ಪಗಳು ತಂದೆಯ ಪಾದಗಳನ್ನು ತೊಳೆಯುತ್ತವೆ. ವಾತ್ಸಲ್ಯದ ಕಣ್ಣೀರು ಅಭಿಷೇಕ ಜಲವನ್ನು ನೆನಪಿಗೆ ತಂದುಕೊಟ್ಟು ತಂದೆ ಮಕ್ಕಳ ಹಾರ್ದಿಕ ಸಂಬಂಧವನ್ನು ಧಾರ್ಮಿಕ ಆಚಾರವನ್ನಾಗಿ ಪರಿವರ್ತಿಸಿರುವುದರ ಬಗ್ಗೆ ಕೀರ್ತಿನಾಥ ಕುರ್ತಕೋಟಿಯವರು ಭಾಷಣದಲ್ಲಿ ಹೇಳಿದ್ದು ನೆನಪಿಲ್ಲವಾ? ಬೇಕಾದರೆ ನಿನ್ನ ಸಂಸ್ಕೃತ ಗುರುಗಳಿದ್ದಾರಲ್ಲ, ಶ್ರೀರಾಮಭಟ್ಟರು, ಅವರನ್ನು ಕೇಳು ಎಂದು ಪೊಮ್ಮೊಚ್ಚ ಇದ್ದಕ್ಕಿದ್ದಂತೆ ಭಾಸನ ವಕೀಲನ ಹಾಗೆ ಮಾತನಾಡಿದ.

ಎಂತದು ಮಾರಾಯ ನೀನು. ಭಾಸನ ಕಿಸೆಗೆ ಪಂಪ ಕೈ ಹಾಕಿದ್ದಾನೆ ಅಂತ ಹೇಳೂದಾ? ಪಂಪನ ಮೇಲೆ ಕಾಳಿದಾಸನ ಪ್ರಭಾವದ ಬಗ್ಗೆ ಶ್ರೀರಾಮಭಟ್ಟರು ಬರೆದದ್ದು ಗೊತ್ತು ಎಂದ ಅದ್ರಾಮ. ನಮ್ಮ ಆದಿಕವಿಯ ಬಗ್ಗೆ ಕಳ್ಳತನದ ಆರೋಪ ಮಾಡಿದಾಗ ಅದ್ರಾಮ ಪೆಚ್ಚಾಗಿದ್ದ. ಏನೇ ಆದರೂ ಅದೊಂದು ಸಾದೃಶ್ಯ. ಕಳ್ಳತನ ಹೇಗಾಗುವುದು? ಹಿರಿಯರ ಜ್ಞಾನ ಕಿರಿಯರ ಹಕ್ಕು. ಹೆಚ್ಚಾದರೆ ಇಲ್ಲಿ ಭಾಸನ ಚಿತ್ರಣ ಶಕ್ತಿಯೊಂದರ ಪ್ರಭಾವ ಎಂದೇನಾದರೂ ಹೇಳಬೇಕೇ ಹೊರತು ಕಳ್ಳತನ ಹೇಗೆ? ಕುರ್ತಕೋಟಿಯವರು ''ಪ್ರತ್ಯಭಿಜ್ಞಾನ'' ದಲ್ಲಾಗಲೀ, ಎ.ಆರ್.ಕೃ. ಅವರು ''ಸಂಸ್ಕೃತ ನಾಟಕ''ದಲ್ಲಾಗಲೀ ಎಲ್ಲೂ ಕಳ್ಳತನ, ಪ್ರಭಾವಗಳ ಬಗ್ಗೆ ಹೇಳುವುದಿಲ್ಲವಲ್ಲ ಎಂದ ಅದ್ರಾಮ.

ಈಗ ಅದ್ರಾಮನನ್ನು ಪಾರು ಮಾಡದಿದ್ದರೆ ದೋಸೆಯ ಸವಿಯನ್ನು ಬಾಹುಬಲಿ ಗಲಾಟೆ ನುಂಗಿ ಹಾಕೀತು ಅನಿಸಿ ನಾನು ಬಾಯಿಹಾಕಿದೆ. ''ನೋಡಿ, ಕವಿ ಎಚ್.ಎಸ್. ವೆಂಕಟೇಶಮೂರ್ತಿಯವರು ಪಂಪನ ಆದಿಪುರಾಣದ ತಿಳಿಗನ್ನಡ ಅವತರಣಿಕೆ ಬರೆದಿದ್ದಾರೆ. ಹೇಗೂ ಕಾಮಧೇನು ಪುಸ್ತಕದ ಅಂಗಡಿಗೆ ಹೋಗುತ್ತಿದ್ದೇವಲ್ಲ, ಆ ಪುಸ್ತಕ ಸಿಕ್ಕರೆ ಎಚ್ಚೆಸ್ವಿ

ಏನು ಹೇಳುತ್ತಾರೆ ನೋಡೋಣ.'' ನನ್ನ ಮಾತಿಗೆ ಪೊಮ್ಮೊಚ್ಚ ಹಾಗೂ ಅದ್ರಾಮರ ನಡುವೆ ಅಷ್ಟು ಬೇಗ ಕದನ ವಿರಾಮ ಘೋಷಿಸುವ ಶಕ್ತಿ ಇದೆ ಎಂದು ನನಗೆ ತಿಳಿದಿರಲಿಲ್ಲ. ಅಥವಾ ಅದು ಆಗತಾನೆ ಮೇಜಿಗೆ ಆಗಮಿಸಿದ ದೋಸೆಯ ಪ್ರಭಾವವೂ ಇದ್ದೀತು.

ಕಾಮಧೇನು ಪುಸ್ತಕ ಭಂಡಾರದಲ್ಲಿ ಎಚ್ಚೆಸ್ವಿಯವರ ತಿಳಿಗನ್ನಡ ಅವತರಣ ಇತ್ತು. ಬಿಡಿಸಿ ನೋಡಿದರೆ ನಮ್ಮ ಕಾಲದ ಕವಿ ಎಚ್ಚೆಸ್ವಿ ಅದನು ಹೀಗೆ ನೀಡಿದ್ದಾರೆ:

ಅನುಜನ ಪಾದಾಂಬುಜಕೆ ಪಾದ್ಯವನು ನೇತ್ರಾಂಬುವಿನಿಂದ ನೀಡುವ ಅಣ್ಣ ಅತ್ಯುನ್ನತ ಮಸ್ತಕದ ಮೇಲೆ ಧಾರಾಕಾರವಾಗಿ ಬಾಷ್ಪಜಲವನ್ನು ಸುರಿಸುವ ತಮ್ಮ. ಬಾಹುಬಲಿ ತಾನೇ ನಿಂತು ನಿಧೀಶಂಗೆ ಸಂಪನ ರಾಜ್ಯಾಭಿಷೇಕ ಮಾಡಿದನೋ ಎಂಬಾ ಶಂಕೆ ಮೂಡಿಸಿದನು.

ಪುಸ್ತಕ ಕೈಯ್ಯಲ್ಲಿ ಹಿಡಿದು ಅದ್ರಾಮ ಎಚ್ಚೆಸ್ವಿ ಬರೆದ ಕಥಾ ಹಂದರ ತೋರಿಸಿದ. ಬಾಹುಬಲಿಯ ಕಣ್ಣೀರು ಭರತನ ತಲೆಯ ಮೇಲೆ ಸುರಿದು ತಾನು ಗೆದ್ದ ನೆಲವನು ಅಣ್ಣನಿಗೆ ಧಾರೆ ಎರೆಯುವಂತೆ ನಮ್ಮ ಕಾಲದ ಕವಿಗಳಿಗೆ ಕಂಡಿದೆ. ಅಣ್ಣ ಆಜ್ಞಾಪಿಸಿದರೂ ತಮ್ಮನನ್ನು ಚಕ್ರರತ್ನ ಕೊಲ್ಲುವುದಿಲ್ಲ. ಅದಲ್ಲವೇ ಬಾಹುಬಲಿಗೆ ವೈರಾಗ್ಯ ಸಂಪೂರ್ಣ ಸಿದ್ಧಿಸುವ ಕ್ಷಣ. ಈಗ ಹೇಳಿ ಖಡ್ಗ ತ್ಯಜಿಸಿದ ಬಾಹುಬಲಿ ದೊಡ್ಡವನಲ್ಲವೆ? ಎಂದ ಅದ್ರಾಮ. ಕದನ ವಿರಾಮದ ಮೂಡಿನಲ್ಲಿದ್ದ ಪೊಮ್ಮೊಚ್ಚ ನೀನು ಎಚ್ಚೆಸ್ವಿ ಪುಸ್ತಕ ಕೊಂಡೆಯಾ? ನಾನು ಡಾ|| ಪಿ.ವಿ. ನಾರಾಯಣರಾಯರ ಪಂಪನ ಪದಗಳ ನಿಘಂಟು ತೆಗೆದುಕೊಳ್ಳುತ್ತೇನೆ. ನಾನು ಕೇವಲ ಟೆಕ್ಸ್ಟ್ ಪುಸ್ತಕ ಮಾತ್ರ ಓದುವುದು ಎಂದು ಇನ್ನುಮುಂದೆ ಹೇಳಬೇಡ ಎಂದು ಆಜ್ಞಾಪಿಸಿದ. ಪೊಮ್ಮೊಚ್ಚ ದುಡ್ಡು ಕೊಡಲಿ. ನಾನು ಆ ನಿಘಂಟನ್ನು ಮನೆಗೆ ತೆಗೆದುಕೊಂಡು ಹೋಗುತ್ತೇನೆ. ನೀವಿಬ್ಬರೂ ಒಟ್ಟಿಗೆ ಮನೆಗೆ ಬಂದರೆ ಮಾತ್ರ ಪುಸ್ತಕ ಕೊಟ್ಟೇನು ಎನ್ನುತ್ತಾ ಅದ್ರಾಮ ಬಿಲ್ ಆದ ಪುಸ್ತಕಕ್ಕೆ ಕೈ ಹಾಕಿದ.

❑



# ಸೆವೆನ್ ಸ್ಟಾರ್ ಆಸ್ಪತ್ರೆ

**- ಸಿ.ಆರ್. ಸತ್ಯ**

ನನ್ನ ಸ್ನೇಹಿತ ಪಾಂಡುವಿನ ಹೆಂಡತಿ ಮೊನ್ನೆ ನನಗೆ ಫೋನ್ ಮಾಡಿ, ''ರೀ, ಇವರನ್ನ ಆಸ್ಪತ್ರೆಗೆ ಅಡ್ಮಿಟ್ ಮಾಡಿದೀವಿ. ನಿಮ್ಮನ್ನ ನೋಡ್ಬೇಕಂತೆ'' ಅಂತ ಹೇಳಿದಳು. ಗಾಬರಿಯಿಂದ ''ಯಾವ ಆಸ್ಪತ್ರೆ? ಏನು ಅಯ್ತು?'' ಅಂತ ವಿಚಾರಿಸಿದೆ. ''ದೊಡ್ಡಕೆರೆ ಮೈನ್ ರೋಡ್‌ನಲ್ಲಿ ಈಗ ಹೊಸದಾಗಿ ಆಗಿರೋ ಆಸ್ಪತ್ರೆ ರೀ 'ಜ಼ಾಂಬಿಯ-ರಷ್ಯ' ಅದರ ಹೆಸರು.'' ಅಂತ ಅಂದಳು. ಆ ಆಸ್ಪತ್ರೇನ ಹುಡುಕಿಕೊಂಡು ಹೋದೆ. ಯಾರನ್ನೋ ಎಲ್ಲಿ ಬರುತ್ತೆ ಅಂತ ಕೇಳಿದ್ದಕ್ಕೆ, ಅದೂ ಇದೂ ಹೇಳಿ, ಬಲಕ್ಕೆ ತಿರುಗಿಕೊಳ್ಳಿ, ಅಲ್ಲೇ 'ಟೈವಾನ್-ಮಲೇಷಿಯ ಆಸ್ಪತ್ರೆ' ಅಂತ ಬೋರ್ಡ್ ಕಾಣುತ್ತೆ. ಅದರ ಪಕ್ಕಾನೇ ಇದೆ ಅಂದರು. ಆಸ್ಪತ್ರೆ ಕಣ್ಣಿಗೆ ಬಿದ್ದಾಗ ನನಗೆ ಆದ ಆಶ್ಚರ್ಯ ಅಷ್ಟಿಷ್ಟಲ್ಲ. ಏನು ಭವ್ಯವಾದ ಬಿಲ್ಡಿಂಗ್ ಅಂತೀರಿ! ಯಾವುದೋ ಸೆವೆನ್ ಸ್ಟಾರ್ ಹೋಟೆಲ್ ಅನ್ನೋ ಹಾಗೆ ಇತ್ತು. ಒಳಗೆ ಹೋದೆ. ಒಬ್ಬ ಮಹಾರಾಜನ ತರಹ ವೇಷ ಧರಿಸಿದ್ದ ಸೆಕ್ಯೂರಿಟಿಯವನು ನನಗೆ ಭಾರಿ ಸೆಲ್ಯೂಟ್ ಹೊಡೆದು ಒಳಗೆ ಬಿಟ್ಟ.

ರಿಸೆಪ್ಷನ್ ಬೋರ್ಡ್ ಮುಂದೆ ಬಂದು ನಿಂತೆ. ಮಿಸ್ಟರ್ ಪಾಂಡುರಂಗ, ಪೇಷಂಟ್, ಯಾವ ರೂಮಿನಲ್ಲಿ ಇದ್ದಾರೆ ಅಂತ ಕೇಳಿದೆ. ನಾಲ್ಕನೇ ಫ್ಲೋರ್‌ನಲ್ಲಿ ರೂಮ್ ನಂಬರ್ 401ನಲ್ಲಿ ಇದಾರೆ. ಇಲ್ಲೇ ಲಿಫ್ಟ್ ಇದೆ. ಅದರಲ್ಲಿ ನೀವು ಹೋಗಬಹುದು. ಆದರೆ ಅದಕ್ಕೆ ಮುಂಚೆ ವಿಸಿಟರ್ಸ್ ಚಾರ್ಜ್ ಅಂತ ಐನೂರು ರೂಪಾಯಿ ಕೊಡಬೇಕು. ಇಲ್ಲೇ ಕೊಡಿ, ಪಾಸ್ ಕೊಡ್ತೀನಿ ಅಂತ ರಿಸೆಪ್ಷನಿಸ್ಟ್ ಹೇಳಿದ್ಲು. ನಾನು ಗಾಬರಿಯಾದೆ. ನಿಮ್ಮ ಪೇಷಂಟ್ ನೋಡೋಕ್ಕೆ ನಾನು ಯಾಕ್ರೀ ದುಡ್ಡು ಕೊಡಬೇಕು? ಅಂತ ಕೇಳಿದೆ. ''ಹಾಗಲ್ಲ ಸರ್. ಅದರಲ್ಲಿ ನೂರು ರೂಪಾಯಿ ಸೆಕ್ಯೂರಿಟಿ ಚಾರ್ಜು. ನಿಮಗೆ ಒಳಗೆ ಬರೋದಕ್ಕೆ ಒಂದು ಸಲ, ಹೊರಗೆ ಹೋಗೋದಕ್ಕೆ ಒಂದು ಸಲ ಬಾಗಿಲು ತೆಗೆದು ಸೆಲ್ಯೂಟ್ ಹೊಡಿಯೋದಕ್ಕೆ. ಇನ್ನು ನಾನೂರು ರೂಪಾಯಿಗಳು ಲಿಫ್ಟ್ ಚಾರ್ಜಸ್ಸು ಸರ್. ಫ್ಲೋರ್ ಒಂದಕ್ಕೆ ನೂರು ರೂಪಾಯಿ ಲೆಕ್ಕದಲ್ಲಿ.'' ಅಂತ ವಿವರಿಸಿದಳು. ಈ ನಿಮ್ಮ ಲಿಫ್ಟ್ ಚಾರ್ಜು ಒನ್‌ವೇ ಗೋ ಅಥವಾ ಟೂ ವೇ ಗೋ? ಅಂತ ಕೇಳಿದೆ. ಅವಳು ನಗುತ್ತಾ, ಟೂ ವೇಗೇ ಸರ್. ವಿಸಿಟರ್‌ಗಳು ಮೇಲೆ ಹೋದೋರು ಕೆಳಗೆ ಬರದೇ ಇರೋಕ್ಕೆ ಆಗುತ್ಯೆ? ಪೇಷಂಟ್‌ಗಳು ಒಂದೊಂದು ಸಲ ತೀರ ಮೇಲಕ್ಕೆ ಹೊರಟು ಹೋಗ್ತಾರೆ-ಅದು ಬೇರೆ ವಿಷಯ. ಅಲ್ಲದೆ ವಿಸಿಟರ್ಸ್‌ಗೆ ಮೆಟ್ಟಿಲು ಹತ್ತೋದಕ್ಕೆ ಪರ್ಮಿಶನ್ನೂ ಇಲ್ಲ ಅಂತ ಅಂದಳು. ಸರಿ, ದುಡ್ಡು ತೆತ್ತು ಪಾಸ್ ಇಟ್ಕೊಂಡು ನಾಲ್ಕನೇ ಫ್ಲೋರ್‌ಗೆ ಬಂದೆ.

ರೂಮಿನೊಳಗೆ ಹೋದಾಗ ನನಗೆ ಕಣ್ಣಿಗೆ ಬಿದ್ದಿದ್ದು ಪಾಂಡುವಿನ ಹೆಂಡತಿ. ಬೆಡ್ ಮೇಲೆ ಬರೀ ಬೆಡ್ ಶೀಟ್‌ಗಳು ದಿಂಬುಗಳೇ ಇದ್ದವು. ''ಏನಾಯ್ತು ಪಾಂಡೂಗೆ? ಏನಾದ್ರೂ ಐ.ಸೀ.ಯೂಗೆ ಕರ್ಕೊಂಡು ಹೋಗಿದಾರೇನೂ?'' ಅಂತ ಕೇಳಿದೆ. ಅವಳು, ''ಅಯ್ಯೋ, ಇಲ್ಲೇ ಬೆಡ್ ಶೀಟ್ ಒಳಗೇನೆ ಇದ್ದಾರೆ ನೋಡಿ. ಮೂಗಿನ ಮೇಲೆಲ್ಲಾ ಬಿಳಿ

ಬ್ಯಾಂಡೇಜ್ ಕಟ್ಟಿ ಡ್ರಿಪ್ಸ್ ಹಾಕಿದ್ದಾರೆ'' ಅಂತ ಹೇಳಿದಳು. ದಿಂಬನ್ನ ಸರಿಸಿ ನೋಡಿದ್ರೆ, ಬೆಡ್ ಶೀಟ್‌ಗಳ ಮಧ್ಯೆ ಪಾಂಡು ಮಲಗಿದ್ದ! ಮುಖ ಕಾಣಿಸ್ತಿರಲಿಲ್ಲ.

ಕೈಕಾಲುಗಳು ಮಾತ್ರ ಕಾಣಿಸ್ತಿದ್ದವು... ಏನಾಯ್ತೋ ನಿನಗೆ ಅಂತ ಕೇಳಿದೆ. ಕೊಕ್! ಕೊಕ್! ಕೊಕ್! ಅಂತ ಕೋಳಿ ಕೂಗೋ ಹಾಗೆ ಶಬ್ದ ಮಾಡಿದ. ''ಏನಿಲ್ಲ, ಅವರಿಗೆ ಸಿಕ್ಕಾ ಪಟ್ಟೆ ನೆಗಡಿ ಆಗಿತ್ತು. ಮೆಣಸಿನ ಸಾರು ಮಾಡಿ ಕೊಡ್ತೀನಿ, ಕುಡೀರಿ, ಹೋಗುತ್ತೆ ಅಂದರೆ ಬೇಡ, ಒಂದು ಒಳ್ಳೇ ಆಸ್ಪತ್ರೇಗೆ ಹೋಗಿ ಕನ್ಸಲ್ಟ್ ಮಾಡೋಣ ಅಂತ ಮೊಂಡು ಬಿದ್ರು. ಇಲ್ಲಿಗೆ ಬಂದ ತಕ್ಷಣ ಆ ಸೆಕ್ಯೂರಿಟಿಯವನು, ಜೊತೆಗೆ ಇಬ್ಬರು ವಾರ್ಡ್ ಬಾಯ್ಸ್ ಮತ್ತೆ ಇಬ್ಬರು ಡಾಕ್ಟರುಗಳು, ಇವರನ್ನ ಕಟ್ಟಿ ಹಾಕಿ ಈ ರೂಮಿನಲ್ಲಿ ತಂದು ಮಲಗಿಸಿದ್ರು. ಅಷ್ಟರಲ್ಲೇ ಚೀಫ್ ಕನ್ ಸಲ್ಟೆಂಟ್ ಡಾಕ್ಟರ್ ಅಂತೆ – ಗೂಂಡಾ ತರಹ ಇದ್ರು – ಓ ಹೋ, ಇದು ಸೀರಿಯಸ್ ಕೇಸು. ಮೂಗಿನ ಎರಡು ಹೊಳ್ಳೆಗಳಲ್ಲೂ ನೆಗಡಿ ಬಂದಿದೆ. ಒಂದೇ ಹೊಳ್ಳೆಯಲ್ಲಿ ಇದ್ದಿದ್ದರೆ ಒಂದೆರಡು ದಿನಗಳಲ್ಲಿ ಡಿಸ್ಚಾರ್ಜ್ ಮಾಡೋಕ್ಕೆ ಆಗ್ತಿತ್ತು. ಈಗ ನೋಡಿದ್ರೆ ಒಂದು ವಾರನಾದ್ರೂ ಇಲ್ಲೇ ಇರಬೇಕಾಗುತ್ತೆ ಅಂತ ಅಂದರು,'' ಎಂದು ಹೆಂಡತಿ ವಿವರಣೆ ಕೊಟ್ಟಳು. ಮತ್ತೆ ದಿಂಬಿನ ಒಳಗಡೆಯಿಂದ ಕೊಕ್! ಕೊಕ್! ಅಂತ ಶಬ್ದ ಬಂತು. ''ಏನಂತೆ?'' ಅಂತ ಕೇಳಿದೆ.

''ಆ ಕನ್‌ಸಲ್ಟೆಂಟ್ ಆಮೇಲೇ ಏನಾದರೂ ರೋಡ್‌ನಲ್ಲಿ ಸಿಗಲಿ, ಅವನ ಬೆನ್ನು ಮೂಳೆ ಮುರೀತೀನಿ ಅಂತ ಹೇಳ್ತಿದಾರೆ'' ಅಂತ ನನಗೆ ಭಾಷಾಂತರ ಮಾಡಿದ್ಲು. ನಾನು ಪಾಂಡೂನ ''ಪೆದ್ದು ಮುಂಡೇದೆ, ತೆಪ್ಪಗೆ ಮೆಣಸಿನ ಸಾರು ಕುಡಿದೇನೆ ಈ ದುಬಾರಿ ಆಸ್ಪತ್ರೆಗೆ ಯಾಕೋ ಬಂದೆ?'' ಅಂತ ಕೇಳಿದೆ. ಮತ್ತೆ ಕೊಕ್! ಕೊಕ್! ಅಂದ. ಅವನ ಹೆಂಡತಿ, ''ಈಚೀಚೆಗೆ ಎರಡು ದೇಶಗಳ ಹೆಸರುಗಳು ಇರೋ ಆಸ್ಪತ್ರೆಗಳಲ್ಲೆಲ್ಲಾ ಇದೇ ಬೆಸ್ಟ್ ಆಸ್ಪತ್ರೆ ಅಂತ ಯಾರೋ ಹೇಳಿದರು, ನೆಗಡಿಗೇ ಒಂದು ಬೇರೆ ಡಿಪಾರ್ಟ್‌ಮೆಂಟ್ ಇದೆ ಅಂತ. ಅದಕ್ಕೆ ಇಲ್ಲಿಗೆ ಬಂದೆ ಅಂತೀದಾರೆ'' ಅಂತ ಹೇಳಿದಳು.

ಅಷ್ಟರಲ್ಲಿ ಪಾಂಡು ಮೂಗು ಒರಸಿಕೊಳ್ಳೋಕ್ಕೆ ಅಂತ ಪಕ್ಕದಲ್ಲಿದ್ದ ಒಂದು ಪೇಪರ್ ನ್ಯಾಪ್ಕಿನ್‌ಗೆ ಕೈ ಹಾಕಿದ. ತಕ್ಷಣ ಅವನ ಹೆಂಡತಿ, ''ಅಯ್ಯೋ ಬೇಡಾ ರೀ. ಒಂದೊಂದು ಪೇಪರ್ ನ್ಯಾಪ್ಕಿನ್‌ಗೆ ಇಪ್ಪತ್ತು ರೂಪಾಯಿ ಅಂತ ಬಿಲ್ ಮಾಡ್ತಾರೆ. ಮನೆಯಿಂದ ಒಂದು ಟವಲ್ ತಂದಿದೀನಿ, ತೊಗೊಳ್ಳಿ'' ಅಂತ ಕೊಟ್ಟಳು. ಮತ್ತೆ ಕೊಕ್! ಕೊಕ್! ಅಂದ. ಅವನ ಹೆಂಡತಿ ''ಅಯ್ಯೋ, ಎಷ್ಟು ಸಲ ಬಾತ್ ರೂಮ್‌ಗೆ ಹೋಗ್ತೀರಾ ರೀ? ನೀವು ಒಂದೊಂದು ಸಲ ಫ್ಲಶ್ ಮಾಡಿದಾಗ್ಲೂ ಬಾತ್ ರೂಮ್‌ನಲ್ಲಿರೋ ಕೌಂಟರ್ ಓಡುತ್ತೆ. ಒಂದು ಫ್ಲಶ್‌ಗೆ ಐವತ್ತು ರೂಪಾಯಿ ಚಾರ್ಜ್ ಆಗ್ತಿದೆ'' ಅಂತ ಕಣ್ಣೀರಿಟ್ಟಳು. ನನಗೆ ಅವನ ಮೇಲೆ ಕೋಪ ಬಂತು. ''ಇನ್ನೊಂದು ವಾರ ಆದಮೇಲೆ ನಿನ್ನನ್ನ ಡಿಸ್ಚಾರ್ಜ್ ಮಾಡ್ತಾರಲ್ಲ, ಆಗ ಮನೇಗೆ ಹೋಗಿ ಒಂದೇ ಏಟಿಗೆ ಬಾತ್ ರೂಮ್‌ಗೆ ಹೋಗು. ಈಗ ತೆಪ್ಪಗೆ ಮಲಕ್ಕೋ'' ಅಂತ ರೇಗಿದೆ. ಅವನ ಕಣ್ಣಲ್ಲೂ ನೀರು ಬಂತು. ''ನಾನು ಈಗ ಏನು ಮಾಡಲಿ ಹೇಳಪ್ಪ'' ಅಂದ. ಎಷ್ಟಾದರೂ ಅವನು ನನ್ನ ಆಪ್ತ ಸ್ನೇಹಿತ. ''ಒಂದು ಕೆಲಸ ಮಾಡು. ನಾಳೆ ಆ ಕನ್‌ಸಲ್ಟೆಂಟ್ ಬಂದಾಗ, ನನಗೆ ನೆಗಡಿಯೆಲ್ಲಾ ವಾಸಿ ಆಗಿದೆ. ಅದೂ ಅಲ್ಲದೆ ನಮ್ಮ ಅಜ್ಜಿ, ತಾತ ಇಬ್ಬರೂ ಒಂದೇ ಏಟಿಗೆ ಸೀರಿಯಸ್ ಆಗಿದಾರೆ. ಈಗ ನಾನು ಅವರ ಮನೇಗೆ ಹೋಗಿ ಅವರಿಬ್ಬರನ್ನೂ ಇಲ್ಲಿಗೇ ಅಡ್ಮಿಟ್ ಮಾಡೋಕ್ಕೆ ಕರ್ಕೊಂಡು ಬರಬೇಕು. ಪಕ್ಕದ ಎರಡು ರೂಮಿನಲ್ಲೇ ಅಡ್ಮಿಟ್

ಮಾಡೋವರಂತೆ. ಈಗಲೇ ಅವನ್ನ ಖಾಲಿ ಮಾಡಿಸಿರಿ. ಇವತ್ತಿನ ತನಕ ನಾನು ಕೊಟ್ಟಿರೊ ಅಡ್ವಾನ್ಸ್‌ನಲ್ಲಿ ನನ್ನ ಬಿಲ್ ಅಡ್ಜಸ್ಟ್ ಮಾಡಿ ಅಂತ ಇಲ್ಲಿಂದ ಗಂಟು ಮೂಟೆ ಕಟ್ಟು. ಪೆದ್ದು ಪೆದ್ದಾಗಿ ಅವರು ಇರೋವಾಗ ಸೀನ ಬೇಡ, ತಡಕೋ. ಹೇಳಿ ತಕ್ಷಣ ಹೊರಡು. ಇನ್ನೊಂದು ವಿಷಯ. ಕೆಳಕ್ಕೆ ಲಿಫ್ಟ್‌ನಲ್ಲಿ ಹೋಗಬೇಡ. ಮೆಟ್ಟಲು ಇಳ್ಕೊಂಡು ಹೋಗು. ಆಮೇಲೆ ಆ ಸೆಕ್ಯೂರಿಟಿ ಇರೋ ಮುಂದಿನ ಬಾಗಿಲಿನಿಂದ ಹೋಗಬೇಡ. ಆಸ್ಪತ್ರೆ ಹಿಂದುಗಡೆಗೆ ಆಂಬ್ಯುಲೆನ್ಸ್ ಬಾಗಿಲಿರುತ್ತೆ. ಅದರ ಮೂಲಕ ರೋಡ್ ಸೇರಿಕೋ. ನಿನ್ನ ಪರವಾಗಿ ನಾನು ಬಿಲ್ ಸೆಟ್ಲ್ ಮಾಡ್ತೀನಿ. ಏನಿಲ್ಲದಿದ್ದರೂ ಲಿಫ್ಟ್ ಚಾರ್ಜು - ಒನ್ ವೇ ಮತ್ತು ಸೆಕ್ಯೂರಿಟಿ ಸೆಲ್ಯೂಟ್ ಚಾರ್ಜ್‌ನಾದ್ರೂ ನಿನಗೆ ಉಳಿಸ್ತೀನಿ. ಅರ್ಥ ಆಯ್ತಾ? ಮನೆ ಸೇರಿದ ಮೇಲೆ ನನಗೆ ಫೋನ್ ಮಾಡು'' ಅಂತ ಬುದ್ಧಿವಾದ ಹೇಳಿದೆ. ಕೊಕ್! ಕೊಕ್! ಅಂತ ನಾನು ಹೇಳಿದಕ್ಕೆ ಒಪ್ಪಿಕೊಂಡ. ನಾನೂ ಅಲ್ಲಿಂದ ಹೊರಟೆ. ಕೆಳಗೆ ಬಂದು ಹೊರಗೆ ಹೋಗೋವಾಗ ಆ ಸೆಕ್ಯೂರಿಟಿ ಧಡಿಯ, ಸಾರ್, ಬಿಲ್ ತೋರಿಸಿ ಅಂದ. ಅದರಲ್ಲಿ ಅವನ ನೂರು ರೂಪಾಯಿ ಹಾಕಿರೋದು ನೋಡಿ, ಬಾಗಿಲು ತೆರೆದು ನಾನು ಹೋಗೋಕ್ಕೆ ಮುಂಚೆ ಎಂತಹ ಒಳ್ಳೇ ಸೆಲ್ಯೂಟ್ ಕೊಟ್ಟ ಅಂತೀರಿ.

ಮಾರನೇ ದಿನ ನನಗೆ ಪಾಂಡು ಫೋನ್ ಮಾಡಿದ. ''ಥ್ಯಾಂಕ್ಸ್ ಕಣಮ್ಮ. ನಿನ್ನಿಂದ ಬಚಾವ್ ಆದೆ' ಅಂತ ಅಂದ. ''ಏನು ಮಾಡ್ತಿದೀ?'' ಅಂತ ಕೇಳಿದೆ. ''ಮೆಣಸಿನ ಸಾರು ಕುಡೀತಾ ಬಿಗ್ ಬಾಸ್ ನೋಡ್ತಾ ಇದೀನಿ!'' ಅಂದ. ''ನೆಗಡಿ ಹೋಯ್ತಾ?'' ಅಂತ ಕೇಳಿದೆ. ''ಆವಾಗ ಆವಾಗ ಸೀನು ಬರೋಹಾಗೆ ಆಗುತ್ತೆ. ಆದರೆ ಸೀನ್ತಾ ಇಲ್ಲ. ಇನ್ನೊಂದು ಸಲ ಸೀನಿದ್ರೆ ನಿಮ್ಮ ಮೂಗನ್ನ ಇಕ್ಕಳದಲ್ಲಿ ಕಿತ್ತು ಹಾಕ್ತೀನಿ ಅಂತ ನನ್ನ ಹೆಂಡತಿ ಕೂಗಾಡ್ತಿದಾಳೆ. ಇನ್ನು ನೆಗಡಿ ವಿಷಯ ಅವಳ ಹತ್ತಿರ ಹೇಳಲ್ಲಪ್ಪ' ಅಂದ. ''ಆದ್ರೆ....'' ಅಂತ ಏನೋ ಹೇಳೋದಕ್ಕೆ ಹೋದ. ''ಏನದು, ನಿನ್ನ ಹೊಸಾ ತಾಪತ್ರಯ?'' ಅಂತ ಕೇಳಿದೆ. ''ನನಗೆ ಡ್ರಿಪ್ಸ್ ಅಂತ ಚುಚ್ಚಿದ್ರಲ್ಲ? ಆ ಜಾಗದಲ್ಲೆಲ್ಲಾ ಇನ್ನೂ ನೋವಿದೆ'' ಅಂತ ಅಂದ. ನನಗೆ ಕೋಪ ಬಂತು. ''ಪೆಕ್ರ, ಅದನ್ನ ರಿಪೇರಿ ಮಾಡಿಸ್ಕೊಳ್ಳೋಕ್ಕೆ ಮತ್ತೆ ಜ಼ಾಂಬಿಯ-ರಷ್ಯ, ಟೈವಾನ್-ಮಲೇಷಿಯ ಆಸ್ಪತ್ರೆಗೆ ಹೋಗಬೇಡ. ಸುಮ್ಮನೆ ಬ್ಯಾಂಡ್ ಏಡ್ ಅಂಟಿಸಿಕೊಂಡು ಕೂತ್ಕೋ'' ಅಂತ ಬೈದೆ. ''ಹೂ ಕಣಪ್ಪ'' ಅಂತ ಒಪ್ಪಿಕೊಂಡ, ಪಾಪ!

❑

---


**ಅಪರಂಜಿ ಚಂದಾದಾರರ ಸಂಖ್ಯೆಯನ್ನು ಇಮ್ಮಡಿಗೊಳಿಸಿ!**

**ಅದು ಸುಲಭ, ನೀವೇ ಮಾಡಬಹುದು!**

ಹೇಗೆ?

ಇನ್ನೊಬ್ಬ ಚಂದಾದಾರರನ್ನು ಹುಡುಕಿಕೊಡಿ

ನಿಮ್ಮ ಸ್ನೇಹಿತರನ್ನು ಅಪರಂಜಿ ಓದುಗರನ್ನಾಗಿ ಮಾಡಿ

**ಅಷ್ಟು ಸುಲಭ!**

ವಾರ್ಷಿಕ ಚಂದಾ: ರೂ. 100/-

ಆಜೀವ ಸದಸ್ಯತ್ವ: ರೂ. 750/-

**ಇಂದೇ ಈ ಕೆಲಸ ಪ್ರಾರಂಭಿಸಿ**

# ಮುದಿಗಳ ಕಾಟ......

**- ಎಚ್. ಗೋಪಾಲಕೃಷ್ಣ**

**ರಾ**ತ್ರಿ ಎಂಟಕ್ಕೆ ಮನೆ ಸೇರಿದೆ. ಅಲ್ಲಾ ಎಲ್ಲಿಂತ ಹೋಗಿಬಿಡ್ತೀರೀ ಹೇಳೋರು ಕೇಳೋರೂ ಯಾರೂ ಇಲ್ಲವೇ? ಅಂತ ಹೆಂಡತಿಯ ಅಶರೀರವಾಣಿ ಕೇಳಿಸಬೇಕೇ?

ಅಲ್ವೇ ಮನೇಲೇ ಕುಕ್ಕರಬಡಿದಿದ್ರೆ ಮನೇಲೇ ಇರ್ತೀ, ಯಾಕೆ ಆಚೆ ಹೋಗಲ್ವೇ ಅಂತ ಪ್ರಾಣತೆಗೀತೀ.... ಈಗ ನೋಡಿದರೇ... ಅಂದೆ.

ಹೌದು ಸುತ್ತಬೇಕಾದಾಗ ಸುತ್ತಬೇಡೀ..

ಸರಿ ಇದಿನ್ನ ನಾನ್‌ಸ್ಟಾಪ್ ಆಗಿಬಿಡುತ್ತೆ ಅನಿಸಿ ತೆಪ್ಪಗಾಗಿ ಶೂ ಬಿಚ್ಚಲು ಕುರ್ಚಿ ಮೇಲೆ ಕೂತು ಕಾಲು ಮೇಲಕ್ಕೆ ಎತ್ತಿದೆ. ವಯಸ್ಸಾದ ಮೇಲೆ ಬಗ್ಗಿ ಶೂ ಬಿಚ್ಚೋದಕ್ಕೆ ಆಗೊಲ್ಲ, ಇದು ನಿಮಗೂ ಗೊತ್ತಿರಬೇಕಲ್ಲಾ? ಕೆಲವರ ಮನೇಲಿ ಹೆಂಡತಿಯರೇ ಗಂಡನ ಶೂ ಬಿಚ್ಚುತ್ತಾರಂತೆ, ನಮ್ಮ ಮನೇಲಿ ಈ ಅನುಕೂಲ ಇಲ್ಲ. ಯಾಕೇಂದ್ರೆ ಶೂ ಮುಟ್ಟಿದರೆ ನನ್ನಾಕೆ ಸ್ನಾನ ಮಾಡುತ್ತಾಳೆ - ಅದು ಮೈಲಿಗೆ ಅಂತೆ, ಊರೆಲ್ಲಾ ತಿರುಗಿ ರಸ್ತೇಲಿರೋ ಎಲ್ಲಾ ಕೊಳಕನ್ನೂ ಅಂಟಿಸಿಕೊಂಡು ಬಂದಿರುತ್ತಂತೆ!

ಶೂ ಯಾಕೆ ಬಿಚ್ತೀರೀ? ಅಂಗಡೀಗೆ ಹೋಗಬೇಕು.....

ಅಂಗಡೀಗೆ? ಈಗ ಯಾಕೆ?

ನಾಳೆ ನಿಮ್ಮ ಸ್ನೇಹಿತರನ್ನ ಊಟಕ್ಕೆ ಕೂಗಿದ್ದೀರಲ್ಲಾ ಗೊಡ್ಡು ಸಾರು ಮಾಡಿ ಬಡೀಲಾ?

ಸ್ನೇಹಿತರನ್ನ ಕಳೆದ ವಾರವೇ ಊಟಕ್ಕೆ ಕೂಗಿದ್ದೆ, ಹೆಂಡತೀಗೆ ಮೆನೂ ಸಹ ಕೊಟ್ಟಿದ್ದೆ. ಸಂಜೆಯಿಂದ ಮನೇಲೇ ಇದ್ದಾಳೆ, ತರಕಾರಿ ತಂದಿರ್ತಾಳೆ ಅಂತಂದುಕೊಂಡಿದ್ದೆ.

ಯಾಕೆ ನೀನು ಹೋಗಲಿಲ್ಲವೇ?

ಸೀರಿಯಲ್ ನೋಡ್ತಾ ಇದ್ದೆ, ಹೋಗಲಿಲ್ಲ.... ಅಂದಳು.

ಸರಿ ರೆಡಿಯಾಗು ಅಂದೆ.

ಇಲ್ಲ, ಈಗ ಇನ್ನೊಂದು ಸೀರಿಯಲ್ಲು ಬರುತ್ತೆ ಅದನ್ನ ನೋಡಬೇಕು....

ತೆಪ್ಪಗೆ ಬ್ಯಾಗು ತೆಗೆದುಕೊಂಡು ಬಾಗಿಲು ತೆರೆದು ಹೊರಟೆ. ನೆಮ್ಮದಿ ಕೆಡಿಸೋ ದೇವರು ಮನೇಲಿ ಇರುತ್ತಂತೆ! ಸಣ್ಣ ಅವಕಾಶ ಸಿಕ್ಕಿದರೆ ಆಕಾಶ ಭೂಮಿ ಒಂದು ಮಾಡುತ್ತಂತೆ. ಅದಕ್ಕೇ ನಾನು ಯಾವಾಗಲೂ ಸಖತ್ ಒಬೀಡಿಯೆಂಟ್ ಆಗಿಬಿಡ್ತೀನಿ. ಇದನ್ನ ಲಾಗಾಯ್ತಿನಿಂದಲೂ ಪರಿಪಾಲಿಸಿಕೊಂಡು ಬಂದಿದ್ದು ಇಡೀ ವಂಶದ ನೆಮ್ಮದಿಯನ್ನು ಕಾಪಾಡಿಕೊಂಡು ಪೋಷಿಸಿಕೊಂಡು ಬಂದಿರುವ ಧೀಮಂತ ನಾನು! ಇದು ಹಾಗಿರಲಿ, ಬ್ಯಾಗು ತಗೊಂಡು ಹೊರಟನಾ? ಅಂಗಡಿ ತಲುಪಿದೆನಾ? ಅಲ್ಲಿ ಏನು ಗೊತ್ತಾ? ಯಾವುದೇ ತರಕಾರಿ ನೋಡಿದರೂ ಎಪ್ಪತ್ತರ ಮೇಲೇನೇ ರೇಟು! ಹುರುಳಿಕಾಯಿ ನೂರಾತೊಂಬತ್ತು ಅಂದರೆ ಯಾರಾದರೂ ರಿಟೈರ್ಡ್ ಮನುಷ್ಯಂಗೆ ತಗೋಬೇಕು ಅನ್ಸುತ್ತಾ? ಮೂಲಂಗಿ ನಲವತ್ತು ಅಂದರೆ ಸಂಕಟ ಆಗಲ್ವಾ! ಗೋರೀಕಾಯಿ ಎಪ್ಪತ್ತು ಅಂದರೆ ಕರುಳು ಕಿವುಚಲ್ವಾ? ಹೀಗೆ ಸಂಕಟ ಪಟ್ಕೊಂತಾ ಹೊಟ್ಟೆ ಹಿಂಡುಕೋತಾ ತರಕಾರಿ ನೋಡಿಕೋತಾ ಮುಂದೆಮುಂದೆ ಬಂದರೆ

ನಿಮಗೇನು ಕಾಣಿಸಬೇಕು? ಯಾವುದೋ ತರಕಾರಿ ಮುಂದೆ ಹತ್ತು ರೂಪಾಯಿ ಅನ್ನೋ ಬೋರ್ಡು ಇರಬೇಕೇ? ಅಲ್ಲೇ ನಿಂತೆ, ಕಣ್ಣು ಉಜ್ಜಿಕೊಂಡೆ, ಕನ್ನಡಕ ತೆಗೆದೆ, ಏರಿಸಿದೆ. ಹತ್ತು ರೂಪಾಯಿ ಒಂದಕ್ಕೆ ಅಂತ ಹಾಕಿದಾನೋ ಅಥವಾ ನೂರುಗ್ರಾಮಿಗೆ ಅಂತ ಹಾಕಿದಾನೋ ಅಂತ ಹತ್ತಿರ ಹೋಗಿ ಕೈಲಿ ಬೋರ್ಡು ಹಿಡಿದು ನೋಡಿದೆ. ಹಿಂದಿನವಾರತಾನೇ ಹೊಸ ಕನ್ನಡಕ ಕೊಂಡಿದ್ದೆ ಮತ್ತು ಅದು ಡೂಪು ಮೋಸ ಮಾಡುವ ಹಾಗಿಲ್ಲ!

ಹತ್ತು ರೂಪಾಯಿ ಕೇಜಿ ಅಂತ ಬೋರ್ಡಿನಲ್ಲಿ ಬೋಲ್ಡ್ ಅಕ್ಷರದಲ್ಲಿ ಬರೆದಿತ್ತು. ನಾನು ಹೋಗಿದ್ದ ಅಂಗಡಿಗೆ ಬರೇ ಎಂ.ಎನ್.ಸಿ. ಮಂದೀನೇ ಬರೋದು, ಅವರಿಗೆ ರೇಟುಪಾಟು ನೋಡಿ ಅಭ್ಯಾಸ ಇಲ್ಲ, ಎಲ್ಲಾ ಸಾಮಾನೂ ಅಂಗಡಿ ಅವರು ಇಟ್ಟಿರೋ ಗಾಡೀಲಿ ತುಂಬೋದು, ಕ್ಯಾಷ್‌ಕೌಂಟರಿಗೆ ಹೋಗಿ ಅಲ್ಲಿ ಕಾರ್ಡು ಉಜ್ಜೋದು ಅಷ್ಟೇ ಗೊತ್ತಿರೋದು. ನನ್ನಂಥಹ ಕೆಲವರು ಶ್ಯಾಣೇ ಮಂದಿ ಇದ್ದೀವಿ ನೋಡ್ರೀ ನಾವೇ ರೇಟು ಪಾಟು ನೋಡಿ ಇದು ಯಾಕೆ ಹೆಚ್ಚು, ಪಕ್ಕದಾವ ಹತ್ತುರೂಪಾಯಿ ಕಡಿಮೆ ಕೊಡ್ತಾನೆ ಅಂತೆಲ್ಲಾ ಕೊಸರಾಡೋದು!

ಹತ್ತುರೂಪಾಯಿ ಕೇಜಿ ಅಂತ ನೋಡಿದ್ನಾ? ಹತ್ತು ಕೇಜಿ ತೂಗಿಬಿಟ್ಟೇರೀ ನೂರು ರೂಪಾಯಿಗೆ ಹತ್ತು ಕೇಜೀ! ಯಾವ ತರಕಾರಿ ಸಿಗುತ್ರೀ ಇಷ್ಟು ಕಡಿಮೇಗೇ? ಅದರ ಜತೆಗೆ ಇನ್ನೂ ಏನೇನೋ ಪಟ್ಟಿಕೊಟ್ಟಿತ್ತಲ್ಲಾ ಹೆಂಡರು ಅದನ್ನೂ ಕೊಂಡೆ. ಎಲ್ಲಾನೂ ಬ್ಯಾಗಿಗೂ ಹಾಕಿಸ್ಕೊಂಡು ಅಂಗಡಿಯಿಂದ ಆಚೆ ಬಂದನಾ? ಆಗಲೇ ತಲೆನೋವು ಶುರುವಾಗಿದ್ದು? ಅಲ್ಲಾ ತರಕಾರಿ ಯಾವುದು ಇದು ನಾನು ಕೊಂಡಿದ್ದು? ಅದ್ಯಾವುದು ಅಂತ ನೋಡಬೇಕಿತ್ತೂ ಅಲ್ವಾ? ನಾನು ತುಂಬಾ ಹುಷಾರಿನೋನು ಶಾಣ್ಯಾ ಮಂದಿ ಯಾಕ ಹಿಂಗಾತೂ?

ಅಂಗಡಿ ಪಕ್ಕದ ಮೆಟ್ಟಲ ಮೇಲೆ ಕೂತೆ. ಬ್ಯಾಗಿಂದ ಒಂದೊಂದೇ ಸಾಮಾನು ಆಚೆ ಇಟ್ಟೆ. ಕೊನೇಲಿ ಆ ತರಕಾರಿ ಕಾಣಿಸ್ತು! ಅದೇನಂತೀರಾ? ತೊಂಡೇಕಾಯೀರೀ..... ತೊಂಡೇಕಾಯಿ. ನಮ್ಮೂರಲ್ಲಿ ನೀವು ಯಾವುದೇ ಹೋಟಲಿಗೆ ಲಂಚ್‌ಗೆ ಹೋಗಿ ಅಲ್ಲಿ ಇದರ ಪಲ್ಯ ಇದ್ದೇಇರುತ್ತೆ. ಡಿನ್ನರ್‌ನಲ್ಲಿ ಏನಿರುತ್ತೇ ಅಂತೀರಾ? ನಮ್ಮೂರಲ್ಲಿ ರಾತ್ರಿ ಯಾವ ಹೋಟಲ್ಲಿನಲ್ಲೂ ಡಿನ್ನರು ಇರಾಕಿಲ್ಲ! ನಾರ್ತ್‌ನವರಿಗೆ ಏನುಬೇಕೋ ಅದಿರುತ್ತೆ. ರಾತ್ರಿ ಹೊತ್ತು ನಾವೆಲ್ಲಾ ನಾರ್ತ್‌ಇಂಡಿಯನ್ನು.

ಸರಿ ತೊಂಡೇಕಾಯಿ ತೊಂಡೇಕಾಯಿ ನೋಡಿದೆನಾ? ಮನೇಗೆ ಹೋದ ಮೇಲೆ ಬೈಸ್ಕೋಬೇಕಾ ಅಂತ ಯೋಚಿಸ್ದೆ. ಬೈದ್ರೆ ವಾಪಾಸ್ ಬೈಯೋದು ಅಂತ ಹೊರೆ ಹೊತ್ಕೊಂಡು ರಾತ್ರಿ ಹತ್ತೂವರೇಗೆ ಮನೆ ಸೇರಿದ್ನಾ?

ಬ್ಯಾಗಿಂದ ಆಚೆ ತಂದಿದ್ದೆಲ್ಲಾ ಹರಡೋಕ್ಕೆ ಹೋದನಾ?

ಎಲ್ಲಾ ಈಗಲೇ ಹರಡಿ ಮನೇಲಿ ಅಂಗಡಿ ಮಾಡಿಬಿಡಬೇಡಿ, ಈಗ ಸೀರಿಯಲ್ಲು ಶುರುವಾಗಿದೆ. ಅದು ಮುಗಿದ ಮೇಲೆ ನಾನೇ ತೆಗೆದು ಇಡ್ತೀನಿ. ಅದೇನು ಬಕ್ಕರಿಸಬೇಕೋ ಬಕ್ಕರಿಸಿ ಅಂತ ಉಪದೇಶವಾಯಿತು. ಬಕ್ಕರಿಸೋದು ಅಂದರೆ ಗೊತ್ತಾ? ಹಾಗಂದರೆ ಉಣ್ಣೋದು– ಊಟ ಮಾಡೋದು.

ಬಕ್ಕರಿಸಿದೆ, ಕಣ್ಣು ಜೋಂಪು ಹೊಡೀತು. ಹಾಗೇ ಮಂಚದ ಮೇಲೆ ಜರಾಸಂಧ ಬಿದ್ದ ಹಾಗೆ ಬಿದ್ದೆ.

ಯಾರೋ ಬೊಂಬಿನ ತುದಿಯಿಂದ ಚುಚ್ಚುತ್ತಾ ಇದಾರೆ ಅನ್ನಿಸಿತು. ಕಷ್ಟಪಟ್ಟು ಕಣ್ಣು ಬಿಟ್ಟರೆ ಹೆಂಡತಿ ಮುಗುಚೇ ಕಾಯಿಂದ ತಿವೀತಿದ್ದಳು.

ಏನು ಪ್ರಾಬ್ಲಮ್ಮು ? ಅಂದೆ. ಕೆಲವು ಸಲ ರಾತ್ರಿ ಹನ್ನೊಂದೂವರೆ ಸೀರಿಯಲ್ಲು ಬರೋ ಸಮಯದಲ್ಲಿ ಕೇಬಲ್ ಆಪರೇಟರು ಅದೇನೋ ಮಾಡಿ ಸೀರಿಯಲ್ ಬರದೇ ಇರೋ ಹಾಗೆ ಮಾಡಿಬಿಡ್ತಾನೆ. ಆಗೆಲ್ಲಾ ಹೆಂಡತಿ ನನ್ನನ್ನ ಎಬ್ಬಿಸಿ ಸೀರಿಯಲ್ ಬರ್ತಿಲ್ಲಾ ಅಂತ ಗೊಳೋ ಅಂತ ಅಳ್ತಾಳೆ. ಆಗ ನಾನು ಛೇ ಪಾಪಾ ಅಂತ ಕೇಬಲ್ಲಿನವನಿಗೆ ಫೋನು ಹಚ್ಚಿ ಅವನಿಗೆ ಬೆಂಡೆತ್ತಿ ಸೀರಿಯಲ್ ಬರೋ ಹಾಗೆ ಮಾಡ್ತೀನಿ! ಯಾವ ಸೀರಿಯಲ್ ಬರ್ತಿಲ್ಲ? ಅಂದೆ.

ಸೀರಿಯಲ್ ಮನೆ ಹಾಳಾಗಲಿ.... ಅಂದಳು. ತಥಾಸ್ತು ಅಂದೆ. ಸೀರಿಯಲ್ಲು ತೆಗೆಯೋರು, ತೋರಿಸೋರು, ಅದರಲ್ಲಿ ಮಾಡೋರು.... ಇವರೆಲ್ಲಾ ನಾಶ ಆದರೆ ಜಗತ್ತಿನಲ್ಲಿ ಸುಖ, ಶಾಂತಿ, ನೆಮ್ಮದಿ ಇನ್ನೂ ಏನೇನೋ ನೆಲೆಸುತ್ತೆ ಎಂದು ನಂಬಿರುವ ಸ್ಕೂಲ್ ಆಫ್ ತಿಂಕಿಂಗಿನ ಪ್ರೊಮೋಟರು ನಾನು!

ಅದೇನು ತರಕಾರಿ ತಂದಿದೀರೀ? ಅದೇನು ಹೋಟಲು ಇಡ್ತೀರಾ? ಅಂತ ರೇಗಿದಳು.

ಹಾಸಿಗೆ ಮೇಲೆ ಚಕ್ಕಳ ಮಕ್ಕಳ ಹಾಕಿ ಕೂತೆ. ಅಂಗಡೀಗೆ ಹೋಗಿದ್ದು, ಅಲ್ಲಿ ತರಕಾರೀ ರೇಟು, ಈ ತರಕಾರಿ ಬರೇ ಹತ್ತಕ್ಕೆ ಸಿಕ್ಕಿದ್ದು..... ಕಥೆ ಹೇಳಿದೆ.

ಇಷ್ಟೊಂದು ಏನು ಮಾಡೋದೂ?

ಪ್ರತಿದಿನ ಅದನ್ನೇ ಮಾಡು ನಾನು ತಿಂತೀನಿ...

ಇದು ತಿಂದರೆ ಮರವೆ ಬರುತ್ತಂತೆ ಗೊತ್ತಾ?

ಅಯ್ಯೋ ಹೌದಾ? ಮರವೆ ಬರುತ್ತಾ? ಹಾಗಿದ್ದರೆ ಇದಕ್ಕಿಂತಲೂ ಬೇರೆ ಒಳ್ಳೇ ಸುದ್ದಿ ಇದೆಯಾ? ಅಂತ ಹಾಸಿಗೆಯಿಂದ ಇಳಿದು ಎರಡು ಸ್ಟೆಪ್ ಹಾಕಿದೆ.

ಇದೇನು ಏನಾಯ್ತು....

ಅಲ್ವೇ ನಾಳೆ ಊಟಕ್ಕೆ ಬರ್ತಿರೋ ಫ್ರೆಂಡ್ಸು ಎಲ್ಲರಿಗೂ ನೆನಪಿನ ಶಕ್ತಿ ಜಾಸ್ತಿ ಅಂದರೆ ಜ್ಯಾಸ್ತಿ. ಅವರುಗಳ ಮನೇಗೆ ಹೋದಾಗಲೆಲ್ಲಾ ಅವರ ಮನೆಯಾಕೆ ಅದೇನು ಹಾಳು ನೆನಪು ನೋಡಿ ಇವರಿಗೆ ಹೋದ ಜನ್ಮದಲ್ಲಿ ಇವರು ನನ್ನ ನೋಡುಕ್ಕೆ ಅಂತ ಬಂದಾಗ ಹಿತ್ತಾಳೆ ಲೋಟದಲ್ಲಿ ಕಾಪಿ ಕೊಟ್ಟಿದ್ದು ನೆನಸಿಕೊಂಡು ಈಗಲೂ ಕಾಲು ಕೆರೆದುಕೊಂಡು ಜಗಳ ಆಡ್ತಾರೆ ಅಂತ ಹೇಳ್ತಾ ಇರ್ತಾರೆ. ಇದರದ್ದೇ ಪಲ್ಯ, ಹುಳಿ, ಗೊಜ್ಜು..... ಅದೇನೇನು ಮಾಡಬಹುದೋ ಅದೆಲ್ಲಾ ಮಡಿಬಿಡೋಣಾ.... ಹಾಗೇ ಮಿಕ್ಕಿದರೆ ಊರಿನಿಂದ ತಂದದ್ದು ಅಂತ ಹೇಳಿ ಸಾಗಿಸಿ ಬಿಡೋಣಾ. ನಾಳೆ ಹೋಗಿ ಇನ್ನೊಂದು ಹತ್ತು ಕೇಜೀ ತರ್ತೀನೀ.... ಅಂದೆ.

ಹೆಂಡತಿ ತಲೆ ಆಡಿಸಿದಳು – ಅಪರೂಪಕ್ಕೆ!

ನೋಡಿ ಮುಂದಿನ ತಿಂಗಳಿನಷ್ಟು ಹೊತ್ತಿಗೆ ಹಳೇ ನೆನಪುಗಳಿಂದ ಕಾಡುವ ಮುದಿಗಳು ಕಾಟಕೊಡೋಕ್ಕೇಆಗುಲ್ಲಾ...!

❑

# ದಿಗ್ಗಜರ ಜೀವನದ ಹಾಸ್ಯ ಪ್ರಸಂಗಗಳು

**- ಸುಕೇಶವ**

**ಒ**ಮ್ಮೆ ಮೈಸೂರಿನಲ್ಲಿ ಪಂಜೆ ಮಂಗೇಶರಾಯರಿಗೂ ಡಿವಿಜಿಯವರಿಗೂ ಭೇಟಿ ಆಯಿತು. ಆ ಸಂಜೆ ಜಿಲ್ಲಾ ಕಛೇರಿಯ ಆವರಣದಲ್ಲಿರುವ ಕಲ್ಲು ಬೆಂಚಿನ ಮೇಲೆ ಅವರಿಬ್ಬರೂ ಕೂತಿದ್ದರು. ಆಗ ಅಲ್ಲಿಗೆ ಪಂಜೆಯವರ ಸ್ನೇಹಿತರೊಬ್ಬರು ಬಂದರು. ಅವರು ಪಂಜೆಯವರನ್ನು ''ಓ ಯಾವಾಗ ಬಂದದ್ದು'' ಅಂತ ಕೇಳಿದರು. ಪಂಜೆಯವರು ''ಮೂರ್‍ನಾಲ್ಕು ದಿನಗಳಾದವು'' ಅಂದರು. ಏನು ಕಾರ್ಯವೋ? ಅಂದು ಮತ್ತೊಂದು ಪ್ರಶ್ನೆ, ಬೇಸರ ಕಳೆಯಲೆಂದು ಎಂದು ಉತ್ತರ. ಆಗ ಸ್ನೇಹಿತರು ಮತ್ತೆ ಕೇಳಿದರು ''ಕುಟುಂಬ ಸಮೇತವೋ?'' ಆಗ ಪಂಜೆಯವರು ನಗುತ್ತಾ ಉತ್ತರಿಸಿದರು. ''ಹೇಳಿದೆನಲ್ಲ, ಬೇಸರ ಕಳೆಯುವುದಕ್ಕಾಗಿ ಬಂದಿದ್ದು'' ಎಂದರು. ಆ ಸ್ನೇಹಿತರೂ ನಗುತ್ತಾ ಹೊರಟು ಹೋದರು. ಡಿವಿಜಿಯವರು ಇದನ್ನು ನೆನಪಿಸಿಕೊಂಡು ಇಂಥಾ ಸರಸಿಗಳು ಪಂಜೆಯವರು ಎನ್ನುತ್ತಾರೆ.

★★★

ಎಂ.ಜಿ. ವರದಾಚಾರ್ಯರು ಅಂದಿನ ಕಾಲಕ್ಕೆ ಪ್ರಖ್ಯಾತ ಲಾಯರು. ಅವರಲ್ಲಿಯೂ ಹಾಸ್ಯಪ್ರಜ್ಞೆ ಅಪಾರ. ಒಮ್ಮೆ ಕಕ್ಷಿಗಾರರಾದ ಹುಚ್ಚುವೀರೇಗೌಡರು ಅವರ ಮನೆಗೆ ಬಂದರು. ಅವರು ತುಂಬಾ ಕೋಪದಲ್ಲಿದ್ದರು. ಅವರದೊಂದು ಕೇಸನ್ನು ವರದಾಚಾರ್ಯರು ನಡೆಸುತ್ತಿದ್ದರು. ಅವತ್ತು ತುಂಬಾ ಕೋಪದಲ್ಲಿ ಬಂದ ಹುಚ್ಚುವೀರೇಗೌಡರು ವರದಾಚಾರ್ಯರಿಗೆ ''ಬುದ್ದಿ, ನಮ್ಮ ಬದ್ಧ ವೈರಿ ಏನೇನೋ ಕಿತಾಪತಿ ಮಾಡ್ತಿದಾನೆ. ಅವನಿಗೆ ಕೂಡಲೇ ಏನಾದರೂ ಮಾಡಬೇಕಲ್ಲ. ನಿಮಗೆ ಆಗದಿದ್ದರೆ ಹೇಳಿ ನಾನೇ ಏನಾದರೂ ಮಾಡಬಿಡ್ತೀನಿ. ನಾನೂ ಬಲು ಕೆಟ್ಟವನು'' ಅಂದ. ಅದಕ್ಕೆ ವರದಾಚಾರ್ಯರು ನಗುತ್ತಾ ''ಅದನ್ನು ನೀವು ನನಗೆ ಹೇಳಬೇಕೇ, ನೀವು ಮೊದಲೇ ಗೌಡರು, ಅದರ ಮೇಲೆ ವೀರೇಗೌಡರು, ಅದೂ ಸಾಲದು ಅಂತ ಹುಚ್ಚುವೀರೇಗೌಡರು. ನಿಮ್ಮ ಮುಖದ ಮೇಲಿನ ಗಲ್ಲುಮೀಸೆ ಕುಣಿಯೋದು ನೋಡಿದರೆ ನೀವು ನಿಮ್ಮ ಹೆಸರು ಕೂಡಾ ಹೇಳಬೇಕಿಲ್ಲ'' ಅಂದು ನಕ್ಕಾಗ ಹುಚ್ಚುವೀರೇಗೌಡರಿಗೂ ನಗು ಬಾರದಿರಲಿಲ್ಲ.

★★★

ಶ್ರೀಮಾನ್ ಹೆಚ್.ವಿ. ನಂಜುಂಡಯ್ಯನವರು ಪ್ರಸಿದ್ಧ ಆಗಿನ ಮೈಸೂರು ಸರ್ಕಾರದಲ್ಲಿ ವಿವಿಧ ಹುದ್ದೆಗಳಲ್ಲಿದ್ದರು. ಕಡೆಗೆ ಅವರು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳೂ ಆಗಿದ್ದರು. ಒಮ್ಮೆ ಅವರು ಪ್ರಜಾಪ್ರತಿನಿಧಿ ಸಭೆಯಲ್ಲಿರುವಾಗ ಒಂದು ವಿಷಯ ಬಂತು. ಏನಪ್ಪಾ ಅಂದ್ರೆ, ನಮ್ಮ ಜನದಲ್ಲಿ ಬಾಲ್ಯವಿವಾಹದ ಕೇಡು ತುಂಬಾ ಹೆಚ್ಚಿಹೋಗಿದೆ. ಇದನ್ನು ಖಂಡಿತವಾಗಿ ನಿಲ್ಲಿಸಬೇಕು. ಅದಕ್ಕೆ ಉಪಾಯವೇನೆಂದರೆ ಇನ್ನುಮುಂದೆ ಸ್ಕೂಲು ಕಾಲೇಜುಗಳಲ್ಲಿ ಸೇರಬರುವ ವಿದ್ಯಾರ್ಥಿಗಳಿಗೆ ಅವರು ವಿವಾಹಿತರಾಗಿದ್ದಲ್ಲಿ ಫ್ರೀಷಿಪ್, ಸ್ಕಾಲರ್‌ಷಿಪ್‌ಗಳನ್ನು ಕೊಡತಕ್ಕದ್ದಲ್ಲ, ಬದಲಿಗೆ ಅವರಿಂದ ಡಬ್ಬಲ್ ಫೀಸನ್ನು ವಸೂಲು ಮಾಡಬೇಕು ಎನ್ನುವುದು. ದಿವಾನ್ ವಿಶ್ವೇಶ್ವರಯ್ಯನವರೂ ಇದನ್ನು ಪ್ರಶಂಶಿಸಿದರು. ಇನ್ನೊಬ್ಬರು ''ಹೀಗೆ ಮಾಡಿದರೆ ಹೆಣ್ಣು ಕೊಟ್ಟ ಮಾವನಿಗೆ ಜುಲ್ಮಾನೆ ಬೀಳುತ್ತದೆ'' ಎಂದರು. ಅದಕ್ಕೆ ನಂಜುಂಡಯ್ಯನವರು ''ಅಷ್ಟೆಲ್ಲಾ ಯಾಕೆ ಬಾಲ್ಯವಿವಾಹಕ್ಕೆ ತಮ್ಮ ಹೆಣ್ಣು ಮಕ್ಕಳನ್ನು ಕೊಟ್ಟ ತಂದೆ ತಾಯಿಯರಿಗೆ ಆರು ತಿಂಗಳು ಜೈಲುವಾಸ ಎಂದರೆ ಬಾಲ್ಯವಿವಾಹ ನಿಂತೇ ಹೋಗುತ್ತಲ್ಲ'' ಎಂದಾಗ ಎಲ್ಲರೂ ನಕ್ಕರು.

ಇನ್ನೊಮ್ಮೆ ನಂಜುಂಡಯ್ಯನವರ ಬಳಿ ಬಂದವರೊಬ್ಬರು ''ಸ್ವಾಮಿ, ಗ್ರಾಮವನ್ನು ಚೊಕ್ಕಟವಾಗಿಟ್ಟುಕೊಳ್ಳಬೇಕೆಂಬ ನಿಯಮಕ್ಕೆ ಪೋಲೀಸಿನವರಿಗೆ ಅಧಿಕಾರ ಕೊಡಬೇಕು'' ಎನ್ನುವ ಪ್ರಸ್ತಾಪವೊಂದನ್ನು ತಂದರು. ನಂಜುಂಡಯ್ಯನವರು ಅವರನ್ನು ನೋಡಿ ''ಹಾಗಾದರೆ ನಿಮ್ಮ ಅಡಿಗೆ ಮನೆ ಸ್ವಚ್ಛವಾಗಿದೆಯೇ ಅಂತ ನೋಡೋಕೆ ಪೋಲೀಸಿನವರು ನಿಮ್ಮ ಮನೆಯೊಳಗೆ ಬಂದರೆ ಅವರನ್ನು ಅಡಿಗೆ ಮನೆಯಲ್ಲಿ ಕೂರಿಸಿ ಊಟ ಬಡಿಸುವಿರಾ'' ಎಂದಾಗ ಅಹವಾಲು ತಂದವರು ಬೇಸ್ತು.

ಒಮ್ಮೆ ಅವರು ದೆಹಲಿಗೆ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದರು. ಅವರಿಗೆ ನಾಸಿಕ್ ಬಳಿ ಇಳಿದು ಗೋದಾವರಿ ನದಿಯಲ್ಲಿ ಸ್ನಾನ ಮಾಡಬೇಕೆಂದು ಮನಸ್ಸಾಯಿತು. ಅದರಂತೆ ಅವರು ತಮ್ಮ ಕಾರ್ಯದರ್ಶಿಗೆ ನಾಸಿಕ್ ಬಂದಾಗ ಎಬ್ಬಿಸು ಎಂದರು. ಅದರಂತೆ ಕಾರ್ಯದರ್ಶಿ ನಾಸಿಕ್ ಇನ್ನೇನು ಹತ್ತಿರ ಬಂತು ಎನ್ನುವಾಗ ಅವರನ್ನು ಎಬ್ಬಿಸಿದ. ಆಗ ಬೆಳಗಿನ ಝಾವ ಐದು ಗಂಟೆ. ನಂಜುಂಡಯ್ಯನವರು ''ಏನಯ್ಯಾ ಇಲ್ಲಿ ಈಪಾಟಿ ಛಳಿ. ಈ ಛಳೀಲಿ ತಣ್ಣೀರಲ್ಲಿ ಸ್ನಾನ ಮಾಡೋದು ಹೇಗೆ. ಈಗ ದೆಹಲಿಗೆ ಹೋಗೋಣ ಅಲ್ಲಿ ಮಾಡುವಷ್ಟು ಪಾಪ ಮಾಡಿ ಬರೋಣ. ವಾಪಸ್ ಬರುವಾಗ ಪಾಪಗಳನ್ನೆಲ್ಲಾ ತೊಳೆದುಕೊಳ್ಳೋಕೆ ಗೋದಾವರೀಲಿ ಮುಳುಗೋಣ'' ಅಂದರು. ವಾಪಸ್ ಬರುವಾಗ ಕಾರ್ಯದರ್ಶಿ ಮತ್ತೆ ಬೆಳಗಿನ ಝಾವ ಐದು ಗಂಟೆಗೇ ಎಬ್ಬಿಸಿದಾಗ ನಂಜುಂಡಯ್ಯನವರು ನಿದ್ದೆಗಣ್ಣಲ್ಲೇ ನಗುತ್ತಾ ''ನಾನು ದೆಹಲಿಯಲ್ಲಿ ಅಂಥಾ ಪಾಪವನ್ನೇನೂ ಮಾಡಲಿಲ್ವಲ್ಲಾ ಮತ್ತೇಕೆ ಛಳೀಲಿ ಇಲ್ಲಿ ಇಳಿದು ನದೀಲಿ ಮುಳುಗುವುದು'' ಎಂದು ಮತ್ತೆ ಮಲಗೇಬಿಟ್ಟರು.

★★★

ಎಂ.ಆರ್. ಶ್ರೀನಿವಾಸ ಮೂರ್ತಿಗಳು ''ರಂಗಣ್ಣ ಕನಸಿನ ದಿನಗಳು'' ಎಂಬ ಅತ್ಯುತ್ತಮ ಕೃತಿಯನ್ನು ಸಾರಸ್ವತ ಲೋಕಕ್ಕೆ ಕೊಟ್ಟವರು. ಜೊತೆಗೆ ಅವರು ಒಬ್ಬ ಪ್ರಸಿದ್ಧ ಉಪಾಧ್ಯಾಯರು. ಸಾಹಿತ್ಯವನ್ನು ಓದಿಕೊಂಡವರು ಮತ್ತು ಬರೆದವರು. 1914ರಲ್ಲಿಯೇ ಅವರು ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿರುವಾಗ ''ಶಾಮೂ'' ಎಂಬ ಕಾದಂಬರಿ ಬರೆದು ಅದನ್ನು ಡಿವಿಜಿಯವರಿಂದ ಅಚ್ಚು ಹಾಕಿಸಿದ್ದರು. ಒಮ್ಮೆ ಅವರು ಸಾಹಿತ್ಯ ಪರಿಷತ್ತಿನಲ್ಲಿ ರನ್ನನ ಗಧಾಯುದ್ಧದ ಬಗೆಗೆ ಮಾತಾಡುತ್ತಿದ್ದರು. ಸಭಿಕರಲ್ಲಿ ಹೆಚ್ಚು ಮಹಿಳೆಯರೂ ಇದ್ದರು. ಅವರ ಪೈಕಿ ಶ್ರೀನಿವಾಸಮೂರ್ತಿಗಳ ಕುಟುಂಬವೂ ಇತ್ತು. ಶ್ರೀನಿವಾಸ ಮೂರ್ತಿಗಳು ಮಾತಾಡುತ್ತಾ ''ಹೆಂಗಸರು ತಮಗೆ ಇಷ್ಟವಾದ ಕೆಲಸಗಳಿಗಾಗಿ ತಮ್ಮ ಗಂಡಂದಿರನ್ನು ಪ್ರೇರೇಪಿಸುತ್ತಾರೆ. ಹಾಗೆ ಮಾಡುವುದರಲ್ಲಿ ಅನೇಕ ಉಪಾಯಗಳನ್ನು ಹೂಡುತ್ತಾರೆ. ದ್ರೌಪದಿ ಭೀಮಸೇನನನ್ನು ಕೆರಳಿಸುವುದಕ್ಕಾಗಿ ಅವನನ್ನು ಮೂದಲಿಸುತ್ತಾಳೆ. ಗಂಡ ಉದಾಸೀನನಾಗಿದ್ದರೆ ಅವನನ್ನು ಕೆರಳಿಸುವುದಕ್ಕಾಗಿ ನಮ್ಮ ಹೆಂಗಸರು ದ್ರೌಪದಿಯನ್ನು ಅನುಸರಿಸಬೇಕು'' ಎಂದರು. ಡಿವಿಜಿಯವರು ಶ್ರೀನಿವಾಸಮೂರ್ತಿ ಗಳನ್ನು ಅಭಿನಂದಿಸುತ್ತಾ ''ಮೂರ್ತಿ ಭಲೇ ಜಬರ್ದಸ್ತಾಗಿತ್ತು ನಿಮ್ಮ ಭಾಷಣ'' ಅಂದದ್ದಕ್ಕೆ ಮೂರ್ತಿಗಳು ''ಹೌದು, ಅಲ್ಲಿ ಕಣ್ಣೆದುರಿಗೆ ಕೂತಿತ್ತಲ್ಲ ಸ್ಫೂರ್ತಿ ಅದಕ್ಕೆ ಭಾಷಣ ಅಷ್ಟು ಜಬರ್ದಸ್ತಾಗಿತ್ತು'' ಅಂದು ಮಹಿಳೆಯರ ಗುಂಪಿನಲ್ಲಿ ತಮ್ಮ ಪತ್ನಿ ಕೂತಿದ್ದನ್ನು ನೆನೆದರು. ಮೂರ್ತಿಗಳ ಈ ಮಾತು ಕೇಳಿ ನೆರೆದಿದ್ದವರೆಲ್ಲಾ ನಕ್ಕಿದ್ದೇ ನಕ್ಕಿದ್ದು.

(ಆಧಾರ : ಡಿವಿಜಿಯವರ ಜ್ಞಾಪಕ ಚಿತ್ರಶಾಲೆ)

❑

# ಪಂಚ್ ಪದ್ಯಗಳು

- ಎಚ್. ಡುಂಡಿರಾಜ್

**ವಯಸ್ಸು**

*–1–*

ಅರುವತ್ತಾದರೂ ನಿಮ್ಮ
ರಸಿಕತನ ಬತ್ತಿಲ್ಲ
ಬಣ್ಣಿಸುತ್ತೀರಿ ಇನ್ನೂ
ತುಟಿಕಟಿಗಲ್ಲ
ಎಂದವಳಿಗೆ ಗೊತ್ತಿಲ್ಲ
ವಯಸ್ಸಾಗಿರುವುದು ನನಗೆ
ಕವಿಗಲ್ಲ!

*–2–*

ಬಾರಿನಲ್ಲಿ ಸಾಮಾನ್ಯವಾಗಿ
ಅರುವತ್ತರಿಂದ ಆರಂಭ
ತೊಂಭತ್ತಕ್ಕೆ ಏರುತ್ತದೆ ಕಿಕ್ಕು
ಬ್ಯಾಂಕ್ ಉದ್ಯೋಗಿಗಳಿಗೆ
ಅರುವತ್ತಕ್ಕೇ ಕಿಕ್ಕು
ಮನೆಗೆ ಹೋಗಲೇ ಬೇಕು!

*–3–*

ಜನಪ್ರಿಯಗಾದೆ ಮಾತು
ಅರುವತ್ತಕ್ಕೆ ಅರಳು ಮರಳು
ಬೇಂದ್ರೆಯವರು ಹೇಳಿದ್ದು
ಅರುವತ್ತಕ್ಕೆ ಮರಳಿ ಅರಳು
ನೌಕರಿಯ ನಿಯಮದಂತೆ
ಅರುವತ್ತಕ್ಕೆ ಮನೆಗೆ ತೆರಳು!

*–4–*

ದಾಂಡಿಯಲ್ಲಿ
ಗಾಂಧೀಜಿ ಮಾಡಿದ್ದು
ಉಪ್ಪಿನ ಸತ್ಯಾಗ್ರಹ
ವೃದ್ಧಾಪ್ಯದಲ್ಲಿ
ಅಂಗಾಂಗಗಳು ಮಾಡುತ್ತವೆ
ಮುಪ್ಪಿನ ಸತ್ಯಾಗ್ರಹ!

*–5–*

ಸಾಧನೆಯ ಗುರುತಿಸಿ
ಪ್ರಶಸ್ತಿ ನೀಡಲು
ಪ್ರಾಯಕ್ಕೆ ಕಾಯಬೇಕೆ?
ಒಬ್ಬ ವ್ಯಕ್ತಿಯ ಬಗ್ಗೆ
ಒಳ್ಳೆ ಮಾತಾಡಲು
ಆ ವ್ಯಕ್ತಿ ಸಾಯಬೇಕೆ?

# ಸಂಜೆ ಹೊತ್ಗೆ ಸೀರೆ ಎಂಟ್ಕೊಳ್ಳ ನೇಯ್ದಿರಂತೆ

**- ಎಚ್.ಆರ್. ಹನುಮಂತ ರಾವ್**

**ಯ**ಥಾ ಪ್ರಕಾರ ನಮ್ಮ ಸೋಷಿಯಲ್ ಕ್ಲಬ್ ಸಭೆ-ಅಂದ್ರೆ ಸೋಮು, ಚಂದ್ರು, ರಾಘಣ್ಣಿ, ವಿಶ್ವ ಮತ್ತು ನಾನು-ಇತ್ತೀಚೆಗೆ ಹೊಸ್ದಾಗಿ ಫ್ರಾನ್ಸಿಸ್ ಹಾಗೂ ಕುಂಜುಣ್ಣಿ ಸೇರ್ಪಡೆಯಾಗಿದೆ-ಗಣೇಶನ ಹಬ್ಬದ ಮಾರ್ನೆ ದಿನ ಸಂಜೆ ನಡೆಸಿದ್ವಿ-ಜಾಗ ನಮ್ಮನೆ ಮಹಡಿಯ ಮೇಲಿನ ನನ್ನದೇ ಕೊಠಡಿ, ಅದೇ ನಮ್ಮ ಗ್ರೀನ್ರೂಮು. ಹೆಸರಿಗಷ್ಟೇ, ನಾಟಕ ಮಂಡಳಿ-ಸದ್ಯಕ್ಕೆ ಕೇವಲ ಹರಟೆ ಮಂಡಳಿ, ಆದರೆ ನಾಟಕದ ಪ್ರಯತ್ನ, ಚರ್ಚೆಗಳಿಗೇನೂ ಕಮ್ಮಿಯಿಲ್ಲ. ''ಸೋಮು, ನಿಂಗಿಷ್ಟವಾದ ಟೀವೀ ಸೀರಿಯಲ್ಯಾವುದು? ನಂಗಂತೂ ''ಏ'' ಟೀವೀನ 'ಧನಿಷ್ಟ ನಕ್ಷತ್ರ, 'ಹಾಯ್' ಟೀವೀನ 'ಕಳೆದು ಹೋದವಳು' ಮತ್ತೆ 'ಜೀರೋ' ಟೀವೀನ 'ಸಿಕ್ಕಿದ್ದೇನು?' ಪರವಾಗಿಲ್ಲ ಅನ್ನಸ್ತು, ಆದ್ರೆ ಯಾವ ಸೀರಿಯಲ್ಲೂ ಮುಗಿಯೋ ಸೂಚ್ನೇನೇ ಇಲ್ಲ. ಎರಡು ವರ್ಷಗಳಾದ್ರೂ, ಒಂದೇ ತರಾ ಡಯಲಾಗು, ಹೆಚ್ಚೂ ಕಮ್ಮಿ. ಅಂದ ನಮ್ಮ ವಿಶ್ವ. ಚಂದ್ರು ''ಧನಿಷ್ಟ ನಕ್ಷತ್ರ ಆಕಾಶ್ದಲ್ಲಿ ಹುಡುಕ್ತಾ ಇದಾರೆ ಅಂತ್ಕಾಣುತ್ತೆ, ಅದು ಸಿಗೋವರ್ಗ್ಗೂ ಸೀರಿಯಲ್ ನಿಲ್ಲಲ್ಲ, ಅದು ಸಿಗಲ್ಲ, ಇದು ನಿಲ್ಲಲ್ಲ, ಇನ್ನು ಕಳೆದು ಹೋದವಳು ಬೆಂಗ್ಳೂರ್ನಲ್ಲಿ ಎಷ್ಟ್ ಹುಡುಕಿದ್ರೂ ಸಿಗಕ್ ಸಾಧ್ಯವಾ, ಈ ಸೀರಿಯಲ್ಲೂ ನಿಲ್ಲಲ್ಲ ಬಿಡು, ಇನ್ನ ಸಿಕ್ಕಿದ್ದೇನು? ಟೀವೀ ಸೀರಿಯಲ್ನಲ್ಲಿ ನೋಡೋವ್ರಿಗೆ ಸಿಕ್ಕಿದ್ದೇನು ಅನ್ನೋದೇ ಮುಖ್ಯ ಪ್ರಶ್ನೆ, ಬಹುಶಃ, ತಲೆನೋವು, ಸಾಂಕ್ರಾಮಿಕ ಜ್ವರ, ಆಗಾಗ್ಗೆ ಅತಿಸಾರ, ಮೈ ಪರಚಿಕೊಳ್ಳೋ ತರ ಆಗೋದಷ್ಟೇ ಶೇಷಪ್ರಶ್ನೆ ಏನಂತೀ'', ''ವಿಶ್ವ, ನಿಂಗ್ಯಾಕ್ಕಿದ್ದೀತು ಈ ಸೀರಿಯಲ್ಗಳ ಉಸಾಬರೀ, ಅದ್ರ ಬದ್ಲು ಹೊತ್ತು ಹೋಗೋಕೆ ಜೋಬ್ನಲ್ಲಿ ಒಂದಷ್ಟು ನೋಟುಗಳ್ನ ಹಾಕ್ಕೊಂಬ, ನಾವಿದೀವಿ, ನಿಂಗೆ ಟೈಂ ಪಾಸ್ ಮಾಡ್ಸಕ್ಕೆ'' ಲೇವಡಿ ಮಾಡಿದ ನಮ್ಮ ಸೋಮು. ''ಸಾಕ್ನಿಲ್ಸು, ಈ ಹೆಸ್ರುಗಳು ಕೇಳಿದ್ರೇನೆ ನನ್ತಲೆ ಗಿರ್ರಿ ಹೊಡೆಯುತ್ತೆ, ಮತ್ತೇನಾದ್ರೂ ವಿವರ, ವರ್ಣನೆ ಶುರು ಮಾಡಿದ್ಯೋ ಅಷ್ಟೇ'' ಸೋಮು ಉವಾಚ.

''ಹಾಗೆಲ್ಲಾ ನೀನು ಅಷ್ಟೊಂದು ಸೀರಿಯಸ್ ಆಗಿ ಸೀರಿಯಲ್ಗಳ್ನ ತಗೋಬಾರದು, ಅವಕ್ಕೆಲ್ಲಾ ಹೈ ಟೀಆರ್‌ಪಿ ರೇಟಿಂಗ್ ಇದ್ರೇನೆ ಅವ್ರು ಮುಂದ್ವರ್ಸೋದು, ಇದೆಲ್ಲ ಕಮರ್ಶಿಯಲ್ ಯುಗ, ಅಲ್ದೆ ಅವುಗಳ ಭಕ್ತಾದಿಗಳು ಇಷ್ಟ ಪಡೋವಾಗ ನಿನಗೆ ಬ್ಯಾಡ ಅನ್ಸಿದ್ರೆ ಬಾಲ ಮುದರ್ಕಂಡಿರು, ನೋಡಬ್ಯಾಡ, ಅಷ್ಟೇಯ'' ವಿಶ್ವ ಸಮರ್ಥಿಸಿಕೊಂಡ ತಾನೂ ಸೀರಿಯಲ್ ಅಡಿಕ್ಟ್ ಆಗಿರೋದನ್ನ!

ರಾಘಣ್ಣಿ ಹೊಸ ಐಡಿಯಾ ಹಾಕ್ದ ''ನಾವೇ ಯಾಕೆ ಒಂದು ಸೀರಿಯಲ್ನ ತೆಗೀಬಾರ್ದು? ನಿಂದೇ ಬ್ಯಾಂಕ್ ಅಕೌಂಟ್ನಲ್ಲಿ ಹಣ ಹೂಡಿ, ಕಥೆ, ಸ್ಕ್ರಿಪ್ಟ್ ರೆಡಿ ಮಾಡ್ಕಂಡ್ ಚಾನೆಲ್ ಕಮಾಂಡರ್ಸನ ಹೋಗಿ ನೋಡೋದು?'', ''ನಿಂಗೇನ ಅನುಭವ ಇದೆ ಅಂತ ಅವ್ರುಗೋಳು

ಮಣೆ ಹಾಕ್ತಾರೆ, ಹಣ ಒದಗಿಸೋ ಚಿಕ್ಕಪ್ಪ ಯಾರು, ಎಲ್ಲಿಂದ ಕ್ಯಾಪಿಟಲ್ ತರ್ತಿ, ಬಾಯಿದೆ ಅಂತ ಏನೇನೋ ಒದರ್‌ಬ್ಯಾಡ'' ಸೋಮು ಅವ್ನ ಬಾಯ್ಮುಚ್ಚಿಸಿದ. ಅಲ್ಲಿಗೆ ಆ ಮಾತು ಮುಕ್ತಾಯ, ಹರಟೆ ಮತ್ತೆಲ್ಲಿಗೋ ತಿರುಗಿತು.

ನನಗೂ ಅನ್ನಿದ್ದುಂಟು, ಈ ಟೀವೀ ಸೀರಿಯಲ್ಗೋಳು ಸಂತೆ ಮಾದರಿಯಾ, 'ಸಂಜೆ ಹೊತ್ಗೆ ಸೀರೆ ಎಂಟ್ಮೊಳ ನೇಯ್ದರಂತೆ' ಅನ್ನೋ ಹಾಗೆ ಕಸರತ್ಮಾಡೋದಾ, ಯಾವ್ಗುಣ ಮಟ್ಟ ಇವಕ್ಕೆ ಅನ್ವಯಿಸ್ತಾರೆ, ಕಥಾ ಹಂದರ ನಮ್ಮ ಹಳೇಕಾಲ್ದ ಕಾದಂಬರಿಗಳ ತರಹ ಬರದು ಮುಗಿಸಿದ್ಮೇಲೆ, ನೋಡಿ, ಚೆನ್ನಾಗಿದೆ ಅಂತ ಹೇಳೊ ಸಾಹಿತಿಗಳ ಮಾತ್ನ ಆಧಾರದ ಮೇಲೆ, ಸ್ಕ್ರಿಪ್ಟ್ ಬರೆಯೋದುಂಟಾ ಅಥವಾ ಇವತ್ತಗಿಷ್ಟು, ನಾಳೆಗೆ ಇನ್ನಷ್ಟು ಅನ್ನೋ ತರಾ ಬರೆದು ಮುಗ್ಸೋದಾ, ಈ ಟೀಆರ್ಪೀ ಅಂದ್ರೆ ಯಾವರೀತಿ ತಕ್ಕಡಿ ಲೆಕ್ಕ?-ನಾನೇ ಸ್ವಲ್ಪ ಜೋರಾಗಿ ಮೆಲಕು ಹಾಕ್ತಾ ಇದ್ದಾಗ ನನ್ಮಾತು ಕೇಳಿಸ್ಕಂಡ ಸೋಮು ಅಂದ ''ಹೊಸ್ದಾಗಿ ಟೀವೀ ಮಾಧ್ಯಮ ಕನ್ನಡಕ್ಕೂ ಸೇರ್ಪಡೆಯಾದಾಗ, ಏಕಮೇವ ಸರ್ಕಾರಿ ಚಾನೆಲ್ ಆಗಿದ್ರೂ ತುಂಬಾ ಒಳ್ಳೊಳ್ಳೆ ಸೀರಿಯಲ್ಗಳು ಬಂದುಹೋದ್ವು, ಮಹಾಭಾರತ್ ಹಿಂದೀಲಿ ತೆಗದ್ರೂ ಇಡೀ ದೇಶ್ವೇ ಎಲ್ಲಾ ಬಿಟ್ಟು ಭಾನ್ವಾರ ಬಂದ್ರೆ ನೋಡೋವ್ರು. ರಸ್ತೆಗಳೆಲ್ಲಾ ಖಾಲಿ ಇರೋವು ಅಂದ್ರೆ ಏನಾಶ್ಚರ್ಯ?''. ರಾಘಣ್ಣಿ ಧ್ವನಿ ಕೂಡಿಸಿದ ''ಇಂದಿನ ಕೆಲವು ಚಾನೆಲ್ಗಳಲ್ಲಿ ಬರುವ ಹಲವು ಸೀರಿಯಲ್ಗಳನ್ನ ದ್ರೌಪದಿಯ ಮಾನಭಂಗದ ಸೀನಲ್ಲಿ ದುಶ್ಶಾಸನ ಸೀರೆ ಎಳೆದೂ ಎಳೆದೂ ಸುಸ್ತಾದರೂ, ಅದು ಅಕ್ಷಯವಾಗುತ್ತಲೇ ಇರುತ್ತಲ್ಲ, ಅದಕ್ಕೆ ಹೋಲಿಸಬಹುದು. ಈ ಸೀರಿಯಲ್ಗಳನ್ನ ವಾರವಾರವೂ ರಬ್ಬರಿನಂತೆ ಎಳೀತಾನೆ ಇರ್ತಾರಲವೋ ವಿಶ್ವ?, ಅದ್ರಲ್ಲಿ ಕಂಟೆಂಟ್, ಥೀಮ್, ಆರಂಭ, ಕೊನೆ ಹುಡುಕಿದ್ರೂ ಸಿಗ್ಬಹುದೇ'' ''ಎಲ್ಲೋ ಹಲವು ಹಾಗೇ ಇದ್ರೂ ಒಂದೇ ತಕಡಿಗೆ ಹಾಕೋದ್ಸರಿಯಲ್ಲ ಸೋಮು, ಕ್ಯಾರೆಕ್ಟರುಗೋಳು ಯಾಕ್ಚೇಂಜ್ ಆಗ಼್ಾರ್ದು, ಕಥೆನಲ್ಲಿ ಅದೆಷ್ಟೋ ತಿರುವುಗಳಿರುತ್ತಯ್ಯ'' ''ನೀ ಏನಾದ್ರೂ ಅನ್ನು, ಇವತ್ತಿನ ಕಥೆ ನಾಳೆ ಬೇರೆ ಆದ್ರೂ ಹೆಚ್ಚೇನಿಲ, ಯಾವಾಗ್ಯಾವಾಗ ಕ್ಯಾರೆಕ್ಟರುಗಳು ಚೇಂಜ್ ಆಗತಾರೋ ಭಗ್ವಂತ್ನೇ ಬಲ''್ಲ, ವಿಶ್ವನಿಗೆ ರೇಗಿತು ''ಗೊತ್ತಾಗ್ತಾನೆ ಪ್ರೇಕ್ಷಕ ಏನು ಮಾಡಬೇಕು, ಕಥೇನಲ್ಲಿ ಎಷ್ಟೋ ತಿರುವುಗಳಿರ್ಬಾರ್ದು ಅಂತ ರೂಲ್ಸಿದೆಯ? ಅಲ್ದೆ ಎಲ್ಲಾ ಸೀರಿಯಲ್ಗಳೂ ಒಂದೇ ತರಾ ಇರಲ್ಲ''. ನಾನಂದೆ''ನೋಡ್ರಯ್ಯ, ಮನೇಲಂತೂ ಇದರಿಂದ ಶಾಂತ ವಾತಾವರಣ, ಸಂತೋಷ ಪಡ್ರಯ್ಯ, ಗಂಡ ಹೆಂಡ್ರ ಮಧ್ಯೆ ಸೀರಿಯಲ್ ವೇಳೆ ಮೌನ ಆವರಿಸಿರುತ್ತೆ, ಇಲ್ಲಾ ಗಂಡ ಕ್ಲಬ್ಬು, ಸ್ನೇಹಿತರುಗಳಿಗೆ ಚಾಲು, ಮಕ್ಕಳು ಮೊಬೈಲ್ನಲ್ಲಿ ಚಾಟು, ಗೇಮು ಇಲ್ಲ ಹೋಮ್ವರ್ಕನಲ್ಲಿ ಡಿಪ್ಪಿಂಗ್, ಇನ್ನ ಅತ್ತೆ, ಸೊಸೆ ಒಟ್ಟಿಗೇ ಕೂತು-ಬಿಡ್ತು ಅನ್ನಿ, ಆ ಕಾಲ ಎಂದೋ ಹೋಯ್ತು, ಈಗ ಮೋದಿ ಯುಗದಲ್ಲಿದೀವಿ, ಅಲ್ವೇನ್ರೋ ಬೆಪ್ಪುತಕ್ಕಡಿಗಳ, ಏನ್ಹೇಳ್ತೀರಾ?'' ಅಂದೆ. ಚಂದ್ರು ಅಂದ ಈ ಮೂವತ್ತು ನಿಮಿಷದ ಸೀರಿಯಲ್ಗಳಲ್ಲಿ ಐದ್ಹೈದು ನಿಮಿಷಗಳಿಗೂ ಬ್ರೇಕು, ಎರಡು-ಮೂರು ನಿಮಿಷಗಳಿಗೂ ಜಾಹೀರಾತು- ನೋಡಿದ್ದನ್ನೇ ಮತ್ತೆ ನೋಡೋದು, ಮುಖ ತೊಳೆಯಕ್ಕೆ ಯಾವ್ದೋ ಸುಂದರಿ ಅರೆನಗ್ನವಾಗಿ ಮೈಯೆಲ್ಲಾ ಕುಲುಕುತ್ತಾ ತೋರ್ಸೋ ಸೋಪು, ಹಲ್ನಲ್ಲಿ ಇರೋ

ಕ್ರಿಮಿಗಳು ಹೋಗಿ ಹೊಸ್ದಾಗಿ ಬರೋವನ್ನ ತಡೆಯೋಕೆ ಇವ್ರ ಬ್ರಾಡ್ ಪೇಸ್ಟ್ ಹಾಕ್ಕೊಳ್ಳೀಂತ, ಇಲ್ವೆ ಆಮಶಂಕೆ ಬಂದ್ರೆ ತಡೆಯೋಕೆ ಇವ್ರ ಗುಳಿಗೆ, ಇಲ್ವೆ ಇವ್ರ ಟೀವಿ ಬಿಟ್ಕೋಹೋಗ್ಬಾರ್ದು ಅಂತ ಮುಂದೆ ತೋರ್ಸೋ ಎರಡು, ಮೂರು ಸೀರಿಯಲ್ಗಳ ವೈಭವಾನ ಮುಂಚೇನೇ ತೋರ್ಸೋ ಜಾಹೀರಾತ್ಗಳು, ಮಧ್ಯೆ ಸಿಗ್ನಲ್ ಟ್ಯೂನ್ ಹೀಗೆ ಕಥೆ ಮುಂದುವರೆಯೋದೇ ಇಲ್ಲ, ಮತ್ತೈದು ನಿಮಿಷ ಸೀರಿಯಲ್ಲು ನಂತರ ಯಥಾ ಪ್ರಕಾರ ಅದೇ ಇಂಗ್ಲೀಷ್ನಲ್ಲಿ ಹೇಳ್ತಾರಲ್ಲ-ಅದೇ ರಿಗಮರೋಲ್. ಜಾಹೀರಾತಿಲ್ದೆ ಏನೂ ಆಗಲ್ಲ ಅದ್ಕೇ. ಹೇಗಾದ್ರೂ ಟೀಆರ್‌ಪೀ ಜೋರಾಗಿದ್ರೇನೆ ನಡೆಯೋದ. ಜನ ನೋಡೋದ, ನಮ್ಮೆಲ್ಲದಾಳು ಗೌರಿ ಪ್ರಕಾರ ಕರ್ಚೀಫ್ನಿಂದ ಎಷ್ಟೆಷ್ಟು ಕಣ್ಣೀರ್ಸುರಸ್ತಾರೋ ನೋಡೋವ್ರು, ಅಷ್ಟೂ ಟೀಆರ್‌ಪೀ ಜಾಸ್ತಿ ಆಗೋದ ಕಣ್ರಾವ್ವ ಅಂತ! ನಂ ರಾಘಣ್ಣೆ ಇನ್ನೂ ಒಂದ್ಸಂಶೋಧನೆ ಮಾಡಿದಾನೆ ನೋಡ್ರೋ ಈ ನಡ್ವೆ ಸಿನಿಮಾ ಗಳ್ತರಾನೇ ಪ್ರೀತಿ, ಪ್ರಣಯ, ಮರ ಸುತ್ತೋದು, ಕಿಡ್ನಾಪು, ಕದಿಯೋದು, ತೋರಸ್ತಾರೆ, ಸದ್ಯ ರೇಪ್ ಇನ್ನಾ ತೋರಸ್ತಾ ಇಲ್ಲಾಂತ್ಕಾಣುತ್ತೆ. ಸೋಮುಗೆ ರೇಗಿತು, ಅಲ್ಲಯ್ಯ, ಅಲ್ಲಿ ಮರ ಸುತ್ತೋದರಿಂದ, ಲವ್ಮಾಡೋದ್ನ ತೋರ್ಸೋದ್ರಿಂದ ಸೀರಿಯಲ್ ಅಚಾನಕ್ ಆಗಿ ಬೆಳೆಯುತ್ತೆ, ಅದಕ್ಕಾಗಿಯಾದ್ರೂ ಮರಗಳ್ನ ಉಳ್ಸಿಕೊಂಡಿದಾರೆ, ಮರಗಳ್ನ ಸುತ್ತಾಡಿದ್ರೆ ನಿಮಗಳಿಗೇನ್ಮಜುಗರ ಸ್ವಾಮಿ, ನೀನೂ ಸಿನೆಮಾ ಪ್ರೀತ್ಸೋದಾದ್ರೆ, ಇದನ್ನೂ ನೋಡ್ಬೋದಲ್ಲವಾ?, ಹನಿಮೂನ್ಗೆ ಹೋದಾಗ ನಿನ್ವಿಚಾರ ಏನಾಗಿತ್ತು? ಸುಮ್ನೆ ಪೇಚಾಡೋದ ಬಿಡು. ಅಂದ. ವಿಶ್ವನಿಗೆ ಮತ್ತೊಬ್ಬ ಇವನ ರೀತೀಲೇ ಮಾತಾಡಿದ್ದು ಖುಶಿಯಾಯ್ತು. ಅವ ಅಂದ ನೋಡ್ರೋ, ರಾಘಣ್ಣೆ ಇನ್ನೂ ಬ್ಯಾಚಲರ್, ಇವ್ನು ಮದುವೆ ಆಗೋ ಹೊತ್ಗೆ ಬೆಂಗಳೂರ್ನಲ್ಲಿ ಮರಗಳ್ನೆಲ್ಲಾ ಉರುಳಿಸ್ಬಿಟ್ಟಿರ್ತಾರೆ, ಸುತ್ತೋ ಪ್ರಶ್ನೇನೇ ಇರೋಲ್ಲ, ಯೋಚ್ನೇನೇನೆ ಬೇಡ.

ನನಗನಸ್ತು 'ವರ್ಷಾನುಗಟ್ಲೆ ಸೀರಿಯಲ್ಗಳ್ನ ರಬ್ಬರ್ ತರಾ ಎಳೀತಾ, ನಮ್ಮೂರ್ನ ಗಮಕದ ಕೀರ್ತನ ಕ್ರಿಷ್ಟಾಚಾರ್ರು ಎಳೆದೆಳೆದು ಹಾಡುವಂತೆ, ನನ್ನಂಥಹವರನ್ನು ಹಿಂಸಿಸೋ ಬದಲು ಮಾಮೂಲಿ ಚಿತ್ರಗಳಂತೆ ಮೂರೋ ಇಲ್ಲ ನಾಲ್ಕು ಘಂಟೆ ಒಳಗೆ ಮುಗಿಯೋ ಸಿನೆಮಾನೇ ಮಾಡಿದ್ರೆ ಸಲೀಸು, ಏನಂತೀರಿ?. ರಾಘಣ್ಣೆ ಇನ್ನೂ ಸಂಶೋಧನೆ ಮುಂದ್ವರೆಸಿದ್ದ, ಅವ್ನ ಪ್ರಕಾರ ಇಲ್ಲೂ ಕೊಲೆ, ದರೋಡೆ, ಥಕಥಕ ಡ್ಯಾನ್ಸು, ಕಿಡ್ನಾಪು, ಮನೇಲಿರೋ ಹೆಂಗಸ್ರು ಏನ್ಮನೆ ಕೆಲ್ಸ ಮಾಡದಿದ್ರೂ, ಯಾವಾಗ್ಲೂ ಪಿತೂರಿ ನಡೆಸೋದನ್ನೇ ಎಳೆವಿಳೆ ಯಾಗ್ತೋರ್ಸ್ತಾರೆ, ಇಲ್ಲಿ ನಾಜೂಕು, ಪ್ರೀತಿ, ವಿಶ್ವಾಸ, ಸಹನೆ ತೋರ್ಸೋದ ಕಮ್ಮಿ, ಏನಂತೀರಿ? ಯಾರ್ ಏನ್ಮಾಡ್ತಾರೋ ಇಲ್ನೋಡ್ದ್ರೆ ನೀತಿ ಪಾಠ ಕಲಿಸ್ತಾರೆ-ಅತ್ತೆ ಮೇಲೆ ಸೊಸೆ, ಸೊಸೆ ಮೇಲೆ ನಾದ್ನಿ, ಇಲ್ವೆ ನಾದಿನಿ ಮೇಲೆ ಚಿಕ್ಕಪ್ಪನೋ ಇನ್ನ್ಯಾರೋ ಕತ್ತಿ ಮಸೀಯೋದ್ನ ತೋರಿಸ್ತಾ, ಹೊಸ್ದಾಗಿ ಮದ್ವೆ ಆಗ್ಬರೋ ಸೊಸೆ ಇವೆಲ್ಲಾ ತಲೇಲಿಟ್ಕಂಡ್, ಕಂಡೀಷನ್ಮಾಡೇ ಅತ್ತೆ ಮನೆಗೆ ಕಾಲಿಟ್ಟರೆ ಸಮಾಜ ಹೇಗಿರುತ್ತಯ್ಯ?. ಸೇರಿಸಿದ ವಿಶ್ವ ಹೀಗಾದರೆ ಹೆತ್ತು, ಹೊತ್ತು ಸಾಕಿದಾ ಮಕ್ಕಳೇ ವಯಸ್ಸಾದ ಅಪ್ಪ, ಅಮ್ಮಂದಿರನ್ನ

ವೃಧ್ಧಾಶ್ರಮಕ್ಕೆ ಕಳುಹಿಸಿ, ನೆಮ್ಮದಿಯಾಗಿರ್ತಾರೇನೋ? ಅದಕ್ಕೆ ಸೋಮು ಹೇಳಿದ ಈಗೆಲ್ಲಾ ಹಾಗೇ ಆಗ್ತಾ ಇರೋದು ನೀವ್ಗಳು ಕೇಳ್ಳಿಲ್ಲವೇನ್ರೋ?

ನನಗೆ ತಿಳಿದಿರೋ ಹಾಗೆ ಒಂದ್ಕಾಲ್ದಲ್ಲಿ ರೇಡಿಯೋ ಎಂಬ ಮ್ಯಾಜಿಕ್ ಪೆಟ್ಟಿಗೆಗೆ ಮರುಳಾಗಿ, ಕ್ರಿಕೆಟ್ ಮ್ಯಾಚ್ಗಳನ್ನ ಆಗಿನ ಕಾಮೆಂಟೇಟರ್ಗಳ-ವಿಜಿ, ಸುರೇಶ ರೈನ, ಬೆರ್ರಿ ಸರ್ವಾಧಿಕಾರಿ, ಆನಂದ್ರಾವ್, ಚಕ್ರಪಾಣಿ-ಇಂಥವ್ರ ಮಾತ್ಕೇಳಕ್ಕೆ ರೇಡಿಯೋಗೆ ಅಂಟ್ಕೊಂಡಿರ್ತಿದ್ದುದು, ಮನೆಗಳಲ್ಲಿ ರೇಡಿಯೋ ಇಲ್ಲದವರು ದಾರಿಯಲ್ಲಿನ ಹೋಟೆಲುಗಳ ಮುಂದೆ ನಿಂತು ವಿವರಣೆ ಕೇಳಿ, ನಮ್ಮವರು ಬೌಂಡರಿ ಬಾರಿಸಿದರೆ ಹಿಗ್ಗಿ ಕೇಕೆ ಹಾಕುವುದು, ಔಟಾದರೆ ಹಿಡಿ ಶಾಪ ಹಾಕುವುದು ಮಾಮೂಲಿಯಾಗಿತ್ತು! ದೊಡ್ಡವ್ರ ಕೈಲಿ ಬೈಯಿಸ್ಕೊಳ್ಳೋದು ಅನಿವಾರ್ಯ! ಸೈಗಾಲ, ರಫಿ, ಲತಾ, ಆಶಾ, ಮನ್ನಾಡೇ, ಮಹಾಲಿಂಗಂ, ಕಾಳಿಂಗ ರಾವ, ಪಿಟೀಲು ಚೌಡಯ್ಯ, ಜಾನಕಿ, ಅನಂತಸ್ವಾಮಿ-ಹೀಗೆ ಅವರೆಲ್ಲರ ಹಾಡುಗಳಿಗೆ ದೊಡ್ಡ ಸ್ಪೀಕರ್ನ ಮುಂದೆ ನಾಯಿಯೊಂದು ಎದುರು ನೋಡ್ತಾ ಇರೋ ಗ್ರಾಮಾಫೋನ್‌ಗೆ ಮುಗಿ ಬೀಳ್ತಾ ಇದ್ದು, ನಂತರ ಇನ್ನೊಂದು ಕ್ರಾಂತಿಯಾಗಿ, ಟೇಪ್ ರಿಕಾರ್ಡುಗಳು ಕಾಲಿಟ್ಟು, ಎರಡೇ ದಶಕಗಳ ಅಂತರದಲ್ಲಿ ಇವೂ ಮೂಲೆಗೆ ತಳ್ಳಲ್ಪಟ್ಟು, ಫ್ಲಾಪಿ, ಡಿಸ್ಕು, ಬಂದವು, ಈ ಮಧ್ಯೆ ಎಂಭತ್ತರ ದಶಕದ ನಂತರ ಈ ಆಧುನಿಕ ಮೂರ್ಖ ಪೆಟ್ಟಿಗೆ ಯಾವಾಗ ಬಂತೋ ಅಲ್ಲಿಂದ ಎಲ್ಲಾ ಜನರ ಸಂಸ್ಕೃತಿಯೇ ಬದಲಾವಣೆ ಆಗಿರೋದು, ಆಗ್ತಾ ಇರೋದ್ನ ನಾವೆಲ್ಲಾ ಇಂದು ಕಾಣ್ತಾ ಇದೇವಲ್ಲ? ಇವೆಲ್ಲಕ್ಕಿಂತ ಹೆಚ್ಚು ಪರಿಣಾಮ ಬೀದಿಬದಿಯ ಕಳ್ಳೇಕಾಯಿ ಮಾರುವ ಅಜ್ಜಿಯಿಂದ ಹಿಡಿದು, ಮೂರು ವರುಷದ ಪುಟಾಣಿ ಮಕ್ಕಳನ್ನೂ, ರಾಷ್ಟ್ರಾಧ್ಯಕ್ಷರಿಂದ ಹಿಡಿದು, ಡವಾಲಿ ಜವಾನನ ತನಕ ಬಿಡದೆ ಆಮರಿಕೊಂಡ ಸೆಲ್ಫೋನ್ ಎಂಬ ಅಂಗೈ ಅಗಲದ ಮಾಯಾವಿನಿಯ ಮರುಳಾಟಕ್ಕೆ, ವಾಟ್ಸಪ್ ಚಾಟ್ಗೆ ಮುಗಿಬೀಳದವರ್ಯಾರು? ಇದೀಗಿನ ಜನಕ್ಕೆ ಉಪಹಾರ, ಊಟ ಮಧ್ಯೆಯೂ ಸೆಲ್ಫೋನು ಜ್ಞಾನ ಸಂಜೀವನಿಯೇ ಆಗಿಹೋಗಿದೆಯೆನ್ನುವ ಮಾತು ಸತ್ಯಕ್ಕೆ ದೂರವಿಲ್ಲ! ಅಂದು ಆ ಸಾಧನಗಳು ಎಲ್ಲರನ್ನೂ ರೊಮಾಂಟಿಕ್ ಯುಗಕ್ಕೆ ತಳ್ಳಿದ್ದರೆ, ಇದೀಗ ಸೆಲ್ಫೋನು, ಟೀವೀ ಚಾನೆಲ್ಗಳಿಂದಾಗಿ ಎಲ್ಲೋ ನಡೆಯುವ ಕೊಲೆ, ಸುಲಿಗೆ, ಅತ್ಯಾಚಾರ, ಯಾರು, ಎಲ್ಲಿ, ಏನುಮಾಡುತ್ತಿದ್ದಾರೆ ಎಂಬುದನ್ನೂ ಮನೆಯಲ್ಲಿ ಕೂತೇ ತಿಳಿದು, ನೋಡುವಂತಹ ಸಂಸ್ಕೃತಿಗೆ ಹೊಂದಿಕೊಂಡಾಗಿಲ್ಲವೆ? ಇನ್ನು ಈ ಟೀವೀ ಚಾನೆಲ್‌ಗಳ ಟೀಆರ್ಪೀ ರೇಟಿಂಗ್ ಎಂಬ ರಕ್ಕಸನ ಬಗ್ಗೆ ಯಾಕಾದರೂ ತಲೆ ಕೆಡಿಸಕೊಳ್ಳಬೇಕು ಸೋಮು, ವಿಶ್ವ, ಚಂದ್ರು, ರಾಘಣ್ಣೀ? ನಾ ಹೇಳಿದ್ದ ಸರೀನಾ, ತಪ್ಪಾ, ಎರಡೂ ಅಲ್ಲಾ ಅಂದ್ರೆ ಇನ್ನೇನ್ರಪ್ಪಾ ನೀವೇ ಹೇಳಿ?

ವೇದೋಕ್ತಿಯ ಸತ್ಯಂ ವದ, ಧರ್ಮಂ ಚರ ಹಾಗೂ ಭದ್ರಂ ಕರ್ಣೇಭಿ: ಶ್ರುಣುಯಾಮ ದೇವಾ:, ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾ:/ ಸ್ಥಿರೈರಙ್ಗೈಸ್ತುಷ್ಟುವಾಗಂ ಸಸ್ತೂನೂಭಿ:, ವ್ಯಶೇಮ ದೇವಹಿತಂ ಯದಾಯು:// ಎಂಬ ಶಾಂತಿ ಮಂತ್ರದಂತೆ ಒಳ್ಳೆಯ ದಿನಗಳು ಬರುವುದೋ ಕಾದು ನೋಡೋಣ. ಏನ್ಹೇಳ್ತೀರಿ?

❑

# ಕುದುರೆಯ ಕಳಕಳಿ

**- ನಂನಾಗ್ರಾಜ್**

ನಮ್ಮ ನಿಮ್ಮ ಸಂಬಂಧ ಅನಾದಿಕಾಲದಿಂದ, ಯುದ್ಧ, ವ್ಯವಸಾಯ, ಸಾರಿಗೆ, ವಾಣಿಜ್ಯ, ಕಾನೂನು, ಕ್ರೀಡೆ ಹಾಗೂ ಮನೋರಂಜನೆ ಕ್ಷೇತ್ರಗಳಲ್ಲಿ ನಿಮಗೆ ಅಮೋಘ ಸೇವೆ ಸಲ್ಲಿಸುತ್ತಾ ಬಂದಿದ್ದೇವೆ. ಇದಕ್ಕಾಗಿ ನೀವು ನಮಗೆ ಕೃತಜ್ಞರಾಗಿರುವುದರ ಬದಲು ನಮ್ಮ ಹೆಸರನ್ನು ನಿಮ್ಮ ಜೀವನದ ಹಲವು ಸನ್ನಿವೇಶ / ಸಂದರ್ಭಗಳಿಗೆ ಅಸಂಬದ್ಧವಾಗಿ ಜೋಡಿಸಿ / ಹೋಲಿಸಿ ನಮ್ಮ ಹೆಸರನ್ನು ಮಲಿನ ಮಾಡುತ್ತಿದ್ದೀರ. ಇದರಲ್ಲಿ ಕೆಲವು ತಮಾಷೆಯಾಗಿದ್ದರೆ ಮತ್ತು ಕೆಲವು ತಮಾಷೆಯಾಗಿಲ್ಲದೇ ಅಲ್ಲದೆ ಏಕ್‌ದಂ ಆಕ್ಷೇಪಣೀಯವಾಗಿವೆ. ಇವೆಲ್ಲವನ್ನು ಗಮನಿಸೋಣ:

**ಕುದುರೆಗಳು ಮಾತಾಡುವಂತಿದ್ದರೆ ನಮ್ಮ ಜನ್ಮ ಜಾಲಾಡುತ್ತಿದ್ದವು**

### ಸ್ಟ್ರೈಟ್ ಫ್ರಂ ದಿ ಹಾರ್ಸ್‌ಸ್ ಮೌತ್

ನೇರವಾಗಿ ಕುದುರೆ ಬಾಯಿಂದ ಅಂದರೆ ‘ಉನ್ನತ ಮೂಲಗಳಿಂದ’ ಎಂದು. ಇದು ಕುಹಕವಲ್ಲವೇ? ನಮ್ಮ ಸ್ಥಾನ ನಮಗೆ ಗೊತ್ತಿಲ್ಲವೇ? ನಿಮ್ಮ ಅಡಿಯ ಕೆಳಗೆ!

ಎಷ್ಟೇ ಆಗಲಿ ನೀವು ನಮ್ಮನ್ನು ‘ಸವಾರಿಗೆ’ ಕರೆದುಕೊಂಡು ಹೋಗುತ್ತಾನೇ ಬಂದಿದ್ದೀರಲ್ಲವೇ?

### ಕ್ಲೋಸಿಂಗ್ ದಿ ಸ್ಟೇಬಲ್ ಆಫ್ಟರ್ ದಿ ಹಾರ್ಸ್ ಹ್ಯಾಸ್ ಬೋಲ್ಟ್ಡ್

ನಿಮ್ಮ ಅಜಾಗರೂಕತೆ ಹಾಗೂ ನಿರ್ಲಕ್ಷ್ಯದಿಂದ ಉದ್ಭವಿಸಿದ ಮುಜುಗರ ಹಾಗೂ ನಷ್ಟದ ಸನ್ನಿವೇಶಗಳಿಗೆ ನಮ್ಮ ಹೆಸರನ್ನು ಎಳೆದು ಪರಿಹಾಸ್ಯ ಮಾಡುತ್ತೀರಲ್ಲಾ? ಚೆನ್ನಾಗಿದೆ! ನಾವು ಹುಟ್ಟಾ ಸ್ವತಂತ್ರರು ನಮ್ಮನ್ನು ಬಲವಂತವಾಗಿ ಬಂಧನದಲ್ಲಿಡುತ್ತೀರ. ನೀವು ಅಜಾಗರೂಕತೆಯಿಂದ ಲಾಯದ ಬಾಗಿಲು ಮುಚ್ಚದೇ ಹೊರಟರೆ ‘ಯಜಮಾನ್ರೇ ಬಾಗಿಲು ಭದ್ರವಾಗಿ ಹಾಕ್ಕೊಂಡು ಹೋಗಿ’ ಎಂದು ಕೂಗಿ ಹೇಳಬೇಕಾ? ಅಷ್ಟು ಪೆದ್ದರಲ್ಲ ನಾವು ಸುವರ್ಣಾವಕಾಶ ಎಂದುಕೊಂಡು ತಕ್ಷಣ ಓಟ ಕಿತ್ತಿಬಿಡ್ತೀವಿ!

### ಹೈ ಹಾರ್ಸ್

ಹೌದು ನಾವು ಎತ್ತರವಾಗಿದ್ದೇವೆ. ಅದು ದೈವದತ್ತವಾದ್ದು ನಿಮ್ಮ ಸೊಕ್ಕಿನ ಹಾಗೂ ಸ್ವಪ್ರತಿಷ್ಠೆಯ ಮನೋಭಾವಗಳಿಗೂ ನಮ್ಮ ಆಕಾರಕ್ಕೂ ಏನ್ರೀ ಸಂಬಂಧ? ಸಲ್ಲದ ದೂಷಣೆ. ಲಘುವಾಗಿ ಹೇಳುವುದಾದರೆ ಇದೊಂದು ಹಾಸ್ಯಾಸ್ಪದ ಹೋಲಿಕೆ.

### ಟೇಕಿಂಗ್ ದಿ ಹಾರ್ಸ್ ಟು ದಿ ವಾಟರ್

ನಾವು ಹಸಿವಾದರೆ ಮಾತ್ರ ತಿನ್ನುತ್ತೇವೆ, ಬಾಯಾರಿಕೆ ಆದಾಗ ಮಾತ್ರ ನೀರು ಕುಡಿಯುತ್ತೇವೆ ನೀವು ಚಪಲಕ್ಕಾಗಿಯೂ ತಿನ್ನುತ್ತೀರಿ ಹಾಗೂ ಬಾಯಾರಿಕೆ ಇಲ್ಲದಿದ್ದಾಗಲೂ ನೀರು ಕುಡಿಯುತ್ತೀರಿ. ನೀವು ನಮ್ಮನ್ನು ನೀರಿನ ಹತ್ತಿರ ಕರೆದುಕೊಂಡು ಹೋದ ಮಾತ್ರಕ್ಕೆ ನಾವು ಕುಡಿಯಬೇಕೆಂದು ನಿರೀಕ್ಷಿಸುತ್ತೀರಲ್ಲಾ? ಬೇಡದಿದ್ದರೆ

ಕುಡಿಯುವುದಿಲ್ಲ. ನಮ್ಮ ಈ ನಿಲುವನ್ನು ನಿಮ್ಮ ಜೀವನದ ಕೆಲವು ಸನ್ನಿವೇಶಗಳಿಗೆ (ಉದಾ: ನಿಮ್ಮ ಸಹಾಯ ಹಾಗೂ ಸಹಕಾರ ದೊರಕಿಯೂ ಯಾರಾದರೂ ನಿಮ್ಮ ಅಪೇಕ್ಷೆಗೆ ತಕ್ಕಂತೆ ಗುರಿಯನ್ನು ಮುಟ್ಟದಿದ್ದಾಗ) ಹೋಲಿಸಿದಾಗ ಅದು ಅಪರಾಧವಾಗುತ್ತದೆ.

**ಹಾರ್ಸ್ ಸೆನ್ಸ್**

ಇಲ್ಲಿ ನಿಮ್ಮ ಚುಚ್ಚು ಮಾತನ್ನು ಗುರುತಿಸಲು ನಮಗೆ ಕಷ್ಟವೇನೂ ಇಲ್ಲ!

ಹಾರ್ಸ್ ಟ್ರೇಡಿಂಗ್ ಪಾರ್ಲಿಮೆಂಟ್ ಮತ್ತು ಅಸೆಂಬ್ಲಿಗಳಲ್ಲಿ ಯಾವುದೇ ಒಂದು ಪಕ್ಷ ಬಹುಮತ ಗಳಿಸದಿರುವ ಸಂದರ್ಭಗಳಲ್ಲಿ ಬಹುಮತಗಳಿಸಲು ಒಂದು ಪಕ್ಷದವರು ಬೇರೊಂದು ಪಕ್ಷದ ಸದಸ್ಯರನ್ನು ನಿರಾಕರಿಸಲಾಗದಷ್ಟು ದೊಡ್ಡ ಮೊತ್ತವನ್ನೋ/ ಆಮಿಷಗಳನ್ನೋ ಒಡ್ಡಿ ಖರೀದಿಸುತ್ತಾರೆ. ಈ ನಾಚಿಕೆಗೇಡು ಚಟುವಟಿಕೆಯಲ್ಲಿ ನಮ್ಮ ಹೆಸರನ್ನೇಕೆ ಎಳೆಯುತ್ತೀರ? ನಮ್ಮಲ್ಲಿ ರಾಜಕೀಯವೇ ಇಲ್ಲ. ಮೇಲಾಗಿ ನಾವು ನೀತಿ ಶಾಸ್ತ್ರ ಹಾಗೂ ನೀತಿ ಸಂಹಿತಿಗಳನ್ನು ಎಂದೂ ಬಲಿಕೊಡುವುದಿಲ್ಲ. ನಿಲ್ಲಿಸಿ ಈ ಅಸಂಬದ್ಧ ಹೋಲಿಕೆಯನ್ನು!

**ಕ್ರೀಡೆ ಮತ್ತು ಮನರಂಜನೆ**

ವಿವಿಧ ಕ್ಷೇತ್ರಗಳಲ್ಲಿ ನಮ್ಮ ಕೊಡುಗೆ ಸಾಲದೆಂಬಂತೆ ಕ್ರೀಡೆ ಹಾಗೂ ಮನರಂಜನೆ ಕ್ಷೇತ್ರಗಳಲ್ಲಿ ಕೂಡ ನಮ್ಮನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದೀರ. ನೀವು ಹುಟ್ಟಾ ಸೊಂಬೇರಿಗಳು ಹಾಗೂ ಶೋಕಿದಾರರು ಹಾಗಾಗಿ ಹಾರ್ಸ್ ಪೋಲೊ ಎಂಬ ಕ್ರೀಡೆಯನ್ನು ಸೃಷ್ಟಿಸಿ ನಮ್ಮ ಮೇಲೆ ಸವಾರಿ ಮಾಡುತ್ತಾ ಆಡುತ್ತೀರಿ. ನಗೆಪಾಟಲು!

ಮತ್ತೊಂದು ಕ್ರೀಡೆ – ಈಕ್ವೆಸ್ಟ್ರಿಯನ್. ಈ ಕ್ರೀಡೆಗೆ ನಮ್ಮನ್ನು ಬಲವಂತವಾಗಿ ಪಳಗಿಸಿ ತರಬೇತಿ ಕೊಡುತ್ತೀರ ನಾವು ಬೇಗ ಕಲಿತುಕೊಳ್ಳುತ್ತೀವಿ, ಕೂಡ. ಸ್ಪರ್ಧೆಗಳಲ್ಲಿ ನಮ್ಮ ಕೌಶಲ್ಯ ಹಾಗೂ ದಕ್ಷತೆಯ ಸಹಾಯದಿಂದ ಗೆದ್ದು ವೇದಿಕೆಯ ಮೇಲೆ ಛಾಯಾಗ್ರಾಹಕರಿಗೆ ಭಂಗಿ ಕೊಟ್ಟು ಪದಕ ಹಾಕಿಸಿಕೊಂಡು ಬೀಗುತ್ತೀರ. ಪ್ರಾಮಾಣಿಕವಾಗಿ ಹೇಳಿ ಆ ಪದಕಕ್ಕೆ ಅರ್ಹರಾದವರು ನಾವಲ್ಲವಾರೀ?

ಬಹಳ ಬೇಜಾರು ತರಿಸುವ ಮತ್ತೊಂದು ಕ್ಷೇತ್ರವೆಂದರೆ ಸರ್ಕಸ್. ಎಷ್ಟೊಂದು ಹೀನಾಯವಾಗಿ ನಮ್ಮನ್ನು ಬಳಿಸಿಕೊಳ್ಳುತ್ತೀರ. ನಿಮಗೆ ಧಿಕ್ಕಾರವಿರಲಿ. ಸ್ಟೆಪ್ ಗ್ರಿಪ್ ಇಲ್ಲದೆ ನೀವು ನಮ್ಮ ಮೇಲೆ ಕೂರಲು ಕೂಡ ಸಾಧ್ಯವಿಲ್ಲ. ಇನ್ನು ನಿಯಂತ್ರಣಕ್ಕೆ ಬ್ಲಿಂಕರ್ಸ್ ಹಾಗೂ ಮೂಗುದಾರ. ಸಾಲದೂಂತ ಚರ್ಮದ ತೂಕವಾದ ಸ್ಯಾಡಲ್. ನಿಮ್ಮ ಹಿಂಭಾಗ ಹಿತವಾಗಿರಬೇಕಲ್ಲ! ನಿಮಗೆ ಸುಖಾಸೀನ. ನಮಗೆ ವ್ಯಸನ.

ಇವೆಲ್ಲ ಸಲಕರಣೆ, ಸಂಜಾಮು ಇಲ್ಲದೆ ನಮ್ಮ ಸವಾರಿ ಮಾಡಿ ನೋಡೋಣ. ಸವಾರಿ ಇರಲಿ, ಕುಳಿತುಕೊಳ್ಳಲೇ ಸಾಧ್ಯವಾಗುವುದಿಲ್ಲ ಹಾಗೂ ಹೀಗೂ ಕುಳಿತುಕೊಂಡಿರಿ ಅಂದುಕೊಳ್ಳೋಣ ನಾವು ಜಿಗಿಯುವುದಿರಲಿ ಸ್ವಲ್ಪಬಿಕ್ಕಳಿಸಿದರೆ ಸಾಕು ಬಿದ್ದೋಗ್ತೀರ ಇನ್ನು ಸವಾರಿ ಎಲ್ಬಂತೂ?

ನಿಮ್ಮ ಪರಸ್ಥಳದ ಪ್ರಯಾಣದ ಸಂದರ್ಭಗಳಲ್ಲಿ ನಿಮ್ಮ ಮನೆ ಮಂದಿಯನ್ನು ಹಾಗೂ ಸಕಲ ಸಾಮಾನು ಸರಂಜಾಮುಗಳನ್ನು ಗಾಡಿಯಲ್ಲಿ ಹೊತ್ತು ಏದುಸಿರು ಬಿಟ್ಕೊಂಡು ಎಳ್ಕೊಂಡು ಹೋಗುತ್ತಿದ್ದ ನೆನಪು ಮನಸ್ಸಿನಲ್ಲಿ ಭಾರವಾಗಿ ಉಳಿದಿದೆ. ಸಾಯೇಬು ಗಾಡಿ ಫ್ರೇಂ ಮೇಲೆ


ವೀರ ಮಂಡಿಯಲ್ಲಿ ಕುಳಿತು ಮುಂದೆ ಬನ್ನಿ, ಥೋಡಾ ಹಿಂದೆ ಹೋಗಿ ಎಂದು ಜರುಗಿಸುತ್ತಿದ್ದ ಕೆಲವೊಮ್ಮೆ ಹಿಂಭಾರ ಹೆಚ್ಚಾಗಿ ನಾನು ಏರಬೋರ್ನ್ ಆದ ಸಂದರ್ಭಗಳೂ ಉಂಟು.

ಒಂದು ಬಡಕಲು ಕುದುರೆಯ ಬಗ್ಗೆ ಅನುಕಂಪವೇ ಬೇಡ್ವೇ? ಬೆಳಗಿನ ನಾಷ್ಟಗೆ ಸಾಯೇಬು ತಿನ್ನಿಸಿದ್ದ ಹುರುಳಿ ಹಾಗೂ ಭಾರದ ಗಾಡಿ ಎಳೆಯುವ ಕಸರತ್ತಿನ ಪ್ರಭಾವದಿಂದ ಎರಡೆರಡು ಹೆಜ್ಜೆಗೂ ಗ್ಯಾಸ್ ಔಟ್ ಆಗ್ತಿದ್ದ ಕಾರಣ ಸಾಯೇಬೂ ಬಾಜೂ ಬಾಜೂ ಎಂದು ಅರಚುವ ಪ್ರಮೇಯವೇ ಬರಲಿಲ್ಲ! ನಿಮ್ಮನ್ನೆಲ್ಲಾ ಒತ್ತಾಕ್ಕೊಂಡು ಟೇಸನ್ ತಾವ್ಕೆ ಸೇರೋ ಒತ್ಗೆ ನನ್ನ ಬುಡ ಬಿಚ್ಕೋಗಿರ್ತಿತ್ತು!

ಒಂದು ಹಾಸ್ಯ ಪ್ರಸಂಗ ನೆನಪಿಗೆ ಬರ್ತಿದೆ ನಿಮ್ಮೊಡನೆ ಶೇರ್ ಮಾಡ್ಕೋಳ್ತೀನಿ. ನೀವು ಲೈಕ್ ಮಾಡಿ ಶೇರ್ ಮಾಡಿ ಪ್ಲೀಸ್! ಧಡೂತಿ ಹೆಂಗಸೊಬ್ಬಳು ತೂಕ ಕಡಿಮೆ ಮಾಡಿಕೊಳ್ಳುವ ಬಗ್ಗೆ ಪರಿಣಿತರೊಬ್ಬರನ್ನು ಸಲಹೆ ಕೇಳಿದಾಗ ಅವರು ಅವಳಿಗೆ 15 ದಿನಗಳ ಕುದುರೆ ಸವಾರಿ ಮಾಡಲು ಹೇಳುತ್ತಾರೆ. ಇದೆಲ್ಲಾ ಓ.ಕೆ. ಆದರೆ ನಾನೇ ಏಕೆ? ನನ್ನ ಪೂರ್ವಿಕರೋ ರಾಜ, ಮಹಾರಾಜರನ್ನು ಹಾಗೂ ವೀರಾಧಿ ವೀರರನ್ನು ಹೊತ್ತು ಓಡಿದ್ದರು ನನ್ನ ಪ್ರಾರಬ್ಧ ಕರ್ಮ ಇರಲಿ. ಅವಳಿಗೋ ತೂಕ ಕಡಿಮೆ ಆಗಿಸಿಕೊಳ್ಳುವ ಸಡಗರ ನನಗಾದರೋ ಅವಳ ಮಣ ಭಾರದ ಬುಡದ ಮುಜುಗರ ವಿಚಿತ್ರ ಎಂದರೆ ಪರಿಣಿತರು ಹೇಳಿದ್ದು ನಿಜವಾಯಿತು, 15 ದಿನಗಳಲ್ಲಿ 10 ಕೆ.ಜಿ. ತೂಕ ಕಮ್ಮಿ ಆಗಿತ್ತು – ನನ್ನದು. ಅವಳದಲ್ಲ!

ಇವೆಲ್ಲ ಹೇಗೋ ಸಹಿಸಿಕೊಳ್ಳುತ್ತೇವೆ ದೊಡ್ಡ ದುರಂತವೆಂದರೆ ಹಾರ್ಸ್ ರೇಸಿಂಗ್. ಈ ಅನಿಷ್ಟ ಚಟುವಟಿಕೆಗೆ ನಮ್ಮನ್ನು ಆರಿಸಿಕೊಂಡಿರಲ್ಲ ಎಂತಹ ದುರ್ವಿಧಿ ನಮ್ಮದು. ರೇಸ್ ಕೋರ್ಸ್‌ಗಳಲ್ಲಿ ನಿಮ್ಮ ನಡವಳಿಕೆ ಯಾವ ಹುಚ್ಚಾಸ್ಪತ್ರೆಯ ಸನ್ನಿವೇಶವನ್ನೂ ನಾಚಿಸುತ್ತದೆ. ತಮಾಷೆ ಎಂದರೆ ನಿಮ್ಮ ಹತ್ತಿರದ ಬಂಧು ಬಳಗದವರ ಪರಿಚಯ ಇರದಿದ್ದರೂ ನಮ್ಮ ಕಸಿನ್, ಅಂಕಲ್ಲು ಆಂಟಿಗಳ ಪರಿಚಯ ನಿಮಗೆ ಬಾಯಿ ಪಾಠವಾಗಿರತ್ತೆ! ನಿಮ್ಮ ಮಕ್ಕಳ ಗ್ರೇಡ್ಸ್ ನೆನಪಿಲ್ಲದಿರಬಹುದು, ಆದರೆ, ನಮ್ಮ ಹಲವು ವರ್ಷದ ದಾಖಲೆ ನೆನಪಿರುತ್ತೆ! ಶ್ಲೋಕದ ಪುಸ್ತಕ ನೀವು ಓದದಿರಬಹುದು ಆದರೆ ರೇಸ್ ಬುಕ್ ಅನ್ನು ಪದೇ ಪದೇ ಪಠಿಸುತ್ತೀರಿ. ಅದೇ ನಿಮ್ಮ ಭಗವದ್ಗೀತೆ.

❑



# ‘ಅನುಭವ’ ನೋಡಿದ ಅನುಭವ

**- ರೇಖಾ ಹೆಗಡೆ ಬಾಳೇಸರ**

**ಮ**ನೆಯಲ್ಲಿ ಹದಾ ಬೆಳೆದ ಮಕ್ಕಳಿರುವಾಗ ಭಾರಿ ಹುಶಾರಿರಬೇಕು ಮಾರಾಯರೇ. ಹದಾ ಎಂದರೆ ಇನ್ನೂ ಹದಿಯರೆಯದ ‘ಎಲ್ಲ ಬಲ್ಲಪ್ಪ’ ಹಂತ ಮುಟ್ಟದ, ಆದರೆ ಎಳೆಮಗುವಿನ ಮುಗ್ಧತೆಯ ಪೊರೆ ಕಳಚಿದ ಸ್ಥಿತಿ. ಆನ್‌ಲೈನ್ ಪತ್ರಿಕೆ, ಯೂಟ್ಯೂಬ್ ತೆರೆದು ಯಾವುದೋ ಮಜಕೂರಿನ ವಿಷಯ ತೋರಿಸೋಣವೆಂದರೆ ಒಂದೆರಡು ಲಿಂಕ್ ದಾಟುವುದರೊಳಗೆ ಎಲ್ಲಿಂದಲೋ ಆಕ್ಷೇಪಾರ್ಹ ಚಿತ್ರವೋ, ವೀಡಿಯೋವೋ ಅಚಾನಕ್ಕಾಗಿ ವಿಶ್ವಾಮಿತ್ರನೆದುರು ಮೇನಕೆ ಬಂದಂತೆ ಬಂದು ನಿಲ್ಲುತ್ತವೆ. ಮಕ್ಕಳಿಗೆ ಮುಜುಗರ, ಅಪ್ಪ-ಅಮ್ಮನಿಗೆ ಗಲಿಬಿಲಿ... ಒಟ್ಟಿನಲ್ಲಿ ಎಲ್ಲರಿಗೂ ಚಗುಳಿ ಕೊಟ್ಟ ಮೇಲೆ ನಿಂತ ಹಾಗೆ ಚಡಪಡಿಕೆ.

ಇತ್ತೀಚೆಗೆ ರಾಜಕಾರಣಿಯೊಬ್ಬರು ಸಖಿ ಜೊತೆ ನಡೆಸಿದ ಸರಸಲೀಲೆಗಳೆಲ್ಲ ಟಿವಿ ಪರದೆ ಮೇಲೆ ‘ಬ್ರೇಕಿಂಗ್ ನ್ಯೂಸ್’ ಆಗಿ ಜನತೆಯೆದುರು ಬತ್ತಲಾಗುತ್ತಿದ್ದ ಹೊತ್ತಿನಲ್ಲಿ ಸಹ ಬಹಳಷ್ಟು ಜನರದ್ದು ಒಂದೇ ಚಿಂತೆ– ‘ಇಂಥದ್ದೆಲ್ಲ ಟಿವಿಯಲ್ಲಿ ಬರೋಕೆ ಶುರುವಾದ್ರೆ ಮನೆ ಮಂದಿ, ಮಕ್ಕಳೆದುರು ವಾರ್ತೆ ನೋಡೋದು ಹೇಗೆ?’ ಎಂದು ಆಗಲೇ ಸಿನೆಮಾ ಮಡಿಸೀರೆ ಕಳಚಿ ಮಡಿಚಿಟ್ಟು ಬಹಳ ಕಾಲವಾಗಿದೆ. ಟಿವಿನಾದ್ರೂ ಒಟ್ಟಿಗೆ ಕೂತು ನೋಡೋಣವೆಂದ್ರೆ ಅದೂ ‘ಎ’ ಸರ್ಟಿಫಿಕೇಟ್ ಮಟ್ಟಕ್ಕೆ ಬಂತಲ್ಲ ಎಂದು ಹಲವರು ಆನ್‌ಲೈನ್ ಚರ್ಚೆಗಳಲ್ಲಿ ನಿಡುಸುಯ್ದರು.

ಈಗೇನೋ ಇಂಥ ಅನುಚಿತ ಸರ್ ಪ್ರೈಸ್ ಕೊಡಲು ಟಿವಿ, ಇಂಟರ್ ನೆಟ್, ವಾಟ್ಸಾಪ್ ಏನೆಲ್ಲ ಇವೆ. ಇವೆಲ್ಲ ಇಲ್ಲದ ಕಾಲದಲ್ಲೂ ಅಪರೂಪಕ್ಕೆ ಮಡಿವಂತಿಕೆಯ ತೆರೆ ಸರಿಸಿಕೊಂಡು ಮುಜುಗರ ಮುಖ ತೋರಿಸಿ ಹೋಗುತ್ತಿತ್ತು. ನನ್ನ ಖಾತೆಯಲ್ಲೂ ಇಂಥದೊಂದು ‘ಎ’ ಸರ್ಟಿಫಿಕೇಟ್ ಅನುಭವ ಇದೆ, ಈಗ ನೆನಪಿಗೆ ಬಂದಾಗಲೆಲ್ಲಾ ನಗು ಬರುತ್ತದೆ.

★★★

ಅಪ್ಪ-ಅಮ್ಮ ಜಮೀನು ನೋಡಿಕೊಂಡು ಇದ್ದ ಊರಿನಲ್ಲಿ ಸರಿಯಾದ ಶಾಲೆ ಇಲ್ಲದ್ದರಿಂದ ಚಿಕ್ಕಂದಿನಲ್ಲಿ ಅಣ್ಣ-ಅಕ್ಕ ಮತ್ತು ನಾನು ಅಜ್ಜಿಯ ಊರಿನಲ್ಲಿ ಉಳಿದು ಶಾಲೆಗೆ ಹೋಗುತ್ತಿದ್ದೆವು. ಅಜ್ಜಿ ಊರಿಗೂ, ಅಪ್ಪನ ಊರಿಗೂ ಸಾಕಷ್ಟು ದೂರ. ಹೀಗಾಗಿ ಅಕ್ಟೋಬರ್, ಬೇಸಿಗೆ ರಜೆಯಲ್ಲಿ ಮಾತ್ರ ಅಪ್ಪ-ಅಮ್ಮನ ಜೊತೆ ನಮ್ಮ ವಾಸ. ರಜೆ ಶುರುವಾಗುತ್ತಿದ್ದಂತೆ ಅಜ್ಜಿ ಊರಿಗೆ ಬಂದು ನಮ್ಮನ್ನು ಕರೆದುಕೊಂಡು ಹೋಗುತ್ತಿದ್ದ ಅಪ್ಪ, ಮಾರ್ಗ ಮಧ್ಯದ ಶಿರಸಿಯಲ್ಲಿ ತಪ್ಪದೇ ನಮಗೊಂದು ಸಿನಿಮಾ ತೋರಿಸಿ ರಜೆಯ ಮಜಾ ದಿನಗಳ ಅಧಿಕೃತ ಉದ್ಘಾಟನೆ ಮಾಡುತ್ತಿದ್ದ. ಆಗ ಸಾಮಾನ್ಯವಾಗಿ ನೋಡುತ್ತಿದ್ದುದೆಲ್ಲ ರಾಜಕುಮಾರ್ ಚಿತ್ರಗಳೇ. ಮಾಸ್ಟರ್ ಲೋಹಿತ್ (ಪುನೀತ್ ರಾಜಕುಮಾರ್) ಅಭಿನಯಿಸಿದ್ದಾದರೆ ಅದಕ್ಕೆ ಮೊದಲ ಆದ್ಯತೆ. ರಜೆಯುದ್ದಕ್ಕೂ ನಮ್ಮ ಆಟಗಳಲ್ಲಿ, ರಾತ್ರಿ

ಊಟದ ನಂತರದ ಹರಟೆಯಲ್ಲಿ... ಅಲ್ಲಿ ಇಲ್ಲಿ ಎಲ್ಲೆಲ್ಲೂ... ಹೀಗೆ ನೋಡಿದ ಸಿನೆಮಾಗಳ ಪ್ರಸ್ತಾರ ಇರುತ್ತಿತ್ತು. ಹಾಗೆಯೇ ಪ್ರತಿ ಸಲ ರಜೆ ಮುಗಿಸಿ ವಾಪಸ್ಸು ಕರೆದುಕೊಂಡು ಬರುವಾಗ ನಮ್ಮ ದುಃಖ ಪರಿಹಾರಾರ್ಥದ ಕಿಂಚಿತ್ ಪ್ರಯತ್ನವಾಗಿ ಮತ್ತೊಂದು ಸಿನಿಮಾ ತೋರಿಸಿಯೇ ಕಳುಹಿಸುತ್ತಿದ್ದುದು. ಮುಂದಿನ ನಾಲ್ಕಾರು ತಿಂಗಳ ಶಾಲಾವಧಿಯ ದೀರ್ಘಪಯಣಕ್ಕೆ ಸವಿ ಪುಳಕದ ಬುತ್ತಿ ಅದು.

ಅದೊಂದು ಸಲ ಊರಿನಿಂದ ಹೊರಡುವಾಗಲೇ ಹೊತ್ತಾಗಿತ್ತು. ನಮ್ಮನ್ನು ಗಮ್ಯ ತಲುಪಿಸಿ ಮತ್ತೆ ವಾಪಸ್ ಹೋಗಬೇಕಾದ ಅನಿವಾರ್ಯತೆ ಅಪ್ಪನಿಗೆ. ಸಿನೆಮಾ ಬೇಡ ಎಂದರೆ ನಮ್ಮ ಬಾಡಿದ ಮೋರೆಗೆ 'ಬೈ ಬೈ' ಹೇಳಬೇಕಾದ ಸಂಕಟ... ಅಪ್ಪ ಗಡಿಬಿಡಿಯ ನಡುವೆಯೇ ನಮಗೊಂದು ಸಿನೆಮಾ ತೋರಿಸಲು ಒಪ್ಪಿದ. ಶಿರಸಿ ನಿಲ್ದಾಣದಲ್ಲಿ ಬಸ್ ಇಳಿಯುವಾಗಲೇ ಎದುರಿಗೆ ದೊಡ್ಡ ಹೋರ್ಡಿಂಗ್‌ಗಳಲ್ಲಿ ರಾರಾಜಿಸುವ ಸಿನೆಮಾ ಪೋಸ್ಟರುಗಳನ್ನು ಪರಿಶೀಲಿಸುವ ಯಾವತ್ತೂ ರೂಢಿ ನಮ್ಮದು. ಈ ಬಾರಿ ಯಾವುದೂ 'ಚೊಲೋ' ಸಿನೆಮಾ (ಅರ್ಥಾತ್ ರಾಜಕುಮಾರ್ ಸಿನೆಮಾ) ಇರೋ ರೀತಿ ಕಾಣಲಿಲ್ಲ. ರಾಜಕುಮಾರ್ ಸಿನೆಮಾ ಬಿಟ್ಟರೆ ಸರ್ವೇಸಾಮಾನ್ಯ ('ಮಕ್ಕಳ ಜೊತಿಗೆ ನೋಡಲಕ್ಕು' ಎಂಬ) ಸದಭಿಪ್ರಾಯ ಅನಂತನಾಗ್ ಸಿನೆಮಾಗಳ ಮೇಲೆ ಇದ್ದಿದ್ದರಿಂದ ಮತ್ತು ಆತ ಅಭಿನಯಿಸಿದ್ದ 'ಅನ್ವೇಷಣೆ' ಸಿನೆಮಾ ಬಸ್ ನಿಲ್ದಾಣಕ್ಕೆ ಹತ್ತಿರವಿದ್ದ ಲಕ್ಷ್ಮಿ ಟಾಕೀಸಿನಲ್ಲಿ ನಡೆಯುತ್ತಿದ್ದುದರಿಂದಾ ಸೀದಾ ಅತ್ತ ಕಡೆ ಪಾದ ಬೆಳೆಸಿದೆವು. 'ಹೀರೋಯಿನ್ನು ಲಕ್ಷ್ಮಿ ಅಲ್ಲ, ಯಾರೋ ಹೊಸಬಿ (ಆಕೆ ಸ್ಮಿತಾ ಪಾಟೀಲ್!!)' ಎಂಬ ಪುಟ್ಟ ಕುರುಕುರಿಯ ನಡುವೆಯೂ ಅಂತೂ ಸಿನೆಮಾ ನೋಡುತ್ತೇವಲ್ಲ ಎಂಬ ಸಮಾಧಾನದೊಂದಿಗೆ ಹೋದರೆ, ಅಲ್ಲಾಗಲೇ ಚಿತ್ರಪ್ರದರ್ಶನ ಶುರುವಾಗಿತ್ತು. ಹೊರಗಡೆ 'ಚಿತ್ರ ಮಂದಿರ ತುಂಬಿದೆ' ಎಂಬ ಪರಮ ನಿರಾಶಾದಾಯಕ ಬೋರ್ಡ್!.

ನಮಗೆ ಬೇಜಾರಾಗಬಾರದೆಂದು ಅಪ್ಪ ತಕ್ಷಣ ನಮ್ಮನ್ನು ಅಲ್ಲಿಂದ ಎರಡು ಬೀದಿ ಆಚೆ ಇದ್ದ 'ನಟರಾಜ್' ಟಾಕೀಸಿಗೆ ಹೊರಡಿಸಿದ. ನಾವೂ ಉತ್ಸಾಹದಿಂದ ಜಿಗಿಯುತ್ತಲೇ ಹೋದೆವು. ಅಲ್ಲಿತ್ತು 'ಅನುಭವ' ಸಿನೆಮಾ. ಪ್ರದರ್ಶನ ಶುರುವಾಗಿ ಅರ್ಧ ತಾಸು ಆಗಿತ್ತು, ಆದರೂ ಸೀಟು ಇದೆ ಎಂದಾಕ್ಷಣ ಅಪ್ಪ ಹಿಂದೆಮುಂದೆ ನೋಡದೇ ಟಿಕೆಟ್ ಖರೀದಿಸಿದ. 'ಛೇ, ಅರ್ಧ ತಾಸು ತಪ್ಪಿ ಹೋಯ್ತಲ್ಲಾ ಎಂಬ ಹಳಹಳಿಯಲ್ಲಿ ನಾವೂ ಯಾರೂ ಪೋಸ್ಟರ್ ಸಹ ನೆಟ್ಟಗೆ ನೋಡದೇ ಸೀದಾ ಒಳ ನುಗ್ಗಿದೆವು.'

ಖರೇ ಹೇಳ್ತೀನಿ, ನಮಗೆ (ಅಂದರೆ ಅಣ್ಣ-ಅಕ್ಕ, ನನಗೆ) ಸಿನೆಮಾ ಮೊದಲ ನೋಟಕ್ಕೆ ಹಿಡಿಸಲಿಲ್ಲ. ಊದಿದರೆ ಹಾರಿ ಹೋಗುವಂತಿದ್ದ ಕಡ್ಡಿ ಹೀರೋ, ತೀರಾ ಆಚೀಚೆ ಮನೆ ಅಕ್ಕಯ್ಯನಂತೆ ಕಾಣುವ ಹೀರೋಯಿನ್ನು...!! ರಾಜಕುಮಾರ್-ಗೀತಾ, ಅನಂತನಾಗ್-ಲಕ್ಷ್ಮಿ, ವಿಷ್ಣುವರ್ಧನ್-ಮಾಧವಿ... ಈ ಥರದ ಸ್ಟಾಂಡರ್ಡ್ ಸುಂದರ ಜೋಡಿಯ ಪರಿಕಲ್ಪನೆಗೆ ಒಗ್ಗಿಹೋಗಿದ್ದ ನಮಗೆ ತೀರಾ ನಮ್ಮೂರ ಸಂತೆಯಲ್ಲಿ, ತೇರಿನಲ್ಲಿ, ಬಸ್ ನಿಲ್ದಾಣದಲ್ಲಿ ಕಾಣುವ ಜನರ ಅವತಾರದಂತಿದ್ದ ನಾಯಕ-ನಾಯಕಿ, ಸಹ ನಟರು... ಇವರೆಲ್ಲ 'ಚೊಲೋ' ಅನಿಸಲು ಹೇಗೆ ಸಾಧ್ಯ? ಸಾಲದ್ದಕ್ಕೆ ಸಿನೆಮಾದಲ್ಲಿ ಕತೆ ನಡೆಯುವ

ಪರಿಸರ, ಭಾಷೆ ಎಲ್ಲ ಯಾವತ್ತೂ ಸಿನೆಮಾಗಳಂತೆ ವಿಶೇಷವಾಗಿರದೇ ನಮ್ಮೂರ ಸುತ್ತಮುತ್ತಲೇ ಎಲ್ಲೋ ನಡೆಯುವಂತಿತ್ತು. ಇಷ್ಟೇ ಆಗಿದ್ದರೆ ಪರವಾಗಿರಲಿಲ್ಲ, ಮುಂದೆ ಕಾದಿತ್ತು ಫಜೀತಿ.

ಮೊದಲೇ, ನಾಯಕ–ನಾಯಕಿ ಕೈ ಕೈ ಹಿಡಿದುಕೊಂಡರೆ, ಅಪ್ಪಿಕೊಂಡರೆ ಆ ಕಡೆ – ಈ ಕಡೆ ನೋಡುತ್ತಿದ್ದ, ಆಗ ಹೆಚ್ಚು ಕಡಿಮೆ ಸ್ಟಾಂಡರ್ಡ್ ಆಗಿದ್ದ 'ಪ್ರಥಮ ರಾತ್ರಿ'ಯ ಹಾಡು ಬಂದರೆ ಒಂದಿಡೀ ಹಾಡು ಕಣ್ಣುಮುಚ್ಚಿಕೊಂಡೇ ಕೇಳಿಸಿಕೊಳ್ಳುತ್ತಿದ್ದ ಜನ ನಾವು. ಅಂಥದರಲ್ಲಿ ಈ ಚಿತ್ರದ ನಾಯಕ–ನಾಯಕಿಯ ಮೈಮುಟ್ಟಲು, ಕೈ ಹಿಡಿಯಲು ಹಪಹಪಿಸುತ್ತ ಸರ್ಕಸ್ ಮಾಡುವುದನ್ನು ನೋಡಿ ನಮಗೆ 'ಥೋ, ಇದು ಯಾವ್ ನಮ್ನಿ ಸಿನೆಮಾ!' ಎನಿಸತೊಡಗಿತು. ನಾಯಕನ ಹಪಹಪಿಕೆ ಒಂದೊಂದು ಹಂತ ಏರುತ್ತಿದ್ದಂತೆ ನಮ್ಮ ಚಡಪಡಿಕೆಯೂ ಏರತೊಡಗಿತು. ಇದರ ನಡುವೆಯೇ 'ಪದ್ದಿ' ಪಾತ್ರದ ಪ್ರವೇಶವಾಗಿ ಸಿನಿಮಾ 'ಶೀ' ದಿಂದ 'ಇಶ್ಶೀ' ಲೆವೆಲ್ಲಿಗೆ ಹೋಗಿ.... ಮುಂದೆ 'ಇಶ್ಶೀ' ಯಿಂದ 'ಇಶ್ಶಿಶ್ಶೋ...!' ಲೆವಲ್ಲಿಗೆ ಬಡ್ತಿ ಪಡೆದಿತ್ತು. ಸುತ್ತಮುತ್ತ ಕುಳಿತಿದ್ದ ಜನ, ಮೋಸ್ಟ್ಲೀ ಗಂಡಸರು ಸಿಳ್ಳೆ ಹೊಡೆಯುತ್ತ ಸಿನೆಮಾ ನೋಡುತ್ತಿದ್ದರೆ ನಾವು ಮೂರು ಜನ ಸಿನೆಮಾ ನೋಡುವುದನ್ನು ಬಿಟ್ಟು ಮುಖ ಮುಖ ನೋಡುತ್ತ, ಬಾಯಿ ಜಾರಿ 'ಕಿಸಕ್' ಎಂದು ಹೊರಡುತ್ತಿದ್ದ ನಗೆಯನ್ನು ಅದುಮಿಡುವ ವ್ಯರ್ಥ ಪ್ರಯತ್ನ ಮಾಡುತ್ತ ಕುಳಿತಿದ್ದೆವು. ಸುಳ್ಳೆ ಸುಳ್ಳೇ ಗಾಳಿ ಹಾಕಿಕೊಳ್ಳುವುದು, ಕೆಮ್ಮುವುದು, ಚೀಲದಲ್ಲಿದ್ದ ನೀರಿನ ಬಾಟಲಿ ತೆಗೆದು ಕುಡಿಯುವುದು, ಬೇಕೆಂದೇ ಕಾಲು ಕುಣಿಸಿ ಚಪ್ಪಲಿ ಬೀಳಿಸಿಕೊಂಡು.... ಆಮೇಲೆ ಬಗ್ಗಿ ಅದನ್ನು ಹುಡುಕುವುದು.... ಮಾಡದ ಕೆಲಸವಿಲ್ಲ. ಇದ್ದಿದ್ದರಲ್ಲಿ 'ಹೋದೆಯ ದೂರ...' ಹಾಡೊಂದೇ ನಮಗೆ ಸಮಾಧಾನ ತಂದಿದ್ದು, ಅದರ ಮಾಧುರ್ಯದಿಂದಾಗಿ.

ಈ ನಡುವೆ ನಮಗಿಂತ ಚಡಪಡಿಕೆ, ಮುಜುಗರ ಅಪ್ಪನಿಗೆ ಆಗಿತ್ತು. ನಮ್ಮನ್ನು ಅಜ್ಜಿ ಊರಿಗೆ ಬಿಟ್ಟು ಸಂಜೆಯೊಳಗೆ ವಾಪಸ್ಸಾಗಬೇಕೆಂಬ ಗಡಿಬಿಡಿ, ನಮ್ಮ ಅಗಲಿಕೆಯ ಅನಿವಾರ್ಯತೆ, ಸದಾ ಕಾಡುವ ಖಾಲಿ ಜೋಬು ಮತ್ತು ಅದರಿಂದ ಉಂಟಾಗುವ ಚಿಂತೆ, ಅಸಹಾಯಕತೆ... ಇವೆಲ್ಲದರ ಮಧ್ಯೆ ನಮ್ಮನ್ನು ಖುಷಿಗೊಳಿಸಬೇಕೆಂಬ ಏಕೈಕ ಉದ್ದೇಶದೊಂದಿಗೆ ಸಿಕ್ಕಿದ್ದೊಂದು ಸಿನೆಮಾದ ಟಿಕೆಟ್ ಖರೀದಿಸಿ ಕರೆದುಕೊಂಡು ಬಂದಿದ್ದ ಆತ. ಅದು ನೋಡಿದರೆ ಪಕ್ಕಾ ವಯಸ್ಕರ ಪಡ್ಡೆ ಪ್ರಸಂಗ. ನಾವೋ, ಒಂದು–ಮೂರು–ಐದನೆತ್ತಿಯ ಎಳೆ ನಿಂಬೆಕಾಯಿ ಮಿಳ್ಳೆಗಳು! ಅಪ್ಪ ಸಿನೆಮಾವನ್ನೂ ನೋಡುವಂತಿಲ್ಲ, ನಮ್ಮ ಮುಖವನ್ನೂ ನೋಡಲಾಗುತ್ತಿಲ್ಲ. ಝುಡಕಿನಲ್ಲಿ ಸಿಕ್ಕಿಕೊಂಡಿದ್ದ ಬಾಚಣಿಗೆಯಂತಾಗಿದ್ದ ಆತ. ಗಡಿಬಿಡಿಯಲ್ಲಿ ಗಟ್ಟಿ ಎಳೆದರೆ ಕೂದಲ ಬುಡಕ್ಕೆ (ನಮಗೆ) ಪರಿಣಾಮವಾದೀತು. ಆದರೆ ಸಿಕ್ಕು ಬಿಡಿಸಿಕೊಳ್ಳುವುದು ಅನಿವಾರ್ಯ. 'ಥೋ, ಮಳ್ಳಾತು ಇದು' ಎಂಬ ಆತನ ಹಳಹಳಿಕೆಯ ಸ್ವಗತ ನಮ್ಮ ಕಿವಿಗೂ ಬಿತ್ತು. ಅತ್ಲಾಗೆ ನೋಡಿ, ಇತ್ಲಾಗೆ ನೋಡಿ, ವಾಚು ನೋಡಿ.... ಒಂಚೂರು ಅಡಿಕೆಹೋಳು ಬಾಯಿಗಿಟ್ಟುಕೊಂಡ ಅಪ್ಪ, 'ಇನ್ನು ಹತ್ತು ನಿಮಿಷಕ್ಕೆ ಒಂದು ಬಸ್ ಇದ್ದು. ಹೊರಟುಬುಡನ' ಅಂದ. ದೇಹದ ಭಾರವನ್ನು ಆ ಕುಂಡೆಯಿಂದ ಈ ಕುಂಡೆಗೆ ವರ್ಗಾಯಿಸುತ್ತ, ಆಕಳಿಸುತ್ತ ಸೀಟಿನಂಚಿಗೆ ಕುಳಿತುಕೊಂಡಿದ್ದ ನಾವು, ಇಷ್ಟು ಹೇಳಿದ್ದು ಉಪಕಾರವಾಯ್ತು, ಎಂಬಂತೆ ಸ್ಪ್ರಿಂಗಿನಂತೆ ನೆಗೆದು ನಿಂತೆವು. ಅತ್ತ ಚಿತ್ರದಲ್ಲಿ ಪೇಟೆ ಜೀವನದ ಸುಖಕ್ಕೆ ಮರುಳಾದ ಪದ್ದಿ, ಕೊನೆಗೆ ಬ್ಯಾಗ್ ಎತ್ತಿಕೊಂಡು ಪರಪುರುಷನೊಂದಿಗೆ ಓಡಿ ಹೊರಟಳು. ಇತ್ತ ನಾವೂ ನಂನಮ್ಮ ಬ್ಯಾಗ್ ಹಿಡಿದುಕೊಂಡು ಚಿತ್ರಮಂದಿರದಿಂದ ಸರಸರ ಹೊರಬಿದ್ದೆವು. ಬಸ್‌ಸ್ಟ್ಯಾಂಡ್

ತಲುಪುವವರೆಗೆ ಒಬ್ಬರೂ ಒಂದೂ ಮಾತನಾಡಲಿಲ್ಲ. ಸಿನೆಮಾ ನೋಡಿದಾಗ ಯಾವತ್ತೂ ಇರುತ್ತಿದ್ದ ಪುಳಕದ ಬದಲು ಆವತ್ತು ನಡುವಲ್ಲೇ ಬಿಟ್ಟು ಬಂದಿದ್ದಕ್ಕಾಗಿ ನಿರಾಳತೆ ತುಂಬಿತ್ತು. ಮುಂದೆ ಆ ಚಿತ್ರದ ಕುರಿತಂತೆ ನನ್ನ ಮನಸ್ಸಿನಲ್ಲಿ ಮಣೆ ಹಾಕಿ ಕುಂತಿದ್ದು 'ಹೋದೆಯ ದೂರಾ...' ಹಾಡೊಂದೇ!

ಈಗೆರಡು ಮೂರು ವರ್ಷಗಳ ಹಿಂದೆ ಆ ಚಿತ್ರ ಮರು ಬಿಡುಗಡೆ ಕಂಡಾಗ ನನಗೆ ಅದನ್ನು ನೋಡುವ ಕುತೂಹಲ ಮೂಡಿತು. ಆ ಚಿತ್ರದ ಬಗ್ಗೆ ವಿವಿಧೆಡೆ ಮೆಚ್ಚುಗೆಯ ಮಾತುಗಳನ್ನು ಕೇಳಿದ್ದೆ. ಈ ಬಾರಿ ನೋಡಿದಾಗ ಮುಜುಗರವಾಗಲೀ, ಬೇಸರವಾಗಲೀ ಆಗಲಿಲ್ಲ. ಕಾಶೀನಾಥ್ ಅವರ ಧೈರ್ಯ, ಪ್ರಯೋಗಶೀಲತೆಯ ಬಗ್ಗೆ ಮೆಚ್ಚುಗೆ ಮೂಡಿತು. ಅವರ ಶುರುವಿನ ಕೆಲವು ಚಲನಚಿತ್ರಗಳನ್ನು ಮೆಚ್ಚಿಕೊಂಡಿದ್ದ ನನಗೆ ಅವರೊಬ್ಬ ಮಾವೆರಿಕ್ ಚಿತ್ರಕರ್ಮಿ ಎನಿಸಿತು.

★★★

ಈಗೀಗ ತೆರೆ ಕಾಣುವ ಮುಕ್ಕಾಲು ಪಾಲು ಸಿನೆಮಾಗಳಲ್ಲಿ ದೈಹಿಕ ಸಾಮೀಪ್ಯದ ಅತಿ ಪ್ರದರ್ಶನದ, ಶೀಲ–ಅಶ್ಲೀಲದ ನಡುವೆ ತೆರೆಯೇ ಮರೆಯಾದ ದೃಶ್ಯಗಳು ಸಾಮಾನ್ಯ. ಮನೆಯಲ್ಲಿ ಹೊಸ ಸಿನೆಮಾ ನೋಡುವ ಮೊದಲು ವಿಮರ್ಶೆ, ಅದೂ ಇದೂ ಓದಿಕೊಂಡು, ಶಂಕೆಯ ಸ್ಕ್ಯಾನರ್‌ನಲ್ಲಿ ತಪಾಸಿಸಿಯೇ ನಂತರ ನೋಡಲು ಕುಳಿತುಕೊಳ್ಳುತ್ತೇವಾದರೂ, ಕೆಲವೊಮ್ಮೆ ನಮ್ಮ ನಿರೀಕ್ಷೆ ಮೀರಿ ಅಂಥ ದೃಶ್ಯಗಳು ಪ್ರತ್ಯಕ್ಷವಾಗಿ ಬಿಡುತ್ತವೆ. ಜೊತೆ ಕುಳಿತ ಮಗ ಆಚೀಚೆ ನೋಡುವುದು, ಬಾತ್ರೂಮ್ ಬ್ರೇಕ್, ಸ್ನಾಕ್ ಬ್ರೇಕ್ ತಗೊಳ್ಳುವುದು ಏನೋ ಒಂದು ಮಾಡುತ್ತಾನೆ. ಅವನ ಪರದಾಟ ನೋಡಿ ನನಗೆ ನಗು ಬರುತ್ತದೆ. ಜೊತೆಗೆ ಹಳೆ ನೆನಪೂ.... 'ಅನುಭವ' ನೋಡಿದ ಅನುಭವದ್ದು.

❑

ಗೂಳಿಯಿಂದ ವಿದ್ಯುತ್ ಉತ್ಪಾದನೆ – ಪತಂಜಲಿಯ ನೂತನ ಕ್ರಾಂತಿ – ಸುದ್ದಿ



# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

- ನೀವು ಅನೇಕ ಸೋಲುಗಳನ್ನು ಎದುರಿಸಬಹುದು. ಆದರೆ ನೀವೇ ಸೋಲಬಾರದು.
- ಹಾರಲೇಬೇಕೆಂದು ಸಿದ್ಧರಾದವರಿಗೆ ರೆಕ್ಕೆ ಬೇಕೆಂದೇನೂ ಇಲ್ಲ. ಅಂತಹ ಕನಸುಗಣ್ಣಿನವರಿಗೆ ಹುಲ್ಲು ಕಡ್ಡಿಯೂ ರೆಕ್ಕೆಯಾಗಿ ಕಾಣುವುದಂತೆ.
- ಸಾರಿ ಕೇಳೋದು ಅಲ್ಲ, ಸಾರಿ ಹೇಳೋದು.
- ಪೀಪಲ್ ಕನ್‌ಫ್ಯೂಸ್ ಎಂಟರ್‌ಟೈನ್‌ಮೆಂಟ್ ವಿತ್ ಹ್ಯಾಪಿನೆಸ್.
- ಕೆಲವರು ಚೆಕ್ ಮೇಲೆ ಹಾಕಿದ ಆಟೋಗ್ರಾಫ್‌ಗೆ ಮಾತ್ರ ಬೆಲೆ ಇರುತ್ತದೆ. ಕೆಲವ ಆಟೋಗ್ರಾಫ್ ಖಾಲಿ ಹಾಳೆ ಮೇಲಿದ್ದರೂ ಅದಕ್ಕೆ ಬೆಲೆ ಇರುತ್ತದೆ.
- ಸದ್ಯ ಸೂರ್ಯನ ಬೆಳಕು ಇನ್ನೂ ಶುಭ್ರವಾಗಿದೆ. ಅದನ್ನು ಯಾರೂ ಮಾಲಿನ್ಯಗೊಳಿಸಿಲ್ಲ.
- ಒಂದೇ ನಾಯಿಯ ಕೈಲಿ ಎರಡು ಬಾರಿ ಕಚ್ಚಿಸಿಕೊಳ್ಳಬಾರದು.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಈಸ್ ದಿ ಪ್ರೆಷರ್ ಟು ಬಿ ಹ್ಯಾಪಿ ಮೇಕಿಂಗ್ ಪೀಪಲ್ ಸ್ಯಾಡ್?
- ಹೇಗೆ ನೀನು ನಿನ್ನ ಬಂಧುಬಳಗವನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಿಲ್ಲವೊ ಹಾಗೆ ಸಹೋದ್ಯೋಗಿಗಳನ್ನೂ ಸಹ.
- ಹಣವಿಲ್ಲದಿದ್ದರೆ ಬಡತನವನ್ನು ಆಸ್ವಾದಿಸಲು ಕಲಿಯಬೇಡ.
- ನೇಕಾರ ರೇಷ್ಮೆ ಬಟ್ಟೆಯನ್ನು ನೇಯುತ್ತಾನಷ್ಟೆ, ಧರಿಸುವುದಿಲ್ಲ.
- ಪರ್ಸನಾಲಿಟಿ ಬಿಗಿನ್ಸ್ ವೆನ್ ಕಂಪಾರಿಸನ್ ಎಂಡ್ಸ್.
- ಮುಳುಗುತ್ತಿರುವ ಟೈಟಾನಿಕ್ ಹಡಗಿನಲ್ಲಿ ಕಿಟಕಿ ಪಕ್ಕದ ಸೀಟ್ ಸಿಕ್ಕಿದರೆ ಏನು ಪ್ರಯೋಜನ?
- ಕಳೆದುಹೋದ ಅದ್ಭುತ ದಿನಗಳನ್ನೇ ಮೆಲುಕು ಹಾಕುತ್ತಾ ಕುಳಿತರೆ ಇಂದಿನ ಒಳ್ಳೆಯ ಸಂಗತಿಗಳು ಕಾಣುವುದೇ ಇಲ್ಲ.
- ಪವರ್ ಎಕ್ಸ್‌ಪೋಸಸ್ ಯುವರ್ ಟ್ರು ಕ್ಯಾರೆಕ್ಟರ್. ಇಟ್ ರಿಲೀಸಸ್ ಇನ್ ಹಿಬಿಷನ್ಸ ಅಂಡ್ ಸೆಟ್ಸ್ ಯುವರ್ ಸೆಲ್ಫ್ ಇಮ್ಮೆನ್ಸ್‌ಲಿ ಫ್ರೀ.
- ನಮ್ಮ ನೆಮ್ಮದಿ ಹಾಳು ಮಾಡಲು ಇತರರು ಸುಖವಾಗಿದ್ದಾರೆ ಎಂಬುದಕ್ಕಿಂತ ಬಲವಾದ ಕಾರಣ ಬೇರೊಂದು ಇರುವುದಿಲ್ಲ.

❑

# ಸೀತಾಪತಿಯ ಕೀಳರಿಮೆ

**- ಪಾಲಹಳ್ಳಿ ವಿಶ್ವನಾಥ**

**ಒಂ**ದೊಂದು ಸತಿ ಜೀವ್ಸ್ ಬಹಳ ತರಲೆ ಮಾಡ್ತಾನೆ. ಯಾರೂ ನನಗೆ ಒಂದು ದೊಡ್ಡ ಪಿಂಗಾಣಿ ಹೂಕುಂಡವನ್ನು ಕೊಟ್ಟಿದ್ದರು. ಅದು ನನಗೆ ಬಹಳ ಇಷ್ಟವಾಯಿತು. ಅದನ್ನು ನಾವು ಕುಳಿತುಕೊಳ್ಳುವ ಕೋಣೆಯಲ್ಲಿ ಒಂದು ಎತ್ತರದ ಸ್ಥಳದಲ್ಲಿ ಒಂದು ಹಲಗೆ ಇರಿಸಿ ಆ ಹೂಕುಂಡವನ್ನು ಅದರ ಮೇಲೆ ಇಟ್ಟಿದ್ದೆ. ಜೀವ್ಸ್ ಬಂದಾಗಿನಿಂದ ಅವನಿಗೆ ಅದೇನೋ ಆ ಪಿಂಗಾಣಿ ಹೂಕುಂಡ ಇಷ್ಟವಿಲ್ಲ. 'ಯಾರಿಗಾದರೂ ಕೊಟ್ಟುಬಿಡಿ ಸಾರ್' ಅಂತ ಹೇಳ್ತಾನೆ ಇರ್ತಾನೆ. ಅಥವಾ ನೀವು ಮಲಗುವ ಕೋಣೆಯಲ್ಲಿ ಇಟ್ಟು ಬಿಡೋಣವಾ ಅಂತ ಕೇಳ್ತಾ ಇರ್ತಾನೆ. ಅವನು ಆ ತರಹ ಮಾತಾಡಿದಾಗ ನನಗೆ ಬಹಳ ಕೋಪ ಬರುತ್ತೆ. ಒಂದು ಸತಿ ಬಹಳ ಕೋಪದಿಂದಲೇ 'ಸುಮ್ಮನಿರಯ್ಯ' ಅಂತ ಹೇಳಿದೆ. ಜೀವ್ಸ್‌ಗೆ ಇಷ್ಟವಾಗಲಿಲ್ಲ.

ಈಗ ಸಿಪ್ಪಿ ವಿಷಯ. ನಾನೂ ಸಿಪ್ಪಿ ಅಂದರೆ ಸೀತಾಪತಿ. ಒಂದೇ ರಸ್ತೆಯಲ್ಲಿ ಬೆಳೆದವರು. ಆದರೆ ಬೇರೆ ಬೇರೆ ಶಾಲೆಗಳಲ್ಲಿ ಓದಿದೆವು. ನಾನು ನನ್ನ ಜೀವನದಲ್ಲಿ ಏನೂ ಆಗಲಿಲ್ಲ. ಆದರೆ ಸಿಪ್ಪಿ ಪತ್ರಕರ್ತನಾದ. ಯುವಕ ಯುವತಿಯರಿಗೆ ಸಾಹಿತ್ಯ, ಸಂಗೀತ, ಇತ್ಯಾದಿ ಬಗ್ಗೆ ಇದ್ದ ಒಂದು ಮಾಸಪತ್ರಿಕೆಯಲ್ಲಿ ಕೆಲಸ ಮಾಡಲು ಪ್ರಾರಂಭಿಸಿದ. ಅದರ ಸಂಪಾದಕನೂ ಆಗಿದ್ದ. ನನಗೂ ಆ ಪತ್ರಿಕೆ ಅಂಚೆಯಲ್ಲಿ ಬರುತ್ತಿತ್ತು. ಅದನ್ನೆಲ್ಲಾ ಓದಲು ನನಗೆ ಪುರುಸೊತ್ತು ಇರಲಿಲ್ಲ. ಅದಕ್ಕಿಂತ ಹೆಚ್ಚಾಗಿ ಆಸಕ್ತಿ ಇಲ್ಲ. ನಿಜ ಹೇಳಬೇಕೆಂದರೆ ಅದನ್ನು ಓದುತ್ತಿದ್ದವನು ಜೀವ್ಸ್. ಈ ಸಾಹಿತ್ಯ ಎಲ್ಲಾ ಅವನಿಗೇ ಸರಿ.

ಸಿಪ್ಪೀನ ನೋಡಿ ಬಹಳ ದಿನಗಳು ಆಗಿದ್ದವು. ಜಯನಗರದ ಅವನ ಆಫೀಸಿಗೆ ಹೋದೆ. ಒಂದು ವರ್ಷದಲ್ಲಿ ಬಹಳ ಬದಲಾಯಿಸಿದ್ದ. ಸಾಹಿತ್ಯದ ಸಂಬಂಧ ಶುರವಾದಂದಿನಿಂದ ಮೀಸೆಗಡ್ಡ ಬೋಳಿಸಿರಲಿಲ್ಲ. ಈಗಂತೂ ಗಡ್ಡ ಮಾರುದ್ದ ಆಗಿತ್ತು. ಸ್ವಲ್ಪ ಚೆನ್ನಾಗಿ ಇಟ್ಟುಕೋಬಹುದಿತ್ತೋ ಏನೋ. ಶರ್ಟು ಇಸ್ತ್ರಿ ಕಂಡು ಬಹಳ ವಾರಗಳಾಗಿದ್ದವು. ಸರಿ, ಆದರೆ ಮನುಷ್ಯ ಸಂತೋಷದಿಂದ ಇರುವ ಹಾಗೆ ಕಾಣಲಿಲ್ಲ.

''ಸಿಪ್ಪಿ ಯಾಕೋ ಈ ತರಹ ಇದೀಯಾ?''

''ಬರ್ಟಿ, ನನ್ನ ಪತ್ರಿಕೆ ಓದ್ತಾ ಇರ್ತೀಯಾ. ಅಲ್ವಾ?''

''ಮರೆಯೋದೇ ಇಲ್ಲ'' (ಸ್ವಲ್ಪ ಸುಳ್ಳಿನಿಂದ ಅವನಿಗೆ ಸಂತೋಷ ಆಗೋದಾದರೆ ಆಗಲಿ, ಅಲ್ವೇ?)

''ಈ ತಿಂಗಳ ಸಂಚಿಕೇಲಿ 'ಓ! ಚಂದ್ರಮಾ' ಕವಿತೆ ಓದಿದೆಯಾ?''

''ಫರ್ಸ್ಟ್ ಕ್ಲಾಸ್'' (ಕೆಟ್ಟ ಪದ್ಯ ಆಗಿದ್ದರೆ ಅವನು ಕೇಳ್ತಾ ಇದ್ದನೇ?)

''ನಿಜವಾಗಿಯೂ ಬಹಳ ಚೆನ್ನಾಗಿದೆ ಅಲ್ವಾ. ಅದು ಯಾರು ಬರೆದಿದ್ದು ಗೊತ್ತಾ?''

''ಇಲ್ಲವಲ್ಲ''

''ಕೆಳಗೆ ಬರದಿತ್ತಲ್ಲ. ಸರಿ ಅವರ ಹೆಸರು ಚಂದ್ರಿಕಾ ಚಾಮಯ್ಯ. ನಮ್ಮ ಪತ್ರಿಕೆಗೆ ಆಗಾಗ್ಗೆ ಬರೀತ ಇರ್ತಾರೆ''

''ನಿನಗೆ ಗೊತ್ತ ಅವರು?''

ನಾನೇನೂ ಬುದ್ಧಿವಂತನಲ್ಲ. ನನ್ನ ಸಂಬಂಧಿಕರಲ್ಲಿ ಯಾರನ್ನು ಕೇಳಿದರೂ 'ಬರ್ಟಿ! ಬುದ್ಧಿ! ಬಿಡಿ' ಎಂದು ಬಿಡುತ್ತಾರೆ. ಜೀವ್ಸ್ ಕೂಡ ತನ್ನ ಗೆಳೆಯರ ಹತ್ತಿರ ನನ್ನ ಬುದ್ಧಿಯ ಗುಣಗಾನವೇನೂ ಮಾಡುವುದಿಲ್ಲ. ಪ್ರಪಂಚದಲ್ಲಿ ಕೆಲವರು ಕೇಳಿಕೊಂಡು ಬಂದಿರ್ತಾರೆ. ಕೆಲವರು ಇಲ್ಲ, ಬಿಡಿ. ಆದರೆ ಒಂದರಲ್ಲಂತೂ ನಾನು ತಜ್ಞನಾಗಿಬಿಟ್ಟಿದ್ದೇನೆ. ಯಾವುದರಲ್ಲಿ ಅಂತ ಕೇಳ್ತಿದ್ದೀರಾ? ಅದೇ ಪ್ರೀತಿ, ಪ್ರೇಮ ವಿಷಯ. ನನ್ನ ಸ್ನೇಹಿತರಲ್ಲಿ ವಾರಕ್ಕೊಮ್ಮೆ ಒಬ್ಬನಾದರೂ ಬಂದು ನನ್ನ ಹತ್ತಿರ ಬಂದು 'ನನಗೆ ಅವಳಲ್ಲಿ ಪ್ರೀತಿ ಹುಟ್ಟಿದೆ. ಅವಳು ರಂಭೆ, ಊರ್ವಶಿ...' ಅಂತ ಬೋರ್ ಹೊಡೀತಾರೆ. ಅವರುಗಳನ್ನು ನೋಡಿ, ನೋಡಿ ನನಗೆ ಯಾರು ಪ್ರೀತಿಯಲ್ಲಿದ್ದರೂ ಗೊತ್ತಾಗಿಬಿಡುತ್ತೆ!

''ಏನೋ ಸಿಪ್ಪಿ.. ವಿಷಯ ಏನೋ?''

''ನಾನು ಆ ಚಂದ್ರಿಕಾನ..''

''ಗೊತ್ತಾಯಿತಯ್ಯ! ಅವಳನ್ನು ಪ್ರೀತಿಸ್ತಿದೀಯ. ಅವಳಿಲ್ಲದೆ ಜೀವನದಲ್ಲಿ ಅರ್ಥವೇ ಇಲ್ಲ ಅಲ್ಲವಾ? ಸರಿ, ಅವಳಿಗೆ ಹೇಳಿದ್ದೀಯಾ?''

''ಹೇಗೆ ಹೇಳುವುದು?''

''ಮಾತಲ್ಲಿ! ಅಥವಾ ನೀನು ಲೇಖಕ, ಸಂಪಾದಕ, ಬರೆದು ತೋರಿಸು''

''ಬರ್ಟಿ, ಅವಳೆಲ್ಲಿ, ನಾನೆಲ್ಲಿ, ನಾನು ಕ್ರಿಮಿ, ಅವಳ ಎತ್ತರ ಬರುವುದಿಲ್ಲ''

''ಅಷ್ಟು ಎತ್ತರ ಇದ್ದಾಳಾ?''

''ಅಲ್ಲ ಕಣೋ ಮೂರ್ಖ! ವಿಚಾರ, ಕಲ್ಪನೆ, ಯೋಚನೆಗಳಲ್ಲಿ.. ಅವಳ ಮುಂದೆ ನಿಂತುಕೊಂಡಾಗ ಪದಗಳೇ ಹೊರಗೆ ಬರೋದಿಲ್ಲ. ಈ ನಾಲಿಗೆ ಅಲ್ಲೇ ಕೂತು ಬಿಡುತ್ತೆ..''

ಅಷ್ಟರಲ್ಲಿ ಯಾರೋ ಬಾಗಿಲನ್ನು ತಟ್ಟಿದಂತಾಯಿತು. ತಟ್ಟಿದರು ಎಂದೆನೇ? ಇಲ್ಲ, ಇಲ್ಲ, ಡಬಡಬ ಎಂದು ಬಾಗಿಲನ್ನು ಹೊಡೆದರು. ಉತ್ತರಕ್ಕಾಗಿ ಕಾಯದೆ ಬಾಗಿಲು ತೆರೆದುಕೊಂಡು ಒಳಬಂದರು.

''ಏನಯ್ಯ ಸೀತಾಪತಿ! ಹೇಗಿದ್ದೀಯ''

ಅಜಾನಬಾಹು ವ್ಯಕ್ತಿ. ವಯಸ್ಸಾಗಿತ್ತು ಆದರೆ ಧ್ವನಿಯೂ ಜೋರೆ ಇತ್ತು. ನನ್ನತ್ತ ಒಂದು ಕ್ಷಣ ನೋಡಿ ಇಂತಹವನಿಗೆ ಒಂದು ಕ್ಷಣವೂ ಜಾಸ್ತಿ ಎನ್ನುವಂತೆ ಸಿಪ್ಪಿಯತ್ತ ತಿರುಗಿದರು. ಸುಮ್ಮನೆ ಎದ್ದು ನಿಂತಿದ್ದ ಸಿಪ್ಪಿಯ ಬಳಿಹೋಗಿ ಅವನ ಬೆನ್ನನ್ನು ತಟ್ಟಿ 'ಕೂತುಕೊ, ಪರವಾಯಿಲ್ಲ' ಎಂದರು. ಅವರು ಏನನ್ನೂ ಮೃದುವಾಗಿ ಮುಟ್ಟುವ ಜಾಯಮಾನವದವರಲ್ಲ ಅಂತ ಕಾಣುತ್ತೆ. ಅವರು ಬಾಗಿಲನ್ನು ಹೇಗೆ ತಟ್ಟಲಿಲ್ಲವೋ ಹಾಗೇ ಸಿಪ್ಪಿಯ ಬೆನ್ನನ್ನೂ ತಟ್ಟಲಿಲ್ಲ. ಬೆನ್ನಿಗೆ ಜೋರಾಗಿ ಹೊಡೆದರು. ಸಿಪ್ಪಿ ಸ್ವಲ್ಪ ತತ್ತರಿಸಿದ.

''ಚೆನ್ನಾಗಿದ್ದೀನಿ ಸರ್''

''ಧ್ವನಿ ಇನ್ನೂ ಸಣ್ಣಕ್ಕೇ ಇದೆಯಲ್ಲೋ. ಸರಿ, ಬಿಡು, ಮೊದಲಿಂದಲೂ ನೀನು ಹೀಗೆ ಇದ್ದೀಯ. ಅದಿರಲಿ, ಮುಂದಿನ ತಿಂಗಳ ಪತ್ರಿಕೆಗೆ ಒಂದು ಲೇಖನ ತಂದಿದ್ದೀನಿ. ಹಿಂದಿನ ಸತಿ ತರಹ ಮಾಡಬೇಡ. ಒಳಗಡೆ ಎಲ್ಲೋ ಹಾಕಬೇಡ. ಮೊದಲನೇ ಪುಟದಲ್ಲೇ ಇರಬೇಕು. ಆಮೇಲೆ ಲೇಖನದ ಮೇಲೆ ಕತ್ತರಿ ಪ್ರಯೋಗ ಬೇಡ. ಪೂರ್ತಿ ಇರಬೇಕು. ಸರಿ ನಾನು ಬರ್ತೀನಿ.''

ಮತ್ತೆ ನನ್ನತ್ತ ಒಂದು ನೋಟ ಬೀರಿ ವ್ಯಕ್ತಿ ಹೊರಹೋದರು. ಹೋಗುವಾಗ ಜೋರಾಗಿಯೆ ಬಾಗಿಲನ್ನು ಎಳೆದುಕೊಂಡು ಹೋದರು.

''ಯಾರಯ್ಯ ಸಿಪ್ಪಿ ಈ ವ್ಯಕ್ತಿ? ಬಹಳ ಜಬರದಸ್ತ್ ಇದ್ದಾರೆ''

''ನಮ್ಮ ಶಾಲೆಯ ಹೆಡ್ ಮಾಸ್ಟರ್, ಮುಖ್ಯೋಪಾಧ್ಯರು. ಆದಿಮೂರ್ತಿಗಳು. ಹೊರಗೆ ಹೋಗಿ ಒಂದು ಬಾಳೆಹಣ್ಣಿನ ಸಿಪ್ಪೆಯ ಮೇಲೆ ಕಾಲಿಟ್ಟು ಜಾರಲಿ''

''ನೀನ್ಯಾಕೊ ಬಹಳ ಹೆದರಿಕೊಂಡಿದ್ದಹಾಗಿತ್ತು''

'ಹೌದು ಬರ್ಟಿ! ಮೊದಲಿನಿಂದಲೂ ನನಗೆ ಅವರನ್ನು ಕಂಡರೆ ಬಹಳ ಭಯ. ಬರೀ ನನ್ಗೇನಲ್ಲ, ಶಾಲೆಯಲ್ಲಿ ಎಲ್ಲಮಕ್ಕಳಿಗೂ ಇವರನ್ನು ಕಂಡರೆ ಭಯ. ಆದಿಮೂರ್ತಿ ಟೀಚರ್ ಕರೆದರು ಅಂದರೆ ಮಕ್ಕಳು ಉಚ್ಚೆ ಮಾಡಿಕೊಳ್ತಾ ಇದ್ದರು. ಭಯಂಕರ ಮನುಷ್ಯ.''

''ಸದ್ಯ, ಈಗ ಉಚ್ಚೆ ಮಾಡಿಕೊಂಡಿಲ್ಲ ತಾನೆ?''

''ಅದೊಂದೇ ಬಾಕಿ! ಬಂದು ಹೆದರಿಸ್ತಾರೆ. ಅವರು ಕಳಿಸೋದು ಯಾರೂ ಓದೋದಿಲ್ಲ. ಈ ಪತ್ರಿಕೆ ಇರುವುದು ಚಿಕ್ಕವರಿಗೆ, ಏನೋ ಕಂತೆ ಪುರಾಣ ಬರೀತಾರೆ. ಹಿಂದಿನ ಸತಿ 'ಪಂಪನಲ್ಲಿ ಛಂದಸ್ಸು' ಅಂತ ಕಳಿಸಿದ್ದರು. ಪಂಪ ಮಹಾಕವಿ ಸರಿ. ಈಗಿನವರು ಯಾರು ಓದ್ತಾರೆ ಅದನ್ನ? ಈಗ ಕಳಿಸಿದಾರೆ ನೋಡು! ವಿದುರ ನೀತಿಯ ಮಹತ್ವ! ಯಾರಿಗೆ ಬೇಕು ಹೇಳು''

''ಅಲ್ಲ ಸಿಪ್ಪಿ, ಅವರಿಗೆ ಆಗೋಲ್ಲ ಅಂತ ಹೇಳೋಕೆ ಏನು?''

''ಆಗೋದಿಲ್ಲ, ಅವರನ್ನು ನೋಡಿದರೆ ಇನ್ನೂ ನನಗೆ 12 ವರ್ಷ ಅನ್ನಿಸುತ್ತೆ. ಈಗಲೂ ಭಯ ಕಣಯ್ಯ''

''ಸರಿ ಹೋಯ್ತು. ಆ ಹುಡುಗೀನ ಪ್ರೀತಿಸ್ತೀನಿ, ಆದರೆ ಮಾತಾಡ್ಸೋಲ್ಲ, ಹಳೆ ಹೆಡ್ ಮಾಸ್ಟರಿಗೆ ಉತ್ತರ ಕೊಡೋಕೆ ಆಗೋಲ್ಲ, ಏನಾಯ್ತೊ ಸಿಪ್ಪಿ ನಿನಗೆ?''

---

ಮನೆಗೆ ಹೋಗಿ ಸಿಪ್ಪಿಯ ವಿಷಯ ಜೀವ್ಸ್‌ಗೆ ಹೇಳಿದೆ. ಏನಾದರೂ ಮಾಡು ಎಂದೆ. ಆಸಕ್ತಿ ಇಲ್ಲದವನ ಹಾಗೆ ಹೂ ಅಂದ. ಆ ಹೂಕುಂಡದ ವಿಷಯದಲ್ಲಿ ಅವನಿಗೆ ಕೋಪ ಹೋಗಿಲ್ಲ ಅಂತ ಕಾಣುತ್ತೆ! ಆದರೂ 'ಸೀತಾಪತಿ ರಾಯರ ಕೀಳರಿಮೆಗೆ ಏನಾದ್ರೂ ಮಾಡ್ತೀನಿ ಸಾರ್' ಅಂದ. ಕೀಳರಿಮೆ? ಆ ಪದದ ಅರ್ಥ ಗೊತ್ತಾಗಲಿಲ್ಲ, ಜೀವ್ಸ್ ನ ಕೇಳೋಣ

ಅಂದುಕೊಂಡೆ. ಆದರೆ ಮೊದಲೆ ಜಂಬ, ಇನ್ನೂ ಜಾಸ್ತಿ ಆಗುತ್ತೆ

---

ಇದೆಲ್ಲಾ ಆಗಿ ಒಂದು ವಾರ ಆಯಿತು. ಸಿಪ್ಪಿನ ನೋಡೋಣ ಅಂತ ಅವನ ಆಫೀಸಿಗೆ ಹೋದೆ. ಅವನಿರಲಿಲ್ಲ. ಅವನ ಕುರ್ಚಿಯಲ್ಲಿ ಹೆಡ್ ಮಾಸ್ಟರ್ ಆದಿ ಮೂರ್ತಿ ಕುಳಿತಿದ್ದರು. ಜಾಗ ಎಲ್ಲ ಅವರದ್ದೆ ಅನ್ನೋ ತರಹ ಮೇಜಿನ ಮೇಲೆ ಕಾಲು ಹಾಕಿಕೊಂಡು ಅಂದಿನ ಪತ್ರಿಕೆ ಓದ್ತಾ ಇದ್ದರು.

''ಸಿಪ್ಪಿನ ಹುಡುಕಿಕೊಂಡು ಬಂದೆ''

''ಸೀತಾಪತಿ ಇನ್ನೂ ಬಂದಿಲ್ಲ''

ಸ್ವಲ್ಪ ಕೋಪ ಇತ್ತು ಧ್ವನಿಯಲ್ಲಿ. ಕಾಯೋ ಅಭ್ಯಾಸ ಇಲ್ಲ ಅಂತ ಚೆನ್ನಾಗಿ ಗೊತ್ತಾಗ್ತಾ ಇತ್ತು.

''ಎಲ್ಲ ಹೇಗಿದೆ?'' ಸುಮ್ಮನೆ ಸೌಜನ್ಯಕ್ಕೆ ಕೇಳಿದೆ

''ಏನೆಂದರಿ?'' ಖಾರವಾಗೇ ಇದ್ದಿತು ಧ್ವನಿ

''ಏನಿಲ್ಲ''

''ಇಲ್ಲ, ನೀವು ಏನೋ ಹೇಳಿದಿರಿ''

''ಅದಾ, ಎಲ್ಲ ಹೇಗಿದೆ ಅಂತ ಕೇಳಿದೆ ಅಷ್ಟೆ''

''ಯಾವುದು ಹೇಗಿದೆ?''

''ಎಲ್ಲಾ''

''ನನಗೆ ಅರ್ಥ ಆಗ್ತಾ ಇಲ್ಲ''

''ಹೋಗಲಿ ಬಿಡಿ''

ಸ್ವಲ್ಪ ಸಮಯ ಮಾತಾಡದೇ ಕೂತುಕೊಂಡೆ. ಮತ್ತೆ ಶುರುಮಾಡಿದೆ

''ಈವತ್ತು ಹವಾ ಬಹಳ ಚೆನ್ನಾಗಿದೆ''

''ಹೌದು''

''ಆದರೆ ಬೆಳೆಗಳಿಗೆ ಮಳೆ ಬೇಕಲ್ಲವೇ?''

''ಬೆಳೆಗಳಿಗೆ?''

''ಹೌದು. ಬೆಳೆಗಳಿಗೆ''

ಅವರು ಸುಮ್ಮನಾದರೂ. ನಾನೂ ಸುಮ್ಮನಾದೆ.

ಕಡೆಗೂ ಈ ಮೌನ ಮುಕ್ತಾಯವಾಗುವ ಸೂಚನೆ ಬಂದಿತು. ದೂರದಿಂದ ಹಳೆಯ ಹಿಂದೀ ಹಾಡು ಕೇಳಿಸಿತು. ಅನಂತರ ಸಿಳ್ಳೆಯ ಶಬ್ದ. ಸಿಳ್ಳಿ ಹೊಡೆದುಕೊಂಡು ಸಿಪ್ಪಿ ಒಳಗೆ ಬಂದು ಇಬ್ಬರಿಗೂ ಹಲೋ ಅಂದ ನನಗೆ ಆಶ್ಚರ್ಯ ಆಯಿತು. ಹಿಂದಿನ ಸಿಪ್ಪಿ ಎಲ್ಲಿ? ಈ ಖುಷಿಯಾಗಿ ಸಿಳ್ಳೆ ಹೊಡೆಯುತ್ತಿರುವ ಯುವಕ ನೆಲ್ಲಿ? ಆದಲ್ಲದೆ ಗಡ್ಡ ಬೋಳಿಸಿದ್ದ. ಆದರೆ

ಮೀಸೆ ಜೋರಾಗಿತ್ತು. ಒಳ್ಳೆ ಬಟ್ಟೆಯನ್ನೂ ಹಾಕಿಕೊಂಡಿದ್ದ.

''ಏನೋ ಬರ್ಟಿ. ಚೆನ್ನಾಗಿದ್ದೀಯಾ? ನಮಸ್ಕಾರ ಆದಿಮೂರ್ತಿಯವರಿಗೆ, ಸ್ವಲ್ಪ ವಿಳಂಬವಾಯಿತು ಕ್ಷಮಿಸಬೇಕು, ಸಾರ್''

ಆದಿಮೂರ್ತಿಯವರಿಗೆ ಸಿಪ್ಪಿಯ ಸಂತೋಷ ಹಿಡಿಸಲಿಲ್ಲ.

''ನೀನು ಬಹಳ ಲೇಟಾಗಿ ಬಂದ್ದೀಯ. ಅರ್ಧ ಗಂಟೆಯಿಂದ ಇಲ್ಲೇ ಕೂತಿದ್ದೀನಿ. ಅದಲ್ಲದೆ (ನನ್ನ ಕಡೆ ನೋಡುತ್ತಾ) ಇಲ್ಲಿ ಸುಮ್ಮನೆ ಕೂರಲೂ ಆಗೋಲ್ಲ.. ಹವಾ ವರ್ತಮಾನ ಕೊಡ್ತಾ ಇರ್ತಾರೆ. ಅಲ್ಲಯ್ಯ, ನನ್ನ ಸಮಯಕ್ಕೂ ಬೆಲೆ ಇದೆ ತಿಳೀತಾ?''

''ಸಾರೀ ಸಾರ್'' ಅಂತ ಸಿಪ್ಪಿ ಹೇಳಿ ಮುಂದುವರಿಸಿದ ''ನಿಮ್ಮ ವಿದುರನೀತಿ ಲೇಖನದ ಬಗ್ಗೆ ಕೇಳೋಕೆ ಬಂದಿದ್ದೀರಾ. ಅಲ್ಲವೆ? ನಿನ್ನೆ ರಾತ್ರಿ ಓದಿದೆ. ಸ್ವಾಮಿ ಆದಿಮೂರ್ತಿಯವರೇ, ಈ ಲೇಖನ ನಮ್ಮ ಪತ್ರಿಕೆಗೆ ಸರಿಹೋಗುವುದಿಲ್ಲ''

''ಏನೆಂದೆ ಸೀತಾಪತಿ?''

''ಹೌದು. ಈಗಿನವರಿಗೆ ಇದರಿಂದ ಯಾವ ಪ್ರಯೋಜನವೂ ಇಲ್ಲ. ಈ ತರಹ ಲೇಖನ ಹಾಕಿದರೆ ನಮ್ಮ ಪತ್ರಿಕೆ ಕೊಂಡುಕೊಳ್ಳುವವರೂ ಕಡಿಮೆ ಆಗಿಬಿಡ್ತಾರೆ.''

''ಏ ಸೀತಾಪತಿ! ಏನಯ್ಯ ಹೇಳ್ತಾ ಇದ್ದೀಯ ನಿನಗೆ ಬೇಡದಿದ್ದರೆ ಬಿಡು. ಬೇರೆ ಯಾವುದಾದರೂ ಪತ್ರಿಕೆಗೆ ಕಳಿಸ್ತೀನಿ''

''ಹೌದು, ನೀವು ಹಾಗೆಯೇ ಮಾಡಬೇಕು. ಪ್ರಯತ್ನ ಮಾಡ್ತಾನೇ ಇರಿ. ಈ ಪತ್ರಿಕೆ ಇಲ್ಲದಿದ್ದರೆ ಇನ್ನೊಂದು, ಅದಿಲ್ಲದಿದ್ದರೆ ಮತ್ತೊಂದು''

''ಸರಿ'' ಎಂದು ಕೋಪದಿಂದ ಆದಿಮೂರ್ತಿಯವರು ಕೋಣೆಯಿಂದ ಹೊರಹೋದರು. ಬಾಗಿಲನ್ನು ಜೋರಾಗಿ ಹಾಕಿಕೊಳ್ಳುವುದನ್ನು ಮರೆಯಲಿಲ್ಲ.

''ಏನೋ ಸಿಪ್ಪಿ ಇಷ್ಟು ಖುಷಿಯಾಗಿದೀಯಾ?''

''ನಿನಗೆ ಹೇಳಬೇಕು ಅಂದಿದ್ದೆ. ಒಳ್ಳೇದು, ನೀನೇ ಬಂದೆಯಲ್ಲ. ನಾನು ಚಂದ್ರಿಕಾ ಮುಂದಿನ ತಿಂಗಳು ಮದುವೆ ಮಾಡಿಕೊಳ್ತಾ ಇದ್ದೀವಿ.''

''ಲೇಖಕಿ ಚಂದ್ರಿಕಾ ಚಾಮಯ್ಯ?''

''ಹೌದು ಕಣಯ್ಯ, ಅವಳೇ''

''ಸಂತೋಷ ಸಿಪ್ಪಿ, ಆದರೆ ಇದೆಲ್ಲ ಹೇಗಾಯ್ತು?''

''ಉದ್ದದ ಕಥೆ. ಜೀವ್ಸ್‌ಗೆ ಎಲ್ಲ ಗೊತ್ತು. ಅವನನ್ನು ಕೇಳು. ಹೊರಗೆ ನಿಂತಿದ್ದಾನೆ. ಇನ್ನೂ ಆ ದೃಶ್ಯ ಮರೆಯೋದಕ್ಕೆ ಆಗೋದಿಲ್ಲ. ನಾನು ನೆಲದ ಮೇಲೆ ಮಲಗಿದ್ದೆ ಪಕ್ಕದಲ್ಲಿ ಅವಳು, ಅಂದರೆ ಚಂದ್ರಿಕ, ನನ್ನ ಕೈ ಹಿಡಿದುಕೊಂಡು ಅಳ್ತಾ ಕೂತಿದ್ದಳು''

''ಏನೋ ಇದೆಲ್ಲಾ''

''ಹೌದು, ನಿಮ್ಮನೇಲಿ''

''ಅವಳ್ಯಾಕೆ ಅಳ್ತಾ ಇದ್ದಳು?''

''ಹೇಳಿದೆನೆಲ್ಲ, ಜೀವ್ಸ್‌ನ ಕೇಳು. ಮದುವೆ ಮುಂದಿನ ತಿಂಗಳು, ಮರೀಬೇಡ'' ಎಂದು ಹೇಳಿ ಸಿಪ್ಪಿ ಹೊರಟುಹೋದ

ಹೊರಗೆ ಜೀವ್ಸ್ ನಿಂತಿದ್ದ.

''ಏನಾಗ್ತಾ ಇದೆ ಜೀವ್ಸ್?''

''ಎಲ್ಲಾ ಚೆನ್ನಾಗೇ ನಡೀತಾ ಇದೆ ಸಾರ್, ಶ್ರೀ ಸೀತಾಪತಿರಾಯರು ಮತ್ತು ಚಂದ್ರಿಕಾ ಚಾಮಯ್ಯನವರು''

''ತಿಳೀತು, ಸಿಪ್ಪಿ ಹೇಳಿದ.. ಇದೆಲ್ಲ ಹೇಗೆ ಆಯಿತು ಅಂತ ನಿನ್ನ ಕೇಳ್ತಾ ಇದ್ದೀನಿ''

''ನಾನು ಸೀತಾಪತಿರಾಯರನ್ನು ನಿಮ್ಮ ಮನೆಗೆ ಕರೆದೆ... ಆಮೇಲೆ ಚಂದ್ರಿಕಾ ಅವರಿಗೆ ಸೀತಾಪತಿರಾಯರಿಗೆ ದೊಡ್ಡ ಏಟು ಬಿದ್ದಿದೆ, ಇಲ್ಲಿಗೆ ಬನ್ನಿ ಎಂದು ಫೋನ್ ಮಾಡಿದೆ''


''ದೊಡ್ಡ ಏಟಾ?'

'ಹೌದು, ಸಾರ್, ಅವರು ಮನೆಗೆ ಬಂದಾಗ ಹಿಂದೆಯಿಂದ ಹೋಗಿ ನಿಮ್ಮ ಕ್ರಿಕೆಟ್ ಬ್ಯಾಟಿನಿಂದ ಅವರ ತಲೆಗೆ ಏಟು ಕೊಟ್ಟೆ. ಅವರು ಕೆಳಗೆ ಬಿದ್ದರು, ರಕ್ತ ತೊಟ್ಟಿಕ್ಕಲು ಶುರುವಾಯಿತು'

'ಏನು ಜೀವ್ಸ್, ಇದು?'

'ನನಗೂ ಇಷ್ಟವಿರಲಿಲ್ಲ ಸಾರ್, ಆದರೆ ಇದ್ದಿದ್ದು ಇದೊಂದೇ ದಾರಿ. ನೆಲದ ಮೇಲೆ ಮಲಗಿದ್ದ ಸೀತಾಪತಿರಾಯರನ್ನು ಕಂಡು ಚಂದ್ರಿಕಾ ಅಳಲು ಶುರುಮಾಡಿದರು. ಅವರಿಗೂ ಸೀತಾಪತಿರಾಯರು ಬಹಳ ಇಷ್ಟವಿತ್ತಂತೆ. ಆದರೆ ಇವರ ತರಹವೆ ಅದನ್ನು ವ್ಯಕ್ತ ಪಡಿಸಲು ಹಿಂದೇಟುಹಾಕುತ್ತಿದ್ದರಂತೆ. ಅವರ ಪ್ರೇಮವೂ ಹೊರಗೆ ಬಂತು ನಿಧಾನವಾಗಿ ಚೇತರಿಸಿಕೊಳ್ಳುತ್ತಿದ್ದ ಸೀತಾಪತಿರಾಯರೂ ತಮ್ಮ ಪ್ರೇಮವನ್ನು ವ್ಯಕ್ತಪಡಿಸಿದರು.'

❑



# ವ್ಯಂಗ್ಯ ಮೆಲುಕು

**- ಪ್ರಕಾಶ್ ಶೆಟ್ಟಿ**

70 ರ ದಶಕದಲ್ಲಿ ನೌಕರರ ಮನಸ್ಥಿತಿ ಹೇಗಿತ್ತು ಎಂದು ಗೊತ್ತಾಗಬೇಕಾದರೆ ನಾಡಿಗ್, ಎಸ್.ಎಸ್.ಆನಂದ್ ಮತ್ತು ಸ್ವಾಮಿ ಅವರ ಈ ಕಾರ್ಟೂನ್ಸ್ ನೋಡಿ. ಈಗಲೂ ಅದೇ ಸ್ಥಿತಿ ಇದೆ ಅಂತಿರಾ?









# ಹುಡುಕಾಟದ ಸೊಬಗು

**- ಬೇಲೂರು ರಾಮಮೂರ್ತಿ**

ಇಲ್ಲೇ ಇಟ್ಟಿದ್ನಲ್ಲಾ ಅಂತ ಮನೆಯೆಲ್ಲಾ ಹುಡುಕೋದು ಎಷ್ಟೋ ಮನೆಗಳಲ್ಲಿ ಸರ್ವೇ ಸಾಮಾನ್ಯ. ಈ ಹುಡುಕಾಟ ಎಲ್ಲರ ಜೀವನದ ಒಂದು ಅವಿಭಾಜ್ಯ ಅಂಗ ಎನ್ನಬಹುದು. ಆಮೇಲೆ ಮರೆತೇ ಹೋಗುತ್ತೆ ಅದಿಕ್ಕೆ ಇಲ್ಲೇ ಇಟ್ಟಿರ್ತೀನಿ ಅಂತ ನೆನಪು ಮಾಡಿಕೊಂಡು ಇಟ್ಟ ಜಾಗವೇ ಮರೆತುಹೋಗುತ್ತೆ. ಹಾಗಾದರೆ ಹುಡುಕೋದನ್ನು ತಡೆಯೋದು ಕಷ್ಟವೇ. ಹಾಗೇನೂ ಅಲ್ಲ. ಆದರೆ ಜೀವನದಲ್ಲಿ ಒಂದಲ್ಲ ಒಂದು ಸಾರಿ ಇಂತಹ ಹುಡುಕಾಟದಿಂದ ಅದೇನೋ ಅವ್ಯಾಹತ ಆನಂದ ಸಿಗುತ್ತೆ. ಎಷ್ಟೋ ಸಾರಿ ಹುಡುಕೋದಕ್ಕೆ ಷುರುಮಾಡಿ ಹುಡುಕುತ್ತಾ ಹುಡುಕುತ್ತಾ ಎಷ್ಟೋ ಹೊತ್ತು ಕಳೆದ ಮೇಲೆ ಏನು ಹುಡುಕ್ತಿದೀವಿ ಅನ್ನೋದೇ ಮರೆತುಹೋಗುತ್ತೆ. ಇದೇ ಹುಡುಕಾಟದ ಸೊಬಗು. ನಂತರ ಮೊದಲು ಏನು ಹುಡುಕ್ತಿದ್ದೆ ಅಂತ ನೆನಪು ಮಾಡ್ಕೊಬೇಕು, ನಂತರ ಮತ್ತೆ ಹುಡುಕೋಕೆ ಷುರು ಮಾಡಬೇಕು. ಇಂತಹ ಹುಡುಕಾಟದಲ್ಲಿ ಇರುವವರನ್ನು ದಾರಿ ತಪ್ಪಿಸುವವರೂ ಇರುತ್ತಾರೆ. ಇವರು ಮತ್ಯಾರೂ ಅಲ್ಲ ಹೆಂಡತಿ ಮತ್ತು ಮಕ್ಕಳು. ಹುಡುಕಿ ಹುಡುಕಿ ಸುಸ್ತಾಗಿ ಸಿಗದೇ ಹೋದಾಗ ಏನು ಹುಡುಕ್ತಿದ್ದೆ ಅನ್ನೋದಕ್ಕಾದರೂ ಮನೆಯವರನ್ನು ಕೇಳಬೇಕು. ಅಥವಾ ಮನಸ್ಸನ್ನು ರಿವೈಂಡ್ ಮಾಡ್ಕೊಬೇಕು. ನಾನು ಹುಡುಕೋಕೆ ಮುಂಚೆ ಏನು ಮಾಡ್ತಿದ್ದೆ, ಇಲ್ಲಿಗೆ ಬಂದು ಕೂತೆ, ಅದಕ್ಕೆ ಮುಂಚೆ ಕೋಣೆಯಿಂದ ಬಂದೆ, ಅದಕ್ಕೆ ಮುಂಚೆ ದೇವರ ಮನೆಯಿಂದ ಕೋಣೆಗೆ ಬಂದೆ, ಅದಕ್ಕೆ ಮುಂಚೆ ಬಚ್ಚಲು ಮನೆಯಿಂದ ಸ್ನಾನ ಮುಗಿಸಿ ದೇವರ ಮನೆಗೆ ಬಂದೆ, ಅದಕ್ಕೆ ಮುಂಚೆ ಬನೀನು, ಪಂಚೆ ಕಳಚಿ ಒಂದು ಕಡೆ ಇಟ್ಟು ಬಚ್ಚಲು ಮನೆಗೆ ಹೋಗಿ ಬಾಗಿಲು ಹಾಕಿಕೊಂಡೆ, ಅದಕ್ಕೆ ಮುಂಚೆ ಲೇ ಒಂದು ತೊಟ್ಟು ಕಾಫಿ ಕೊಡು ಸ್ನಾನಕ್ಕೆ ಹೋಗ್ತೀನಿ ಅಂದೆ. ಅದಕ್ಕೆ ಮುಂಚೆ ಪೇಪರ್ ಓದ್ತಿದ್ದೆ. ಹಾ, ಈಗ ನೆನಪಾಯಿತು. ನೆನ್ನೆ ಪೇಪರಿನಲ್ಲಿ ಬಂದಿದ್ದ ಯಾವುದೋ ಫ್ಲಾಟ್ ವಿವರ ತಿಳ್ಕೊಬೇಕು ಅಂತ. ನೆನ್ನೆ ಪೇಪರ್ ಎಲ್ಲಿಟ್ಟೆ ಅಂತ ಹುಡುಕ್ತಿದ್ದೆ. ಈ ರೀತಿಯ ವ್ಯಾಯಾಮ ಮಾಡಬೇಕಾದರೆ ಅದಕ್ಕೆ ತುಂಬಾ ತಾಳ್ಮೆ ಇರಬೇಕು. ಅದು ಇಲ್ಲದಿದ್ದವರು ಮನೆಯಲ್ಲಿರುವವರನ್ನು ಕೇಳ್ತಾರೆ. ಲೇ ಇವಳೇ ನಾನು ಏನು ಹುಡುಕ್ತಿದ್ದೆ ಅಂತ. ಇಂಥಾ ಮಾತು ಕೇಳಿದವರಿಗೆ ಸಿಟ್ಟು ಬರೋಲ್ವೇ. ಅದಕ್ಕೇ ಅವರು ನಿಮ್ಮ ಮನಸ್ಸಿನಲ್ಲಿ ಏನಿದೆ ಅಂತ ನನಗೇನು ಗೊತ್ತು. ಏನು ಹುಡುಕ್ತಿದೀನಿ ಅಂತ ನನಗೇನಾದರೂ ಹೇಳಿದಿರಾ ಅಂತ ರೇಗ್ತಾರೆ. ಇನ್ನೂ ಕೆಲವು ಕಿಲಾಡಿಗಳು ರೀ ನಿಮ್ಮ ಪರ್ಸ್ ಹುಡುಕ್ತಿದ್ರಿ ಅಂತಾರೆ. ಪರ್ಸೇ ಯಾಕೆ ಅಂತ ಕೇಳಿದರೆ ಇವತ್ತು ಷಾಪಿಂಗ್ ಹೋಗೋಣ ನಿನಗೆ ರೇಷ್ಮೆ ಸೀರೆ ಕೊಡಿಸ್ತೀನಿ ಅಂತ ಹೇಳಿದ್ರಲ್ಲ ಅಂತಾರೆ. ಇಂಥಾ ಉತ್ತರ ಪಡೆಯೋ ಬದಲು ನಮ್ಮ ಕೆಲಸ ನಾವು ಮಾಡ್ಕೊಳೋದು ವಾಸಿ ಅಂತ ಕೆಲವರು ತಾವೇ ನೆನಪು ಮಾಡಿಕೊಂಡು ಹುಡುಕ್ತಾರೆ.

ಹಾಗಾದರೆ ಇಂಥಾ ಹುಡುಕಾಟವನ್ನು ತಡೆಯೋಕೆ ಏನೂ ಉಪಾಯ ಇಲ್ವೇ ಅಂತ ಒಂದು ಸಂಶೋಧನೆ ನಡೆಸಬೇಕು ಅನಿಸುತ್ತೆ. ಹಾಗೆ ಹೊರಟವರಿಗೆ ಏನು ಸಂಶೋಧನೆ ಮಾಡಬೇಕು ಅನ್ನೋದೇ ತಿಳಿಯದೇ ಯಾವುದೋ ಫೈಲುಗಳನ್ನು ಹುಡುಕ್ತಿರ್ತಾರೆ. ಇನ್ನೂ

ಕೆಲವು ಸಾರಿ ಏನೋ ಹುಡುಕೋಕೆ ಹೋದರೆ ಇನ್ನೇನೋ ಸಿಕ್ಕುತ್ತೆ. ಹೀಗೊಂದು ದಿನ ಯಜಮಾನರೊಬ್ಬರು ಮನೆಯ ದಾಖಲೆಗೆ ಸಂಬಂಧಿಸಿದ ಫೈಲು ಹುಡುಕುತ್ತಾ ಆ ಪೇಪರು ಎಲ್ಲಿ ಹೋಯ್ತು ಅಂತ ಹುಡುಕೋ ಕಡೆ ಸಿಗದೇ ಹೋದಾಗ ಇನ್ನೆಲ್ಲಾದರೂ ಇರಬಹುದಾ ಅಂತ ಎಲ್ಲೆಲ್ಲೋ ಹುಡುಕ್ತಿದ್ದಾಗ ಒಂದು ಫೋಟೋ ಅವರ ಕೈಗೆ ಸಿಗಬೇಕೇ. ಅದು ಅವರ ಯೌವ್ವನದ ಗೆಳತಿಯ ಫೋಟೋ. ಅರೇ ಇದು ಇಲ್ಲಿ ಹೇಗೆ ಬಂತು? ಇದು ಇವಳ ಕಣ್ಣಿಗೆ ಬಿದ್ದಿಲ್ವೇ ಅಂತ ಹಳೇ ಗೆಳತಿಯ ನೆನಪು ಕೆದಕುತ್ತಿದ್ದಾಗ ಅವರ ಹೆಂಡತಿಯೇ ಬರಬೇಕೇ. ರೀ ಯಾರ್‍ರೀ ಅದು. ಈಗ ಅವಳ ಫೋಟೋ ಇಟ್ಕೊಂಡು ನೋಡ್ತಿದೀರ ಅಂತ ಕೇಳಿದರು. ಲೇ ಇವಳೇ ಇದು ನೀನು ನನ್ನನ್ನು ಮದುವೆಯಾಗೋಕೆ ಮುಂಚೆ ಬಂದಿದ್ದ ಒಂದು ಹುಡುಗಿಯ ಫೋಟೋ. ನಾನು ಇವಳನ್ನು ಮದುವೆಯಾಗಿದ್ದರೆ ಅದೆಷ್ಟು ಸಂತೋಷವಾಗಿರಬಹುದಾಗಿತ್ತು ಅಂತ ಯೋಚನೆ ಮಾಡ್ತಿದ್ದೆ ಅಂದು ಹೆಂಡತಿಯನ್ನು ಕೆಣಕಿದರು. ಅಷ್ಟಕ್ಕೇ ಅವರ ಹೆಂಡತಿ ಅಳೋಕೆ ಷುರು ಮಾಡಿದರು. ಇವರು ಹೋಗಿ ಅವರನ್ನು ಸಮಾಧಾನ ಮಾಡಿ ತಮಾಷಿಗೆ ಹಾಗಂದೆ ಕಣೆ, ನಾನು ನಿನ್ನ ಜೊತೆ ಸಂತೋಷವಾಗೇ ಇದೀನಿ, ನೀನು ನನ್ನನ್ನು ಸಂತೋಷವಾಗಿ ನೋಡ್ಕೊಂಡಿದೀಯ. ಕಣ್ಣೀರು ಒರೆಸ್ಕೊ ಅಂದಾಗ ಅವರ ಹೆಂಡತಿ ''ನಾನು ಅಳ್ತಿರೋದು ಅದಿಕ್ಕಲ್ಲ. ನಿಮ್ಮನ್ನು ನೋಡೋಕೆ ಮುಂಚೆ ನನಗೂ ಒಂದು ಸಂಬಂಧ ಬಂದಿತ್ತು ಆ ಹುಡುಗ ನಿಮಗಿಂತ ಚೆನ್ನಾಗಿದ್ದ. ಈಗ ಅವನು ಅಮೆರಿಕಾದಲ್ಲಿದಾನೆ. ಅವನಿಗೆ ಮೂರು ಮಕ್ಕಳು. ನಿಮ್ಮನ್ನು ಕಟ್ಕೊಂಡ ನನಗೆ ಒಂದೇ ಮಗು. ಅವನ ಮನೇಲಿ ಮೂರು ಕಾರಿದೆ. ಮೂರು ಸಾವಿರ ಚದರದ ಸ್ವಂತ ಮನೆ ಇದೆ. ನಾನು ಅವನನ್ನು ಮದುವೆಯಾಗಿದ್ರೆ ನನಗೂ ಮೂರು ಮಕ್ಕಳು ಇರೋದು, ಮೂರು ಮೂರು ಕಾರು ಇರೋದು. ಈಗ ನಿಮ್ಮ ಬಳಿ ಇರೋದು ಒಂದು ಲೊಡಕಲಾಸಿ ಸ್ಕೂಟರು ಅಂದು ಸೊರ ಬುಸ ಅಂದರು. ಹುಡುಕಾಟದಲ್ಲಿ ತೊಡಗಿದ್ದ ಅವರಿಗೆ ಇವೆಲ್ಲಾ ಬೇಕಿತ್ತಾ ಅಂತ ತಲೆ ಚಚ್ಚಿಕೊಂಡರು.

ಹುಡುಕಾಟಕ್ಕೂ ಮರೆವಿಗೂ ಅವಿನಾಭಾವ ಸಂಬಂಧ. ಇನ್ನೂ ಒಂದು ಸಂಬಂಧ ಎಂದರೆ ಶಿಸ್ತಿಗೂ ಹುಡುಕಾಟಕ್ಕೂ ಇರೋ ಸಂಬಂಧ. ಒಂದೊಂದು ವಸ್ತುವಿಗೂ ಅದರದೇ ಆದ ಸ್ಥಾನವಿದೆ ಎನ್ನುವ ನಿಯಮದ ಆಧಾರದ ಮೇಲೆ ಆಯಾ ವಸ್ತುಗಳ ಕೆಲಸ ಮುಗಿದ ಮೇಲೆ ಮತ್ತೆ ಅದೇ ಸ್ಥಾನಕ್ಕೆ ಅದು ಹೋಗಬೇಕು. ಅಷ್ಟು ಶಿಸ್ತಾದರೂ ಇರಬೇಕು. ಈ ರೀತಿಯ ಶಿಸ್ತು ಇಲ್ಲದಿದ್ದರೆ ಹುಡುಕಾಟ ತಪ್ಪಿದ್ದಲ್ಲ. ಯಾವುದೇ ವಸ್ತುವನ್ನು ತೆಗೆದುಕೊಂಡರೂ ಅದರ ಕೆಲಸವಾದ ಮೇಲೆ ಅದರ ಸ್ಥಾನಕ್ಕೆ ಸೇರಿಸಿಬಿಟ್ಟರೆ ಹುಡುಕಾಟಕ್ಕೆ ಅವಕಾಶವೇ ಇರೋಲ್ಲ. ಜೊತೇಲಿ ಷಾಪಿಂಗ್ ಹೋಗುವಾಗ ಗಂಡ ಒಂದು ಕಡೆ ಹೆಂಡತಿ ಒಂದು ಕಡೆ ಆಗಿಹೋಗ್ತಾರೆ. ಆಗ ಹೆಂಡತಿಯನ್ನು ಹುಡುಕೋದು ಗಂಡನಿಗೆ ಕಷ್ಟ ಗಂಡನನ್ನು ಯಾವ ಹೆಂಡತಿಯೂ ಹುಡುಕೋಲ್ಲ. ಯಾಕೆಂದರೆ ಎಲ್ಲಿದ್ದರೂ ಅವರು ನನ್ನಲ್ಲಿಗೆ ಬಂದೇ ಬರ್‍ತಾರೆ ಅನ್ನೋ ಗಾಢವಾದ ನಂಬಿಕೆ ಬಹಳ ಮಂದಿ ಹೆಂಗಸರಿಗೆ ಇರುತ್ತೆ. ಆದರೆ ಅಲ್ಲಿ ಇಲ್ಲಿ ಹೋಗಿರುವ ಹೆಂಡತಿಯನ್ನು ಹುಡುಕಬೇಕಾದ ಅನಿವಾರ್ಯತೆ ಕೆಲವು ಗಂಡಸರಿಗೆ ಬರುತ್ತದೆ.

ಒಬ್ಬ ಗಂಡ ಷಾಪಿಂಗ್ ಅಂತ ಮಾಲ್‌ಗೆ ಹೋದಾಗ ಹೆಂಡತಿಗೆ ಹೇಳಿದ. ''ಲೇ ನೀನು ನನ್ನ ಜೊತೇಲೇ ಇರು, ಇಲ್ಲಾ ನಾನು ನಿನ್ನ ಜೊತೇಲೇ ಇರ್‍ತೀನಿ. ಒಟ್ಟಿಗೇ ಷಾಪಿಂಗ್

ಮಾಡೋಣ. ಇಲ್ಲದಿದ್ದರೆ ನಿನ್ನನ್ನು ಹುಡುಕೋದೇ ನನಗೊಂದು ಕೆಲಸ ಆಗಿಹೋಗುತ್ತೆ ಅಂದ. ಅದಕ್ಕೆ ಹೆಂಡತಿ ನಗುತ್ತಾ ''ಅದಿಕ್ಕೆ ಅಷ್ಟೊಂದು ಸೀರಿಯಸ್ ಯಾಕೆ ಆಗ್ತೀರ'' ಅಂದು ಗಂಡನ ಕೈಯನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ''ಈಗ ಷಾಪಿಂಗ್ ಮಾಡೋಣ ಬನ್ನಿ'' ಅಂದು ಕರೆದುಕೊಂಡಳು.

ಸುಮಾರು ಎರಡು ಗಂಟೆ ಷಾಪಿಂಗ್ ಆಗಿರಬಹುದು. ಹೆಂಡತಿ ಸುಮ್ಮನೆ ಒಂದು ಕಡೆ ನಿಂತ್ಕೊತಾಳೆ ಮುಂದಕ್ಕೆ ಹೋಗ್ತಾಳೆ. ಮತ್ತೆ ಇನ್ನೊಂದು ಕಡೆ ಹೋಗ್ತಾಳೆ. ಇನ್ನೊಂದು ಮಹಡಿಗೆ ಹೋಗ್ತಾಳೆ. ಮಾತಿಲ್ಲ ಕಥೆಯಿಲ್ಲ, ಸುಮ್ಮನೆ ನೋಡಿಕೊಂಡು ಏನೂ ಷಾಪಿಂಗ್ ಮಾಡದೇ ಇದ್ದರೆ ನನಗೇ ಲಾಭ ಅಂತ ಗಂಡ ಸುಮ್ಮನೆ ಹೆಂಡತಿ ಕೈ ಹಿಡಿದುಕೊಂಡು ಹೊರಟ. ಸುಮಾರು ಒಂದು ಗಂಟೆಗಳ ಕಾಲ ಹೀಗೆ ಅಲೆದಿರಬಹುದು. ಇನ್ನೊಂದು ಮಹಡಿ ಹತ್ತುತ್ತಿರುವಾಗ ಹೆಂಡತಿ ಮಹಡಿಯ ತುದಿಯಲ್ಲಿ ನಿಂತಿರುವುದು ಗಂಡನಿಗೆ ಗೊತ್ತಾಯಿತು. ಇದೇನು ಈಕೆಯೂ ನನ್ನ ಹೆಂಡತಿಯ ಹಾಗೇ ಇದಾಳಲ್ಲ ಅಂತ ಅಚ್ಚರಿಯಿಂದ ಹಿಡಿದಿರುವ ಕೈ ಯಾರದು ಅಂತ ನೋಡಿದರೆ ಅದು ಇನ್ಯಾರೋ ಹೆಂಗಸಿನದು. ಆ ಹೆಂಗಸು ಇವರನ್ನು ನೋಡಿ ನಕ್ಕಿದ್ದೂ ನಕ್ಕಿದ್ದೇ. ಅಂದ್ರೆ ಇಷ್ಟೂ ಹೊತ್ತು ನಾನು ಹಿಡಿದುಕೊಂಡು ಓಡಾಡಿದ್ದು ಈ ಹೆಂಗಸಿನ ಕೈನೇ ಅನಿಸಿದಾಗ ಗಾಬರಿಯೂ ಆಯಿತು.

ಆ ಹೆಂಗಸು ಅವರ ಹೆಂಡತಿಯನ್ನು ನೋಡಿ ''ಮೇಡಂ ನಿಮ್ಮ ಯಜಮಾನರು ಬಹಳ ರಸಿಕರು. ನಾನು ಷಾಂಪೂ ತಗೊಳ್ಬೇಕು ಅಂತ ನೋಡ್ತಿದ್ದಾಗ ಬಂದು ನನ್ನ ಕೈ ಹಿಡ್ಕೊಂಡ್ರು. ನಾನು ಯಾರೋ ಪಾಪ ಅಂತ ಸುಮ್ಮನಿದ್ದೆ. ನಂತರ ನಾನು ಹೋದ ಕಡೆಯಲ್ಲೆಲ್ಲಾ ಅವರು ಸುಮ್ಮನೇ ಬರುತ್ತಿದ್ದರು. ನಾನೂ ಇರಲಿ ಎಷ್ಟು ಹೊತ್ತು ಈ ಷೋಕೆ ನಡೆಯುತ್ತೆ ಅಂತ ಸುಮ್ಮನಿದ್ದೆ. ಆದರೆ ನಿಮ್ಮ ಯಜಮಾನರು ತುಂಬಾ ಒಳ್ಳೆಯವರು ಸುಮ್ಮನೆ ನನ್ನ ಕೈಯನ್ನು ಹಿಡಿದುಕೊಂಡಿದ್ದರೇ ಹೊರತು ಅದುಮೋದು, ಚಿವುಟೋದು ಏನೂ ಮಾಡ್ಲಿಲ್ಲ, ಪಾಪ ಅವರಿಗೆ ನಾನು ನನ್ನ ಹೆಂಡತಿಯ ಕೈ ಹಿಡ್ಕೊಂಡು ಇದೀನಿ ಅನಿಸಿತ್ತು'' ಅಂದು ನಕ್ಕರು. ಗಂಡ ಪೆಚ್ಚಾದ. ಎದುರಿಗಿರುವ ಹೆಂಡತಿ ಪಕ್ಕದಲ್ಲಿರುವ ಹೆಂಗಸು ಇಬ್ಬರನ್ನೂ ನೋಡಿದ. ಇದ್ಯಾಕೆ ಹೀಗಾಯ್ತು ಅಂತ ಅವನಿಗೇ ತಿಳಿಯಲಿಲ್ಲ. ಹೆಂಡತಿ ಒಮ್ಮೆ ಕಣ್ಣು ಕೆಂಪು ಮಾಡಿಕೊಂಡರೆ ಇನ್ನೊಮ್ಮೆ ಜೋರಾಗಿ ನಕ್ಕಳು. ಆ ಹೆಂಗಸಿಗೆ ಕ್ಷಮಿಸಿ ಮೇಡಂ ಅಂದಳು. ಆ ಹೆಂಗಸು ''ಪರವಾಗಿಲ್ಲ ನಿಮ್ಮ ಯಜಮಾನರನ್ನು ಕೈ ಹಿಡ್ಕೊಂಡು ಮನೆಗೆ ಕರ್ಕೊಂಡು ಹೋಗಿ ಇಲ್ಲದಿದ್ದರೆ ಇನ್ಯಾರದ್ದಾದರೂ ಕೈ ಹಿಡ್ಕೊಂಡು ಅವರ ಮನೆಗೆ ಹೊರಟು ಹೋಗಿಯಾರು'' ಅಂದು ನಕ್ಕು ಹೊರಟಳು.

ಗಂಡ ಹುಸಿ ಮುನಿಸಿನೊಂದ ''ಲೇ ಎಲ್ಲಾ ನಿನ್ನಿಂದಲೇ ಆಗಿದ್ದು, ನೀನ್ಯಾಕೆ ನನ್ನ ಕೈ ಬಿಟ್ಟು ಮುಂದೆ ಹೋದೆ'' ಅಂದು ತುಟಿ ಊದಿಸಿದ.

ಇದೊಂದು ಉದಾಹರಣೆ ಅಷ್ಟೆ. ಇಂಥಾ ಹುಡುಕಾಟಗಳು ಜೀವನದಲ್ಲಿ ಅದೆಷ್ಟೋ. ಈಗ ನೀವು ನಿಮ್ಮ ಜೀವನದಲ್ಲಿ ಎಂಥೆಂಥಾ ಹುಡುಕಾಟ ನಡೆಸಿದೀರ ಅಂತ ನೆನಪಿಸ್ಕೊಳ್ಳಿ.

❑